ಅಧ್ಯಕ್ಷರು :- ವರದಿಯನ್ನು ಒಪ್ಪಿಸಲಾಗಿದೆ.

6) **ವಿತ್ತೀಯ ಕಾರ್ಯ ಕಲಾಪ.**

1996-97 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ.

+ **ಶ್ರೀ ಟಿ. ಎಸ್. ಜಯವಂತ್ (ಸಿರಸಿ)** :- ಅಧ್ಯಕ್ಷರೇ, 1996-97 ನೇ ಸಾಲಿನ ಬೇಡಿಕೆ ಮೇಲೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮ್ಮನ್ನು ಅಭಿನಂದಿಸುತ್ತಾ

(ಶ್ರೀ ಚಂದ್ರಕಾಂತ ಜಿ. ಬೆಲ್ಲದ್‌ಅವರು ಪೀಠವನ್ನಲಂಕರಿಸಿದರು)

19 ಬೇಡಿಕೆಗಳಲ್ಲಿ ಕೆಲವು ಬೇಡಿಕೆ ಬಗ್ಗೆ ನ್ಯೂನತೆಗಳ ಕುರಿತು ಕೆಲವು ಸಲಹೆ ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಪ್ರಥಮವಾಗಿ ನಗರಾಭಿವೃದ್ಧಿ ಇಲಾಖೆಯ ಬೇಡಿಕೆ ಬಗ್ಗೆ. . ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಬಹುತೇಕ ನಗರಸಭೆ ಪುರಸಭೆಗಳ ಆರ್ಥಿಕ ಪರಿಸ್ಥಿತಿ ಬಹಳಷ್ಟು ಚಿಂತಾಜನಕವಿದ್ದು ಅವು ತಮ್ಮ ಸಿಬ್ಬಂದಿ ವೇತನ ಬಟವಾಡೆ ಮಾಡದಿರುವಂತಹ ಪರಿಸ್ಥಿತಿ ಇದೆ. ಸಾಮಾನ್ಯವಾಗಿ ನಗರಸಭೆ ಪುರಸಭೆಗಳಲ್ಲಿ ಪ್ರತಿಶತ 60 ಜನ ವಾಸಿಸುತ್ತಿದ್ದು ಅವರ ಪ್ರಾಥಮಿಕ ಸೌಲಭ್ಯಗಳನ್ನು ನಗರಸಭೆ ಪುರಸಭೆಗಳು ಪೂರೈಸಬೇಕಾಗುತ್ತದೆ. ಇವತ್ತಿನ ವಾತಾವರಣ ನೋಡಿದಾಗ ಪ್ರಾಥಮಿಕ ಸೌಲಭ್ಯ ಪೂರೈಸಲಾರದ ಪರಿಸ್ಥಿತಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಕ್ಷರ ಮೂಲಕ ನಾನು ಸಚಿವರಲ್ಲಿ ವಿನಂತಿಸುತ್ತೇನೆ. ತಾವು ಇದರ ಬಗ್ಗೆ ಚಿಂತನೆ ಮಾಡಿ ಹೆಚ್ಚಿನ ಸವಲತ್ತುಗಳನ್ನು ಸಾರ್ವಜನಿಕರಿಗೆ ಒದಗಿಸುವಲ್ಲಿ ಕಟಿಬದ್ಧರಾಗಬೇಕಾಗಿದೆ. ನಗರ ಸಭೆ ಪುರಸಭೆಗಳ ಬಹುತೇಕ ಕುಡಿಯುವ ನೀರಿನ ಅಥವಾ ಒಳಚರಂಡಿ ಯೋಜನೆ ಗಳಿರಲಿ ಇವನ್ನೆಲ್ಲಾ ಕೆಯುಡಬ್ಲ್ಯುಎಸ್ ಇಲಾಖೆ ಮಾಡುತ್ತದೆ. ಆದರೆ ಕೆಯುಡಬ್ಲ್ಯುಎಸ್ ನಗರಸಭೆಪುರಸಭೆಗಳ ಮತ್ತು ನಗರಾಭಿವೃದ್ಧಿ ಇಲಾಖೆಗಳವರಲ್ಲಿ ಹೊಂದಾಣಿಕೆ ಇಲ್ಲದಿರುವುದರಿಂದ ಸರಿಯಾದ ವೇಳೆಗೆ ಯಾವುದೇ ಕೆಲಸಗಳಾಗದೆ ನಗರಕ್ಕೆ ಬಹಳ ತೊಂದರೆಯಾಗುತ್ತಿದೆ. ಉದಾಹರಣೆಗೆ ನನ್ನ ಕ್ಷೇತ್ರ ಸಿರಸಿಯಲ್ಲಿ 1986 ರಲ್ಲಿ 2 ನೇ ಹಂತದ ನೀರಿನ ಯೋಜನೆ ಪ್ರಾರಂಭವಾಯಿತು. ಅದು 60 ಲಕ್ಷದ ಯೋಜನೆ. ಇವತ್ತು ಒಂದು ಕೋಟಿ ಕೊಟ್ಟಿದ್ದರೂ ಆ ಕೆಲಸ ಪೂರ್ತಿ ಮಾಡಲಿಕ್ಕೆ ಆಗಲಿಲ್ಲ. ಮೊನ್ನೆ ಅಧಿಕಾರಿಗಳು ಹೇಳಿದರು ಮಾರ್ಚ್ 31ಕ್ಕೆ ಮುಕ್ತಾಯ ಮಾಡಿಕೊಡುತ್ತೇವೆಂದು. ಆದರೂ ಆಗಲಿಲ್ಲ. ನಾನು ಪ್ರಶ್ನೆ ಕೇಳಿದರೂ ಅಧಿಕಾರಿಗಳು ನಿರ್ಲಕ್ಷ್ಯದಿಂದ ಬೇಜವಾಬ್ದಾರಿ ಉತ್ತರ ಕೊಟ್ಟು ನಮ್ಮನ್ನು ತಪ್ಪುದಾರಿಗೆಳೆಯುತ್ತಾರೆ. ನಮ್ಮ ಕ್ಷೇತ್ರದಲ್ಲೆ ಒಳಚರಂಡಿ ಯೋಜನೆ ಪ್ರಾರಂಭವಾಗಿ 29 ವರ್ಷವಾದರೂ ಇನ್ನೂ ಕಾರ್ಯಾರಂಭಗೊಳ್ಳಲಿಲ್ಲ. ಇದು ದುರದೃಷ್ಟ. 37ಲಕ್ಷದ ಯೋಜನೆ ಪೂರ್ತಿಯಾಗದೆ ಇಡೀ ನಗರದ ಜನತೆ ಕಷ್ಟದಲ್ಲಿದ್ದಾರೆ. ಸ್ವಚ್ಛತೆ ಅಸ್ತವ್ಯಸ್ತವಾಗಿದೆ. ಆ ಯೋಜನೆ ಪೂರ್ಣಗೊಳ್ಳದೆ ನಗರಸಭೆಯಿಂದ 28 ಲಕ್ಷ ಆಗಲೇ ಮುರಿದುಕೊಂಡಿದ್ದಾರೆ. ಇಂತಹ ಅವ್ಯವಸ್ಥೆ ಅಸಮರ್ಪಕ ಆಡಳಿತವಾದರೆ ಜನತೆಗೆ ಬಹಳ ಕಷ್ಟವಾಗುತ್ತದೆ. ಈ ದಿಸೆಯಲ್ಲಿ ತಾವು ಚಿಂತನೆ ಮಾಡಬೇಕು. ಅಧ್ಯಕ್ಷರೇ,

ಈಗ ಪ್ರತಿ ನಗರಸಭೆ ಪುರಸಭೆಯವರೂ 10 ಲಕ್ಷಕ್ಕೂ ಮೇಲ್ಪಟ್ಟು ಹಣವನ್ನು ಕೆಇಬಿಗೆ ಕೊಡಬೇಕು. ಹಲವಾರು ಸಾವಿರ ಕೋಟಿ ರೂಪಾಯಿಗಳು ಕೆಇಬಿಗೆ ಬರಬೇಕು. ಕೆಇಬಿ ಮೂಲಕ ಯಾವುದೇ ಕೆಲಸವನ್ನು ಪುರಸಭೆಗೆ ಮಾಡಿಸಿಕೊಳ್ಳಬೇಕಾದರೆ ಸಾಧ್ಯಾವಾಗುತ್ತಿಲ್ಲ. ಒಂದು ಕಂಬ ನಿಲ್ಲಿಸುವುದಿರಲಿ ಅಥವಾ ಬೀದಿದೀಪ ಹಾಕುವುದಿರಲಿ ಟ್ಯೂಬ್ ಹಾಕುವುದಿದ್ದರೂ ಕೆಇಬಿ ಯಾವುದೇ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಕೆಇಬಿ ಕೇಂದ್ರ ಕಛೇರಿಯಿಂದ ಅವರಿಗೆ ಆದೇಶ ಬಂದಿದೆ. ಯಾವುದೇ ನಗರಸಭೆ ಕೆಲಸ ಪ್ರಾರಂಭಿಸ ಬೇಡಿ. ಆದ್ದರಿಂದ ಅಧ್ಯಕ್ಷರ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಕೆಇಬಿಇಂದ ಒಂದು ಆದೇಶವನ್ನು ಎಲ್ಲಾ ನಗರಸಭೆ ಪುರಸಭೆಗಳಿಗೆ ಕೊಟ್ಟು ಇನ್ನು ಮುಂದಿನ ಕೆಲಸ ಮಾಡುವಾಗ ಹಣ ತೆಗೆದುಕೊಂಡು ಕೆಲಸ ಮಾಡಬೇಕು ಸಾರ್ವಜನಿಕರಿಗೆ ತೊಂದರೆಯಾಗದಂತೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಪುರಸಭೆ ನಗರಸಭೆ ಅಥವಾ ನಗರಪಾಲಿಕೆಗಳು ಯಾವುದೇ ನೌಕರನನ್ನೂ ನೇಮಕ ಮಾಡಿಕೊಳ್ಳುವ ಅವಕಾಶಗಳಿಲ್ಲ. ಒಬ್ಬ ಪೌರ ಕಾರ್ಮಿಕರನ್ನು ನೇಮಿಸುವ ಅವಕಾಶ ಇಲ್ಲದಿರುವುದರಿಂದ ಆ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟರೆ ಅವರು ನೇಮಕ ಮಾಡಿಕೊಂಡು ಪೌರಕಾರ್ಮಿಕರನ್ನು ಉಪಯೋಗಿಸಿಕೊಂಡು ಸ್ವಚ್ಛತೆಯನ್ನು ಕಾಪಾಡಿ ಉತ್ತಮ ನಗರ ಮಾಡಲು ಉತ್ತಮ ಅವಕಾಶವಾಗುತ್ತದೆ ಎಂಬ ವಿಚಾರ ತಮ್ಮ ಮುಂದಿಡಲು ಇಚ್ಛಿಪಡುತ್ತೇನೆ. ಅಲ್ಲದೆ ನಗರಸಭೆಯಲ್ಲಿ ಸರ್ಕಾರದ ಹಲವು ಭೂಮಿ ಇರುತ್ತದೆ, ಆಡಳಿತ ವರ್ಗ ಇರುತ್ತದೆ, ಅಧಿಕಾರಿಗಳು ಸೇರಿಕೊಂಡು ಲೀಸ್ ಮೇಲೆ ಕೊಡುವಂತಹ ಪರಿಪಾಠ ಇದೆ. ಅಂತಹ ಪರಿಪಾಠವನ್ನು ನಾವು ಕಡಿಮೆ ಮಾಡಬೇಕು. ಸಾರ್ವಜನಿಕ ಉಪಯೋಗಕ್ಕಾದರೆ ಲೀಸ್ ಕೊಡಬಹುದು. ಆದರೆ ವೈಯಕ್ತಿಕ ಜನರಿಗೆ ಕೊಟ್ಟು ಅಲ್ಲಿ ಖಾಸಗಿ ಕಟ್ಟಡಗಳನ್ನು ಕಾಂಪ್ಲೆಕ್ಸ್ ಕಟ್ಟಿ ನಗರಸಭೆಗೆ ಬರುವ ಆದಾಯ ವನ್ನು ಸಂಪೂರ್ಣ ಹಾಳು ಮಾಡುತ್ತಾರೆ. ಆ ದಿಸೆಯಲ್ಲೂ ನಾವು ವಿಚಾರ ಮಾಡ ಬೇಕಾಗಿದೆ. 1995-96 ನೇ ಸಾಲಿಗೆ ನಗರಸಭೆಗಳಿಗೆ ಹೌಸಿಂಗ್ ಯೋಜನೆ ಹೆಚ್ಚಾಗಿ ಕೊಟ್ಟಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು ಮುಂದೆ ಹೆಚ್ಚಿನ ಪ್ರಮಾಣದಲ್ಲಿ ವಸತಿ ಯೋಜನೆಗಳನ್ನು ನಗರಕ್ಕೆ ಕೊಡುವಲ್ಲಿ ಪ್ರಯತ್ನ ಮಾಡಬೇಕು. ಈಗ ನಗರಸಭೆಯಿಂದ 18 ಪರ್ಸೆಂಟ್‌ನಂತೆ ಪರಿಶಿಷ್ಟ ಜಾತಿ ಪಂಗಡಗಳಿಗೆ ಅನುದಾನ ಕೊಡುತ್ತಾರೆ. ಅದನ್ನೂ ಸಮರ್ಪಕವಾಗಿ ಹಲವಾರು ಪುರಸಭೆನಗರಸಭೆಗಳಲ್ಲಿ ಕೊಡದಿರುವುದರಿಂದ ಆ ವರ್ಗದ ಜನರಿಗೆ ಬಹಳ ಅನ್ಯಾಯವಾಗಿದೆ.

2-10 ಪಿ. ಎಂ.

ಇದರ ಬಗ್ಗೆ ಸರಕಾರ ಹೆಚ್ಚಿನ ಕಾಳಜಿ-ಯನ್ನೂ ಸಹ ಸರಕಾರ ವಹಿಸಬೇಕು. ಈ ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕಾದರೆ ನಾವು ಸಂಪನ್ಮೂಲವನ್ನು ಕ್ರೋಢೀಕರಿಸಿಕೊಳ್ಳ ಬೇಕಾಗುತ್ತದೆ. ಸಂಪನ್ಮೂಲಗಳ ಕೊರತೆ ಇವತ್ತು ಇರುವುದರಿಂದ ಈ ಎಲ್ಲಾ ಸಮಸ್ಯೆಗಳು ಹುಟ್ಟಿಕೊಂಡಿದೆ. ಒಂದು ಏಕ ರೂಪವಾದ ಕಾನೂನುಗಳನ್ನು ಮಾಡಬೇಕಾಗಿದೆ. ಪುರಸಭೆ ನಗರಸಭೆ, ಮಹಾನಗರಸಭೆಗಳ ಆದಾಯದ ಮಿತಿಯಲ್ಲಿ ಅಂದರೆ ಆ ಆದಾಯದ ಮಿತಿ ಮನೆ ಕರ ಇರಲಿ, ನೀರಿನ ಕರ ಇರಲಿ, ಲೈಸನ್ಸ್ ಫೀ ಇರಲಿ ಅಭಿವೃದ್ಧಿ

ಕರ ಇರಲಿ ಯಾವುದೇ ರೀತಿಯ ಕರಗಳು ಇದ್ದಾಗ್ಯೂ ಸಹ ಅದಕ್ಕೆ ಏಕ ರೀತಿಯ ಕಾನೂನು ಮಾಡಿದಾಗ ಒಂದು ವ್ಯವಸ್ಥಿತ ರೀತಿಯಿಂದ ಆದಾಯ ಬರುತ್ತದೆ. ಆದರಿಂದಾಗಿ ನಗರವನ್ನು ಉತ್ತಮವಾಗಿ ಇಡಲಿಕ್ಕೆ ಅವಕಾಶವಾಗುತ್ತದೆ. ಈ ದಿಸೆಯಲ್ಲಿ ಸರಕಾರ ವಿಚಾರ ಮಾಡಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಮಟ್ಟಿಗೆ ಅರಣ್ಯ ಬರುತ್ತಿದೆ. ಅದರಲ್ಲಿ ಕೆಲವು ಭಾಗವನ್ನು ನಗರ ಸಭೆಗೆ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದರಂತೆ ಎಪಿಎಂ ಮಾರ್ಕೆಟ್ ಯಾರ್ಡ್ ಮೂಲಕ ಅಲ್ಲಿ ಬರುವಂತಹ ಆದಾಯದಲ್ಲಿ ಕೆಲವು ಪ್ರಮಾಣವನ್ನು ನಗರ ಸಭೆಗೆ ಕೊಟ್ಟರೆ ಉತ್ತಮವಾಗಿ ಒಂದು ಸುಭದ್ರವಾದ ನಗರ ಸಭೆ ಮಾಡಿ ಜನರಿಗೆ ಹೆಚ್ಚಿನ ಸವಲತ್ತುಗಳನ್ನು ಪ್ರಾಥಮಿಕ ಸವಲತ್ತುಗಳನ್ನು ಜನರಿಗೆ ಒದಗಿಸಲಿಕ್ಕೆ ಸಾಧ್ಯವಾಗುತ್ತದೆ ಎಂಬ ವಿಚಾರವನ್ನು ತಮ್ಮ ಮೂಲಕ ತಿಳಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಜಕಾತಿ ಆಕ್ಟ್ರಾಯ್ ನಮ್ಮಲ್ಲಿ ಬಂದ್ ಆದ ನಂತರ ಎಲ್ಲಾ ನಗರ ಸಭೆಗಳು ಬಹಳ ಕಷ್ಟದಲ್ಲಿವೆ. ಆಕ್ಟ್ರಾಯ್ ಇದ್ದಾಗ ಆದಾಯ ಜಾಸ್ತಿಯಾಗಿ ಉತ್ಪನ್ನ ರೀತಿಯಲ್ಲಿ ಇನ್‌ಕಂ ಬರುತ್ತಿತ್ತು. ಹೊಸದಾಗಿ ಆಕ್ಟ್ರಾಯ್‌ಯನ್ನು ನಾವು ಇಂಟ್ರಡ್ಯೂಸ್ ಮಾಡುವುದರಿಂದ ಉದ್ಯೋಗವನ್ನು ಸೃಷ್ಟಿ ಮಾಡಬಹುದು ಮತ್ತು ಹೆಚ್ಚಿನ ಆದಾಯವನ್ನೂ ಸಹ ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಬಹುತೇಕ ನಗರಸಭೆ, ಪುರಸಭೆಗಳಲ್ಲಿ ಎಲ್ಲಾ ವ್ಯಾಪಾರಗಳು ಎರಡನೆಯ ದರ್ಜೆಯ ವ್ಯಾಪಾರಗಳಾಗಿ ಪ್ರಾರಂಭವಾಗಿವೆ. ಕೊಡುವಂತಹ ಸೇಲ್ಸ್ ಟ್ಯಾಕ್ಸ್ ಕೊಡುತ್ತಿಲ್ಲ. ಕೊಡುವಂತಹ ಎಂಟ್ರಿ ಟ್ಯಾಕ್ಸ್ ಕೊಡುತ್ತಿಲ್ಲ. ಇಂತಹ ವ್ಯವಸ್ಥೆ ಈ ಆಕ್ಟ್ರಾಯ್ ಬಂದ್ ಮಾಡಿದ್ದರಿಂದ ಹೆಚ್ಚಾಗಿದೆ. ನಮ್ಮ ಒಂದು ಜಿಲ್ಲೆಯಲ್ಲಿ ಈ ಅಡಕೆಗೆ ಬರುವಂತಹ ಕೋಟ್ಯಾಂತರ ರೂಪಾಯಿ ಆದಾಯ ಸೋರಿ ಹೋಗುತ್ತಿದೆ. ಇದಕ್ಕೆಲ್ಲಾ ಕಡಿವಾಣ ಹಾಕಲಿಕ್ಕೆ ಮತ್ತು ಸರಕಾರಕ್ಕೆ ಬರುವಂತಹ ಆದಾಯ ಜಾಸ್ತಿ ಮಾಡಿಕೊಂಡು ಪುರಸಭೆ ನಗರಸಭೆಗಳನ್ನು ಆರ್ಥಿಕವಾಗಿ ಸಂಪನ್ನ ಮಾಡಲಿಕ್ಕೆ ಈ ದಿಶೆಯಲ್ಲಿ ಹೆಚ್ಚಿನ ಪ್ರಯತ್ನ ಮಾಡಬೇಕು. ಕಳೆದ ವರ್ಷ ಸರಕಾರದವರು 28 ಕೋಟಿ ರೂಪಾಯಿಗಳನ್ನು ನಗರದ ಅಭಿವೃದ್ಧಿಗೆ ಪ್ರಥಮ ಬಾರಿಗೆ ಕೊಟ್ಟು ನಮ್ಮ ಜಿಲ್ಲೆಯ 175 ತಾಲ್ಲೂಕುಗಳಲ್ಲಿ ಅಭಿವೃದ್ಧಿಯಾಗಿ ಒಂದು ಪಕ್ಷಾತೀತವಾದ ಈ ಧೋರಣೆಯಿಂದ ಈ ಕೆಲಸವನ್ನು ಮಾಡಿದ್ದಕ್ಕಾಗಿ ನಾನು ವೈಯಕ್ತಿಕವಾಗಿ ಸರಕಾರವನ್ನು ಅಭಿನಂದಿಸುತ್ತೇನೆ. ಅದರಂತೆ ಈಗ ಬಡವರಿಗೆ ಕೊಡುತ್ತಿರುವ ಹಸಿರು ಕಾರ್ಡ್ ಕೊಡುವ ಯೋಜನೆ ಪ್ರಾರಂಭ ಮಾಡಿದ್ದಾರೆ. ಈಗಾಗಲೇ ಬಹಳಷ್ಟು ಜನರಿಗೆ ಕೊಟ್ಟಿದ್ದಾರೆ. ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಬಡವರ ಬಗ್ಗೆ ಹೆಚ್ಚಿನ ಕೆಲಸವನ್ನು ಮಾಡಲಿಕ್ಕೆ ಸರಕಾರ ಅವಕಾಶ ಕಲ್ಪಿಸಿ ಕೊಟ್ಟಿದೆ. ಇದಕ್ಕೂ ನಾವು ಧನ್ಯವಾದಗಳನ್ನರ್ಪಿಸ ಬೇಕಾಗುತ್ತದೆ. ಅದರ ಜೊತೆಗೆ ನಗರಸಭೆ ಮೂಲಕ ನಿವೇಶನ ಹಂಚಿಕೆ ಕಾರ್ಯಕ್ರಮ ಪ್ರಾರಂಭವಾಗಿದೆ. ಅದಕ್ಕೆ ಇನ್ನೂ ಹೆಚ್ಚಿನ ಒತ್ತು ಕೊಟ್ಟು ಬಡಬಗ್ಗರ ಸಲುವಾಗಿ ಹೆಚ್ಚಿನ ಕೆಲಸ ಮಾಡಿದ್ದಕ್ಕೆ, ಸರಕಾರ ಪ್ರಯತ್ನ ಮಾಡಿದ್ದಕ್ಕೆ ಸರಕಾರವನ್ನು ಅಭಿನಂದಿಸುತ್ತೇನೆ. ಇನ್ನು ಎರಡನೆಯದಾಗಿ, ಶಿಕ್ಷಣ ಇಲಾಖೆಯ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಲು ನಾನು ಪ್ರಯತ್ನ ಮಾಡುತ್ತೇನೆ. ಶಿಕ್ಷಣ ಮಟ್ಟ, ಪ್ರಾಥಮಿಕ ಶಿಕ್ಷಣ ಮಟ್ಟ ಇಂದು ಬಹಳ ಕುಂಠಿತವಾಗುತ್ತಿದೆ. ಕೆಳಮಟ್ಟದಲ್ಲಿ ಹೋಗುತ್ತಿದೆ. ಇದಕ್ಕೆ ಹಲವಾರು

ಕಾರಣಗಳು ಇದೆ. ಇದನ್ನು ಮುಖ್ಯವಾಗಿ ಸರಿಪಡಿಸಬೇಕಾಗಿದೆ. ವಯಸ್ಕರ ಶಿಕ್ಷಣ ಯಾವ ರೀತಿಯ ಸಾಧನೆ ಮಾಡುತ್ತಿದೆ; ಏನು ಕೆಲಸ ಮಾಡುತ್ತಿದೆ; ಇದಕ್ಕೆ ನಾವು ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ ಇದರಿಂದ ನಮಗೆ ಏನಾದರೂ ಪ್ರತಿಫಲ ಇದೆಯೇ ಅಥವಾ ಇದಕ್ಕೆ ತಗಲುವ ವೆಚ್ಚ ಎಷ್ಟು ಇದರ ಬಗ್ಗೆ ಮರುಚಿಂತನೆ ಮಾಡುವಂತಹ ದಿನಗಳು ಬಂದಿವೆ. ಇದರ ಬಗ್ಗೆ ಹೆಚ್ಚಿನ ಗಮನ ಇಟ್ಟುಕೊಂಡು ಇದರ ಸಾಧಕಬಾಧಕಗಳನ್ನು ತಿಳಿದುಕೊಂಡು ಈ ಕಾರ್ಯಕ್ರಮ ಮುಂದು ವರೆಸಬೇಕೇ ಅಥವಾ ಬೇಡವೇ ಎಂಬುದನ್ನು ಸರಕಾರ ಚಿಂತನೆ ಮಾಡಬೇಕು ಎಂದು ತಮ್ಮ ಮೂಲಕ ಸರಕಾರವನ್ನು ಕೇಳುತ್ತೇನೆ.

ಶ್ರೀ ಯು. ಆರ್. ಸಭಾಪತಿ :- ಮಾನ್ಯ ಸಭಾಧ್ಯಕ್ಷರೇ, ಕೋರಂ ಇದ್ದ ಹಾಗೆ ಕಾಣುತ್ತಿಲ್ಲ ಸಭೆ ನಡೆಸಲಿಕ್ಕೆ ಕೋರಂ ಬೇಕಲ್ಲಾ.

ಚೇರ್ಮನ್ :- ಕೋರಂ ಇದೆ.

ಶ್ರೀ ಪಿ. ಎಸ್. ಜಯವಂತ್ :- ಹಾಗೆ ಈಗ ಸಾಕ್ಷರತಾ ಆಂಧೋಲನ ಏನು ಇದೆ ಇದು ಕೇಂದ್ರ ಸರಕಾರದ ಪುರಸ್ಕೃತ ಯೋಜನೆ ಆದರೂ ಸಹ ಇದರಿಂದ ಜನರಿಗೆ ಅಷ್ಟೇನೂ ಪ್ರಯೋಜನ ಇಲ್ಲ. ಕೇಂದ್ರ ಸರಕಾರದಿಂದ ಹಣ ಬರುತ್ತಿದೆ. ಆದನ್ನು ನಾವು ನಿಷ್ಪ್ರಯೋಜಕವಾದ ರೀತಿಯಿಂದ ಖರ್ಚು ಮಾಡುವಂತಹ ವ್ಯವಸ್ಥೆಯಾಗಿದೆ. ಆದಕಾರಣ ಈ ಸಾಕ್ಷರತಾ ಆಂಧೋಲನದ ಬಗ್ಗೆ ಮರು ಚಿಂತನೆ ಮಾಡಬೇಕಾಗಿದೆ. ಕೇಂದ್ರ ಸರಕಾರದಿಂದ ಬಂದಂತಹ ಹಣ, ನಾವು ಇದಕ್ಕೆ ಖರ್ಚು ಮಾಡಿದಂತಹ ಹಣ ಇವೆರಡೂ ಸರಿಯಾಗಿ ಪ್ರಾಥಮಿಕ ಮಕ್ಕಳಿಗೆ ಮುಟ್ಟುವಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ರೀತಿಯಲ್ಲಿ ನಾವು ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ.

ಶ್ರೀ ಯು. ಆರ್. ಸಭಾಪತಿ :- ಈಗ ಸದನದಲ್ಲಿ 21 ಜನರು ಇದ್ದಾರೆ. ಕೋರಂ ಇಲ್ಲ. ಕೋರಂಗೆ ಕನಿಷ್ಠ 23 ಜನರು ಇರಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಈ ರಾಜ್ಯದ ಜನರಿಗೆ ತಿಳಿಯಲಿ. ಆಡಳಿತ ಪಕ್ಷದವರಿಗೆ ಕೋರಂ ಇರುವಷ್ಟು ಮಂದಿ ಅಂದರೆ 23 ಮಂದಿ ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುತ್ತಿಲ್ಲ. ನೀವು ಹೇಳಬಹುದು ವಿರೋಧ ಪಕ್ಷದವರೂ, ಸೇರಿದ್ದಾರೆ ಎಂದು. ಇದುವರೆಗೆ ನಾವುಗಳು ಕುಳಿತಿದ್ದೆವು : ದಿನವೂ ಸಭೆಯಲ್ಲಿ ಸಾಕಷ್ಟು ಮಂದಿಯಲ್ಲಿ ಕುಳಿತು ನಾವೇ ಸಭೆ ನಡೆಸುತ್ತಿರುವುದು ಆಡಳಿತ ಪಕ್ಷದವರು ಇರುತ್ತೀರೋ ಇಲ್ಲವೋ ನಾವು ಇರುತ್ತೇವೆ. ಸಭೆ ನಡೆಸಲಿಕ್ಕೆ ಆಡಳಿತ ಪಕ್ಷಕ್ಕೆ ಆಸಕ್ತಿ ಇಲ್ಲ ಎಂದು ಪತ್ರಿಕೆಯ ಮೂಲಕ ಈ ರಾಜ್ಯದ ಜನರಿಗೆ ಗೊತ್ತಾಗಲಿ. ಪ್ರತಿನಿತ್ಯ ನಾವೇ ಯಾವಾ ಗಲೂ ಸಾಕಷ್ಟು ಮಂದಿ ಇದ್ದು ಸಭೆ ನಡೆಸುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ :- ಸರಕಾರಕ್ಕೆ ಸಭೆ ನಡೆಸಲಿಕ್ಕೆ ಆಸಕ್ತಿ ಇಲ್ಲ ಜವಾಬ್ದಾರಿ ಇಲ್ಲವೆನ್ನುವ ಪ್ರಶ್ನೆ ಇಲ್ಲ. ಊಟದ ವೇಳೆಯಾದ್ದರಿಂದ ಕೆಲವರು ಹೊರಗಡೆ ಹೋಗಿದ್ದಾರೆ.

ಶ್ರೀ ಯು. ಆರ್. ಸಭಾಪತಿ :- ಇದು ಖಂಡಿತವಾಗಿ ಸರಿಯಲ್ಲ. ಪತ್ರಿಕೆಯವರು ಇದನ್ನು ಬರೆದರೆ ಜನರಿಗೆ ಏನು ಅಭಿಪ್ರಾಯ ಬರುತ್ತದೆಂಬುದನ್ನು ವಿಚಾರ ಮಾಡಿ.

ಶ್ರೀ ಕೆ. ಎಸ್. ಈಶ್ವರಪ್ಪ :- 19 ಇಲಾಖೆಗಳ ಬೇಡಿಕೆ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದೆ. ಮೂರನೇಯ ಒಂದು ಭಾಗದಷ್ಟು ಮಂತ್ರಿಗಳು ಇಲ್ಲಿ ಇಲ್ಲ. 6 ಜನ ಮಂತ್ರಿಗಳು ಇಲ್ಲ. ಉಪ ಮುಖ್ಯಮಂತ್ರಿಗಳು ಇದ್ದರೆ 19 ಜನ ಇದ್ದ ಹಾಗಾಗುತ್ತದೆಯೇ?

ಒಬ್ಬ ಮಾನ್ಯ ಸದಸ್ಯರು :- ಬೆಳಗಿನಿಂದ ಮಂತ್ರಿಗಳೆಲ್ಲಾ ಇಲ್ಲಿಯೇ ಇದ್ದರು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಬೆಳಿಗ್ಗೆಯಿಂದ ಇಲ್ಲಿ ಇರುವ ಪ್ರಶ್ನೆ ಇಲ್ಲ. ಕೋರಂ ಈ ಸಭೆಗೆ ಇಲ್ಲ. ಬೆಳಗ್ಗಿನಿಂದ ಇಲ್ಲಿ ಇದ್ದರು. ಈಗ ಇಲ್ಲವೆನ್ನುವ ಪ್ರಶ್ನೆ ಅಲ್ಲ ತಾವೇ ಆಗಲೀ ಹೇಳಿದಿರಿ. ಶಿಕ್ಷಣ ಇಲಾಖೆ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದೆ. ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಇಬ್ಬರು ಮಂತ್ರಿಗಳಿದ್ದಾರೆ. ಆದರೆ ಈಗ ಇಲ್ಲಿ ಒಬ್ಬರೂ ಇಲ್ಲ.

ಚೇರ್ಮನ್ :- 22 ಜನರು ಇದ್ದಾರೆ. ಇನ್ನೂ ಒಬ್ಬರು ಬರಬೇಕಾಗಿದೆ. ಈಗ ಬಂದಿದ್ದಾರೆ. ಕೋರಂ ಆಗಿದೆ. ತಾವು ಪ್ರಾರಂಭ ಮಾಡಿ.

ಶ್ರೀ ಪಿ. ಎಸ್. ಜಯವಂತ್ :- 1995-96 ನೇ ಸಾಲಿನಲ್ಲಿ ಪ್ರಾಥಮಿಕ ಶಿಕ್ಷಕರ 5 ಸಾವಿರ ಮಂದಿಯನ್ನು ನೇಮಕಾತಿ ಮಾಡಿದ್ದೇವೆ. ಈ ನೇಮಕಾತಿ ಮಾಡಿದಂತಹ ಪದ್ಧತಿ ಬಹಳ ಉತ್ತಮವಾದ ಪದ್ಧತಿ. ರೋಸ್ಟರ್ ಕಮ್ ಮೆರಿಟ್ ಮೇಲೆ ಆಯ್ಕೆ ಮಾಡಿದ್ದರಿಂದ ಭ್ರಷ್ಟಾಚಾರದ ಪ್ರಮಾಣ ಕಡಿಮೆಯಾಗಿದೆ. ಹಿಂದೆ ಎಲ್ಲಾ ನೇಮಕಾತಿ ಮಾಡಬೇಕಾದರೆ ಸಾಕಷ್ಟು ಭ್ರಷ್ಟಾಚಾರ ಇಡೀ ರಾಜ್ಯದಲ್ಲಿ ಇಡೀ ದೇಶದಲ್ಲಿ ನಡೆಯುತ್ತಿತ್ತು. ಇದು ತಮಗೂ ಗೊತ್ತು ಈ ಶಿಕ್ಷಕರ ನೇಮಕಾತಿಯೊಳಗೆ ಭ್ರಷ್ಟಾಚಾರ ಆಗದೆ ರೋಸ್ಟರ್ ಕಮ್ ಮೆರಿಟ್ ಪದ್ಧತಿ ಮೂಲಕ ಮಾಡಿದ್ದಕ್ಕೆ ನಾನು ಸರಕಾರವನ್ನು ಅಭಿನಂದಿಸುತ್ತೇನೆ. ಆದರಂತೆ ಟಿ.ಸಿ.ಹೆಚ್. ಇರಲಿ ಬಿ.ಎ.ಡ್ ಇರಲಿ ರೋಸ್ಟರ್ ಕಮ್ ಮೆರಿಟ್ ಪದ್ಧತಿಯಲ್ಲಿ ಮಾಡಿದ್ದಕ್ಕೆ ಸರಕಾರವನ್ನು ನಾನು ಅಭಿನಂದಿಸುತ್ತೇನೆ. ಇದು ಸಾಮಾನ್ಯ ಜನರಿಗೆ ಬಹಳ ಉತ್ತಮವಾಗಿದೆ ಇದರಿಂದ ಉಪಕಾರವಾಗಿದೆ. ಇದರಿಂದ ಭ್ರಷ್ಟಾಚಾರದ ಪ್ರಮಾಣ ಕಡಿಮೆಯಾಗಿದೆ ಎಂದು ಒಟ್ಟು ಕೊಟ್ಟು ಹೇಳುತ್ತಿದ್ದೇನೆ. ನಾವು ನಮ್ಮ ರಾಜ್ಯದಲ್ಲಿ ನೋಡಬಹುದು. 10 ಮಕ್ಕಳಿಗಿಂತ ಕಡಿಮೆ ಇರತಕ್ಕಂತಹ ಶಾಲೆಗಳು ಪ್ರತಿಯೊಂದು ತಾಲ್ಲೂಕಿನಲ್ಲಿ 15 ರಿಂದ 20 ಇದೆ. ಇಡೀ ರಾಜ್ಯದಲ್ಲಿ ಇಂತಹ ಶಾಲೆಗಳನ್ನು ಲೆಕ್ಕಾಚಾರ ಮಾಡಿದಾಗ 25 ಸಾವಿರ ಶಾಲೆಗಳು ಸಿಗುತ್ತದೆ. ಇದರ ಅವಶ್ಯಕತೆ ಇದೆಯೇ ಎನ್ನುವುದನ್ನು ನಾವು ಚಿಂತನೆ ಮಾಡಬೇಕಾಗುತ್ತದೆ. 5 ಮಕ್ಕಳಿಂದ 3 ಮಕ್ಕಳಿಗೂ ಒಂದು ಶಾಲೆ ಇದೆ ಅಲ್ಲಿ ಶಿಕ್ಷಕರು ಇದ್ದಾರೆ. ಹತ್ತು ಜನ ಮಕ್ಕಳಿಗೂ ಶಿಕ್ಷಕರು ಇದ್ದಾರೆ. ಇದು ಅವಶ್ಯಕತೆ ಇದೆಯೇ ಎಂದು ಅಧ್ಯಯನ ಮಾಡಿ ಚಿಂತನೆ ಮಾಡಿದರೆ ನಾವು ಹಣಕಾಸಿನ ಉಳಿತಾಯವನ್ನು ಮಾಡಬಹುದು. ಕೇಂದ್ರ ಸರಕಾರದ ನೆರವಿನಿಂದ ಬ್ಲಾಕ್ ಬೋರ್ಡ್ ಆಪರೇಷನ್ ಶಾಲೆಗಳು ಇದೆ. ಅಲ್ಲಿಯೂ

ಸಹ 10-12 ಜನ ಮಕ್ಕಳು ಇದ್ದಲ್ಲಿ 2-2 ಶಿಕ್ಷಕರು ಇರುತ್ತಾರೆ. ಇದರ ಬಗ್ಗೆ ಸಹ ಚಿಂತನೆ ಮಾಡಿಕೊಂಡು ಇದನ್ನು ನಾವು ಸರಳೀಕರಣ ಮಾಡಿ ಉತ್ತಮ ಪ್ರಾಥಮಿಕ ಶಿಕ್ಷಣ ಕೊಡುವಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅದರಂತೆ ಶಿಕ್ಷಕ ಶಿಕ್ಷಕಿಯರನ್ನು ಜನಗಣತಿಗೆ ಕಳುಹಿಸುವುದರಿಂದ ಶಿಕ್ಷಣದ ಪ್ರಗತಿ ಕುಂಠಿತವಾಗುತ್ತದೆ. ಈ ವಿಚಾರದಲ್ಲಿ ನಾವು ಚಿಂತನೆ ಮಾಡಬೇಕು. ಏಕೆಂದರೆ ಸಾಕಷ್ಟು ಸಂಬಳವನ್ನು ಈ ಶಿಕ್ಷಕ ಶಿಕ್ಷಕಿಯರಿಗೆ ಕೊಡುವುದರಿಂದ ಈ ಎಲ್ಲಾ ಚಿಕ್ಕಪುಟ್ಟ ಕೆಲಸಗಳಿಗೆ ಅವರನ್ನು ತೆಗೆದುಕೊಂಡರೆ ನಮಗೆ ಬಹಳ ತೊಂದರೆಯಾಗುತ್ತದೆ. ಆರ್ಥಿಕವಾಗಿ ನಾವು ಕಷ್ಟಕ್ಕೆ ಬೀಳಬೇಕಾಗುತ್ತದೆ. ಆ ದೃಷ್ಟಿಯಿಂದ ಇಂತಹ ಕೆಲಸಗಳನ್ನು ನಾವು ಕಂಟ್ರಾಕ್ಟ್ ಮೂಲಕ ಮಾಡಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಎಲ್ಲಾ ತಾಲ್ಲೂಕುಗಳಲ್ಲಿ 12 ಸ್ಕೂಲುಗಳನ್ನು ಕಾಣುತ್ತೇವೆ. ಖಾಸಗಿ ಶಾಲೆಗಳನ್ನು ಕಾಣುತ್ತೇವೆ. ಆ ಪ್ರಮಾಣವನ್ನು ಕಡಿಮೆ ಮಾಡಿ ಆದಷ್ಟು ಸರಕಾರೀ ಶಾಲೆಗಳು ಇರಬೇಕು. ಇದರಿಂದ ನಾವು ಹೆಚ್ಚಿನ ಬಡವರಿಗೆ ದುರ್ಬಲ ವರ್ಗದವರಿಗೆ ಹೆಚ್ಚಿನ ಶಿಕ್ಷಣ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಈಗ ಹೆಚ್ಚಿನ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗುತ್ತದೆ. ಇದಕ್ಕೆ ಕಡಿವಾಣ ಹಾಕಬೇಕು. ಮತ್ತು ಮೌಲ್ಯಮಾಪನ ಮಾಡಬೇಕಾದರೆ ಸಹ ಬಹಳ ಸಮಸ್ಯ ಇದೆ. ಯಾರೇ ಮರು ಮೌಲ್ಯಮಾಪನಕ್ಕೆ ಕೇಳಿದಾಗ ಕೇವಲ ಟೋಟಲಿಂಗ್ ಮಾಡುವ ಪದ್ಧತಿಯನ್ನು ಅನುಕರಣೆ ಮಾಡುತ್ತಿದ್ದೇವೆ. ಆ ಪದ್ಧತಿಯನ್ನು ಬಂದ್ ಮಾಡಬೇಕು....

ಚೇರ್ಮನ್ :- ಶಿಕ್ಷಣದ ಬಗ್ಗೆ ಒಳ್ಳೆ ಸಲಹೆ ಕೊಡುತ್ತಿದ್ದಾರೆ. ಅದನ್ನೆಲ್ಲಾ ನೋಟ್ ಮಾಡಿಕೊಳ್ಳುವವರು ನೀವೋ ಇಲ್ಲವೋ ಅಧಿಕಾರಿಗಳೋ ನೋಡಿ. ಸರಿಯಾದ ಸಲಹೆಗಳನ್ನು ಕೊಡುತ್ತಿದ್ದಾರೆ.

ಶ್ರೀ ಹಿ. ಎಸ್. ಜಯವಂತ್ :- ಈಗಿನ ದಿನಗಳಲ್ಲಿ ಮೌಲ್ಯಮಾಪನದಲ್ಲಿ ಬಹಳಷ್ಟು ತೊಂದರೆಯಾಗುತ್ತಿದೆ. ಮಕ್ಕಳು ಕಷ್ಟಪಡುತ್ತಿದ್ದಾರೆ. ಅವರ ಪಾಲಕರಿಗೂ ಸಹ ವಿಶ್ವಾಸ ಕಡಿಮೆಯಾಗುತ್ತಿದೆ. ಇದಕ್ಕೆ ತಾವು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳ ಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಯಾವುದೇ ಒಂದು ಮೌಲ್ಯಮಾಪನಕ್ಕೆ ಅರ್ಜಿ ಹಾಕಿದಾಗ ಅಥವಾ ಅಪೀಲು ಮಾಡಿಕೊಂಡಾಗ ಕೇವಲ ಟೋಟಲಿಂಗ್ ಒಂದನ್ನೇ ಮಾಡದೆ ಆ ಮೌಲ್ಯಮಾಪನ ಮಾಡುವಂಥ ಒಂದು ಪದ್ಧತಿಯನ್ನು ಹೊಸದಾಗಿ ಅಳವಡಿಸಿಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದರಂತೆ ಮೀಸಲಾತಿ ಯೋಜನೆಯೂ ಸಹ ಏಡೆಡ್ ಸ್ಕೂಲ್‌ಗಳಲ್ಲಿ, ಅನ್ ಏಡೆಡ್ ಸ್ಕೂಲ್‌ಗಳಲ್ಲಿ ಎಲ್ಲಾ ಸ್ಕೂಲ್‌ಗಳಲ್ಲಿ ಕಟ್ಟುನಿಟ್ಟಾಗಿ ಎನ್‌ಫೋರ್ಸ್ ಮಾಡಲಿಕ್ಕೆ ತಾವು ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ಅದರಂತೆ ಇನ್ನು ಆಡಳಿತ ಸುಧಾರಣೆ ಬಗ್ಗೆ ಕೆಲವೊಂದು ವಿಚಾರಗಳನ್ನು ತಮ್ಮ ಮುಂದೆ ಇಡಲಿಕ್ಕೆ ನಾನು ಇಚ್ಛಿಪಡುತ್ತೇನೆ. ಇವತ್ತು ಆಡಳಿತ ದಿನೇ ದಿನೇ ಕುಸಿಯುತ್ತಿದೆ. ಕಳೆದ ನಲವತ್ತು ವರ್ಷಗಳಿಂದ ಕ್ರಮೇಣ ಗುಣಮಟ್ಟ ಕೆಳಮಟ್ಟಕ್ಕೆ ಬಂದಿರುತ್ತದೆ. ತಾವು ಇದಕ್ಕೆ ಒಂದು ಕಾಯಕಲ್ಪವನ್ನು

ಮಾಡಬೇಕಾಗಿದೆ. ಭ್ರಷ್ಟಾಚಾರವನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕಾಗಿದೆ. ಅದರಂತೆ ಈ ಅಮಾನತ್ತು, ಅಮಾನತ್ತಾದರೆ ಅವನಿಗೆ ನಾವು ಡಬಲ್ ಪ್ರಮೋಷನ್ ಕೊಟ್ಟಹಾಗೆ. ಅಮಾನತ್ತಾದವರಿಗೆ ಕೆಲವು ಕಾನೂನನ್ನು ಸುಧಾರಣೆ ಮಾಡಿಕೊಂಡು ನಾವೇನು 50 ಪರ್ಸೆಂಟ್, 75 ಪರ್ಸೆಂಟ್ ಸ್ಕ್ಯಾಲರಿಯನ್ನು ಕೊಡುತ್ತಿದ್ದೇವೆ, ಅದನ್ನು ನಾವು 25 ಪರ್ಸೆಂಟ್‌ಗೆ ತರಲಿಕ್ಕೆ ಪ್ರಯತ್ನ ಮಾಡಬೇಕು. ಮತ್ತು ಅಮಾನತ್ ಆದಂಥ ಯಾವುದೇ ವ್ಯಕ್ತಿ ಇದ್ದರೂ ಸಹ ಒಂದು ವರ್ಷದಲ್ಲಿ ಆ ಕೇಸ್‌ಗೆ ಸಂಬಂಧಪಟ್ಟಂತೆ ಅದನ್ನು ಒಂದು ವರ್ಷದಲ್ಲಿ ಸೆಟ್ಲ್ ಮಾಡಲಿಕ್ಕೆ ನಾವು ಪ್ರಯತ್ನ ಮಾಡಬೇಕು. ಪದೇ ಪದೇ ಅಮಾನತ್ ಆಗುವವರಿಗೆ ನಾವು ಕಂಪಲ್‌ಸರಿ ರಿಟೈರ್‌ಮೆಂಟ್ ಮಾಡಲಿಕ್ಕೆ ಪ್ರಯತ್ನ ಮಾಡುವಂಥ ವಿಚಾರವನ್ನು ಮಾಡಬೇಕಾಗಿದೆ. ಈಗ ಹೊಸದಾಗಿ ನೇಮಕಾತಿ ಮಾಡಬೇಕಾದರೂ ಸಹ ನಾವು ಒಂದು ವಿಶೇಷವಾದ ಕಾನೂನನ್ನು ತಂದರೆ ಬಹಳ ಉತ್ತಮ. ಕನಿಷ್ಟ ಆದರೂ ಐದು ವರ್ಷ ಅವರು ಟೆಂಪೊರರಿಯಾಗಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೆಲಸ ಮಾಡುವಂಥ ಪ್ರವೃತ್ತಿಯನ್ನು ನಾವು ತಂದರೆ ಅಲ್ಲಿಂದ ಹೆಚ್ಚಿನ ಜನರಿಗೆ ನಾವು ಉದ್ಯೋಗ ಅವಕಾಶ ಮಾಡಿಕೊಡಲಿಕ್ಕೂ ಬರುತ್ತದೆ. ಮತ್ತು ಅವರನ್ನು ಉತ್ತಮ ಕೆಲಸಗಾರರನ್ನಾಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ತಮ್ಮೂಲಕ ಸಂಬಂಧಪಟ್ಟವರಿಗೆ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದರಂತೆ ಈ ವರ್ಗಾವಣೆಯು ಸಹಾ ಈ ವರ್ಷವೇನೋ ಬಹಳ ಸಂತೋಷ. ನಾನು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ವರ್ಗಾವಣೆ ಈ ಸಾರಿ ಇಲ್ಲ. ಆದರೂ ಸಹ ಮುಂದಿನ ದಿನಗಳಲ್ಲಿ ವರ್ಗಾವಣೆಗಳನ್ನು ನಾವು ಮೇ ತಿಂಗಳೊಳಗೆ ಮಾಡುವಂಥ ಒಂದು ಪರಿಸ್ಥಿತಿಯನ್ನು ತಂದುಕೊಳ್ಳಬೇಕಾಗುತ್ತದೆ. ಮೇ ತಿಂಗಳಲ್ಲಿಯೇ ಎಲ್ಲಾ ವರ್ಗಾವಣೆಗಳಾಗಿ ಬಿಟ್ಟರೆ ಅಷ್ಟೇ ಪ್ರಮಾಣದಲ್ಲಿ ಅದು ಎಲ್ಲರಿಗೂ ಉತ್ತಮ. ಮಕ್ಕಳನ್ನು ಶಾಲೆಗೆ ಸೇರಿಸಲಿಕ್ಕೆ ಉತ್ತಮ. ನೌಕರದಾರರಿಗೆ ಉತ್ತಮ. ಅಧಿಕಾರಿ ವರ್ಗದವರಿಗೆ ಉತ್ತಮ. ಪ್ರತಿಯೊಬ್ಬರಿಗೂ ಒಂದು ಕಟ್ಟುನಿಟ್ಟಿನ ವಿಚಾರ ಗೊತ್ತಾಗುತ್ತದೆ. ನನಗೆ ಇಂಥ ದಿವಸ ವರ್ಗಾವಣೆ ಯಾಗುತ್ತದೆ ಎಂದು ಗೊತ್ತಾಗಬೇಕು. ಅದರಂತೆ ಒಂದನೇ ವರ್ಗದ ಅಧಿಕಾರಿಗಳನ್ನು ರಾಜ್ಯಮಟ್ಟದಲ್ಲಿ ವರ್ಗಾವಣೆ ಮಾಡಬೇಕು. ಎರಡನೇ ವರ್ಗದ ಅಧಿಕಾರಿಗಳನ್ನು ಡಿವಿಜನ್ ಮಟ್ಟದಲ್ಲಿ ವರ್ಗಾವಣೆ ಮಾಡಬೇಕು. ಮೂರನೇ ವರ್ಗದ ಅಧಿಕಾರಿಗಳನ್ನು ಜಿಲ್ಲಾ ಮಟ್ಟದಲ್ಲಿ ವರ್ಗ ಮಾಡಬೇಕು. ಈ ರೀತಿಯಲ್ಲಿ ನಾವು ವ್ಯವಸ್ಥೆಯನ್ನು ಹಾಕಿಕೊಂಡರೆ ಕೆಲವು ಅಧಿಕಾರಿಗಳು ತಮ್ಮ ತಮ್ಮ ಮನೆಯಲ್ಲಿಯೇ, ತಮ್ಮ ತಾಲ್ಲೂಕಿನಲ್ಲಿಯೇ ಹೋಗಿ ಇರುವಂಥ ವ್ಯವಸ್ಥೆಯಾದಂತಾಗುತ್ತದೆ.

ಛೇರ್ಮನ್ :- ವರ್ಗಾವಣೆ ವಿಷಯದಲ್ಲಿ ಬಹಳ ಒಳ್ಳೆಯ ಸಲಹೆಯನ್ನು ಕೊಡುತ್ತಿದ್ದಾರೆ.

ಶ್ರೀ ಪಿ. ಎಸ್. ಜಯವಂತ್ :- ಅದಕ್ಕಾಗಿ ಈ ರೀತಿಯಲ್ಲಿ ಯಾವುದೇ ಹಂತದಲ್ಲಿ ಮೇ ತಿಂಗಳಲ್ಲಿಯೇ ವರ್ಗಾವಣೆ ಮಾಡುವ ವ್ಯವಸ್ಥೆ ಮಾಡಬೇಕೆಂದು ನಾನು ಕಳಕಳಿಯಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಒಂದನೇ ದರ್ಜೆಯ ಅಧಿಕಾರಿಗಳನ್ನು ರಾಜ್ಯಮಟ್ಟದಲ್ಲಿಡುವಂತೆ, ಎರಡನೇ ದರ್ಜೆಯ ಅಧಿಕಾರಿಗಳನ್ನು ಡಿವಿಜನ್ ಮಟ್ಟದಲ್ಲಿಡುವಂತೆ ಮೂರನೇ ದರ್ಜೆಯ ನೌಕರರುಗಳನ್ನು ಜಿಲ್ಲಾ ಮಟ್ಟದಲ್ಲಿಡುವಂತೆ,

ನಾಲ್ಕನೇ ವರ್ಗದ ನೌಕರರುಗಳನ್ನು ತಾಲ್ಲೂಕುಮಟ್ಟದಲ್ಲಿಡುವಂಥ ಒಂದು ವ್ಯವಸ್ಥೆಯನ್ನು ತಂದಾಗ ಸ್ವಲ್ಪ ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ತಮ್ಮ ಮುಂದೆ ಇಡಲಿಕ್ಕೆ ಇಷ್ಟಪಡುತ್ತೇನೆ. ಅದರಂತೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ ಮತ್ತು ಅಷ್ಟೇ ಅಲ್ಲ, ಕರ್ನಾಟಕದ ಐದು ಕೋಟಿ ಜನತೆ ಕಳೆದ ಒಂದು ವರ್ಷದಲ್ಲಿ ನಡೆದಂಥ ಎಲ್ಲಾ ಚುನಾವಣೆಗಳಲ್ಲಿ ನಮ್ಮನ್ನು ಬಹುಮತದಿಂದ ಆರಿಸಿ ತರಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಇವೆಲ್ಲಾ ಪ್ರಯತ್ನಕ್ಕೆ ನಾವು ಮಾಡಿದ ಕಾರ್ಯಕ್ರಮ, ಬಡಜನರ ಕೆಲಸ, ಎಲ್ಲಾ ವರ್ಗದವರಿಗೂ ಉತ್ತಮ ದರ್ಜೆಯ, ಉತ್ತಮ ಸರ್ಕಾರ ಕೊಟ್ಟಿದ್ದಕ್ಕೆ ಪ್ರಥಮ ಬಾರಿಗೆ 16 ಜನ ಪಾರ್ಲಿಮೆಂಟ್‌ಗೂ ಸಹ ಆಯ್ಕೆಯಾಗಿ ಬರಲಿಕ್ಕೆ ಸಾಧ್ಯವಾಯಿತು. ತನ್ಮೂಲಕ ನಮ್ಮ ಕರ್ನಾಟಕದ ಮಣ್ಣಿನ ಮಗ ಇವತ್ತು ಪ್ರಧಾನ ಮಂತ್ರಿಯಾಗಲಿಕ್ಕೆ ಒಂದು ಅವಕಾಶವಾಯಿತು. ಅವರೂ ಸಹ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟು 44 ಜನರ ಮುಖಂಡತ್ವವನ್ನು ವಹಿಸಿ ಇಡೀ ರಾಷ್ಟ್ರದ ಒಂದು ಸೂತ್ರವನ್ನು ಹಿಡಿದಿದ್ದಾರೆ. ಇದು ಒಬ್ಬ ಗಂಡುಗಲಿ ಮಾಡಿದಂಥ ಕೆಚ್ಚೆದೆಯ ಧೈರ್ಯವನ್ನು ಅವರು ಮಾಡಿ ನಮ್ಮ ಕರ್ನಾಟಕವು ಇತಿಹಾಸದಲ್ಲಿ ಬರಲಿಕ್ಕೆ ಇತಿಹಾಸ ಪುಟದಲ್ಲಿ ಬರೆಯುವಂಥ ಒಂದು ಸನ್ನಿವೇಶವನ್ನು ತಮ್ಮೆಲ್ಲರ ಮೂಲಕ ತಂದು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಇಡೀ ಕರ್ನಾಟಕದ ಜನತೆಗೂ ಹಾಗೂ ತಮಗೂ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :–** ಮಾನ್ಯ ಅಧ್ಯಕ್ಷರೇ, ಇವತ್ತು 19 ಬೇಡಿಕೆಗಳನ್ನು ಚರ್ಚೆಗೆ ಇಟ್ಟಿದ್ದಾರೆ. ಇದು ಬಹುಶಃ ಸಂಸದೀಯ ನೀತಿನಿಯಮಗಳ ಪ್ರಕಾರ 19 ಬೇಡಿಕೆಗಳನ್ನು ಒಂದೇ ಸಲ ಚರ್ಚೆಗೆ ಹಾಕಿ ಚರ್ಚೆ ಮಾಡಬೇಕು ಎಂದು ಹೇಳತಕ್ಕಂಥ ಸಂಪ್ರದಾಯವಲ್ಲ. ಇದು ಸಂಸದೀಯ ನಿಯಮಗಳಿಗೆ ಸರಿಹೊಂದುವುದಿಲ್ಲ ಮತ್ತು ಅದಕ್ಕೆ ವಿರೋಧ ಎಂದು ನಾನು ಸ್ಪಷ್ಟವಾಗಿ ಮೊಟ್ಟಮೊದಲು ಹೇಳಲಿಕ್ಕೆ ತಮಗೆ ಇಷ್ಟಪಡುತ್ತೇನೆ. 19 ಬೇಡಿಕೆಗಳನ್ನು ಇಟ್ಟು ಚರ್ಚೆ ಮಾಡಿ ಎಂದು ಹೇಳಿದರೆ ಯಾವುದೇ ಒಂದು ಇಲಾಖೆಯ ಬಗ್ಗೆ ಕೂಡ ಸಮಗ್ರವಾಗಿ ಚರ್ಚೆಯಾಗಲಿಕ್ಕೆ ಅವಕಾಶವಾಗುವುದಿಲ್ಲ. ಮತ್ತು ಆ ಇಲಾಖೆಯಲ್ಲಿರುವ ಲೋಪದೋಷಗಳನ್ನು ಸರಿ ಪಡಿಸಲಿಕ್ಕೆ ಸರ್ಕಾರಕ್ಕೂ ಸರಿಯಾದಂಥ ಸಲಹೆಗಳನ್ನು ಕೊಡಲಿಕ್ಕಾಗುವುದಿಲ್ಲ ಅಥವಾ ವಿರೋಧ ಪಕ್ಷದವರಿಗೂ ಆ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಒಂದೊಂದು ಇಲಾಖೆಗೆ ಸಂಬಂಧಪಟ್ಟಹಾಗೆ ಚರ್ಚೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದು ಕೇವಲ ಒಂದು ಕಾಟಾಚಾರದ ಚರ್ಚೆಯಾಗಿ ಉಳಿಯುತ್ತದೆಯೇ ಹೊರತು ಇದೊಂದು ಗಂಭೀರ ವಾದಂಥ, ಸಮಗ್ರವಾದಂಥ ಇಡೀ ರಾಜ್ಯದ ಜನತೆಗೆ ಅನುಕೂಲವಾಗುವ ರೀತಿಯಲ್ಲಿ ಈ ಚರ್ಚೆಯಾಗುವುದಿಲ್ಲ ಎನ್ನುವುದು ನನ್ನ ಮೊಟ್ಟಮೊದಲ ಅಭಿಪ್ರಾಯ. ಈ ಸಂಪ್ರದಾಯವನ್ನು ನಿಲ್ಲಿಸಬೇಕು. ಒಂದೊಂದು ಇಲಾಖೆಗೆ ಕನಿಷ್ಟ ಒಂದು ದಿವಸ ವಾದರೂ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರೆ ಆಗ ಆ ಇಲಾಖೆಗೂ ಏನಾದರೂ ಪ್ರಯೋಜನವಾಗುತ್ತದೆ. ಸರ್ಕಾರಕ್ಕೂ ಪ್ರಯೋಜನವಾಗುತ್ತದೆ, ಜನತೆಗೂ ಕೂಡ ಏನಾದರೂ ಪ್ರಯೋಜನವಾಗಲಿಕ್ಕೆ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ

ಮತ್ತು ಬೇಡಿಕೆಗಳ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಸ್ಪಷ್ಟವಾಗಿ ನನ್ನ ಅಭಿಪ್ರಾಯ ಏನೆಂದರೆ ಯಾವ ಯಾವ ಬೇಡಿಕೆಗಳು ಚರ್ಚೆಗೆ ಸದನದಲ್ಲಿ ಬರುತ್ತದೆಯೋ ಆ ಸಂಬಂಧಪಟ್ಟ ಎಲ್ಲಾ ಮಂತ್ರಿಗಳು ಮತ್ತು ಅಧಿಕಾರಿಗಳೂ ಕೂಡ ಸದನದಲ್ಲಿ ಇರಬೇಕಾಗಿರುವುದು ಅವರ ಮೊದಲನೇ ಕರ್ತವ್ಯ. ಮಂತ್ರಿಗಳು ಕೆಲವರು ಇದ್ದರೆ ಎಲ್ಲವನ್ನೂ ನಾವು ಬರೆದುಕೊಳ್ಳುತ್ತೇವೆ ಎನ್ನುವುದು ಅಥವಾ ಎಲ್ಲದಕ್ಕೂ ಅವರು ಉತ್ತರ ಕೊಡುತ್ತಾರೆ ಎಂದು ಹೇಳುವುದು ಆ ಸಂಪ್ರದಾಯ ಕೂಡ ಸರಿಯಲ್ಲ. ಬೇಡಿಕೆಗಳ ಮೇಲೆ ಚರ್ಚೆ ನಡೆಯುವಾಗಲಾದರೂ ಕನಿಷ್ಟ ಆ ಇಲಾಖೆಗೆ ಸಂಬಂಧ ಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳು ಇರಬೇಕು ಅದನ್ನು ಸರ್ಕಾರ ಪಾಲಿಸುತ್ತಾ ಇಲ್ಲ. ಆದಕ್ಕೆ ತಮ್ಮುಖಾಂತರ ನಾನು ಹೇಳುತ್ತಿದ್ದೇನೆ, ಇದು ಸರ್ಕಾರಕ್ಕೆ ಯಾವ ರೀತಿಯಾಗಿ ಶೋಭೆ ತರುವ ವಿಷಯವಲ್ಲ. ಇಲ್ಲಿ 19 ಬೇಡಿಕೆಗಳು ಚರ್ಚೆಗೆ ಇದೆ. ಅದರಲ್ಲಿ ನಾನು ಮೊದಲನೆಯದಾಗಿ ಈ ಸಾಮಾನ್ಯ ಆಡಳಿತದ ಬಗ್ಗೆ ಪ್ರಾರಂಭ ಮಾಡುತ್ತಿದ್ದೇನೆ. ಇವತ್ತು ಈ ಸರ್ಕಾರ ಜನತಾ ದಳದ ಸರ್ಕಾರ ಅಧಿಕಾರ ವಿಕೇಂದ್ರೀ ಕರಣ ಮಾಡಿದ್ದೇವೆ ಎಂದು ಹೇಳುವ ಮಾತನ್ನು ಪದೇ ಪದೇ ಹೇಳುತ್ತಾರೆ. ಅಧಿಕಾರ ವಿಕೇಂದ್ರೀಕರಣ ಮಾಡಿರುವುದು ಸ್ವಾಗತಾರ್ಹವಾದಂಥ ವಿಷಯ. ಆದರೆ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿ 45 ಜನರನ್ನು ಮಂತ್ರಿಗಳನ್ನು ಮಾಡುವ ಅವಶ್ಯಕತೆ ಏನಾದರೂ ಇದೆಯೇ? ಇದು ಅಧಿಕಾರ ವಿಕೇಂದ್ರೀಕರಣದ ತತ್ವಕ್ಕೆ ಅನುಗುಣವಾಗಿದೆಯೇ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ. ಒಂದು ಕಡೆ ಅಧಿಕಾರವನ್ನು ಜನತೆಯ ಕೈಗೆ ಕೊಟ್ಟಿದ್ದೇವೆ, ಅಧಿಕಾರ ವಿಕೇಂದ್ರಿಕಣರವಾಗಿದೆ ಎಂದು ಹೇಳದ್ದೇ ಪ್ರಾಮಾಣಿಕ ಆದರೆ 45 ಜನ ಮಂತ್ರಿಗಳು ಮಂತ್ರಿಮಂಡಲ ಇರಬೇಕಾಗಿರುವ ಅವಶ್ಯಕತೆ ಇಲ್ಲ. ಏಕೆಂದರೆ ಈಗಿನ ಕಾಯ್ದೆ ಪ್ರಕಾರ ಹೆಚ್ಚಿನ ಅಧಿಕಾರಗಳನ್ನು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗೆ ಕೊಟ್ಟಿದ್ದೇವೆ. ಅಲ್ಲಿ ಕೊಟ್ಟಾದಮೇಲೆ ಈ 45 ಜನ ಮಂತ್ರಿಗಳಿಗೆ ಇಲ್ಲೇನು ಕೆಲಸ? ಏಕೆ ಅವಶ್ಯಕತೆ ಇದೆ. ಇದು ಎರಡು ರೀತಿಯಲ್ಲಿ ಸಂಪೂರ್ಣವಾಗಿ ಪ್ರಜಾಪ್ರಭುತ್ವದ ನಿಯಮಗಳಿಗೆ ಮತ್ತು ಅಧಿಕಾರದ ವಿಕೇಂದ್ರೀಕರಣದ ನಿಯಮಗಳಿಗೆ ವಿರುದ್ಧವಾಗಿರತಕ್ಕಂಥದ್ದು. ಆಡಳಿತ ಸುಧಾರಣಾತ್ಮಕ ಸಮಿತಿಯ ಒಂದು ವರದಿಯ ಪ್ರಕಾರ ಆಡಳಿತ ಸುಧಾರಣಾ ಆಯೋಗ ಅದರ ರೆಕಮೆಂಡೇಷನ್ಸ್ ಪ್ರಕಾರ ಯಾವುದೇ ಸದನದಲ್ಲಿರುವ ಒಟ್ಟು ಸದಸ್ಯತ್ವದ 1:10 ಮಂತ್ರಿಮಂಡಲ ಇರಬೇಕು ಎಂದು ಹೇಳಿ ರೆಕಮೆಂಡೇಷನ್ ಮಾಡಿದೆ. ಬಹುಶಃ ಭಾರತ ದೇಶದಲ್ಲಿ ಹೆಚ್ಚಿನ ರಾಜ್ಯಗಳು ಇದನ್ನು ಪಾಲಿಸುತ್ತಿಲ್ಲ. ಕನಿಷ್ಟ ಜನತಾದಳದ ಸರ್ಕಾರವಾದರೂ ಅದನ್ನು ಪಾಲಿಸುತ್ತದೆ ಎಂದು ಹೇಳತಕ್ಕಂಥದ್ದು ಎಲ್ಲರ ನಿರೀಕ್ಷೆ ಇತ್ತು. ಆ ಸುಧಾರಣಾ ನಿಯಮಗಳನ್ನು ಪಾಲಿಸಲಿಲ್ಲ. 45 ಜನ ಮಂತ್ರಿಮಂಡಲವನ್ನು ರಚನೆ ಮಾಡಿರತಕ್ಕದ್ದು ಪ್ರಜಾಪ್ರಭುತ್ವದ ಮತ್ತು ಆಡಳಿತ ಸುಧಾರಣಾ ಸಮಿತಿಯ ಶಿಫಾರಸ್ಸಿಗೆ ವಿರುದ್ಧವಾಗಿದೆ. ಎರಡನೆಯದು ಅಧಿಕಾರ ವಿಕೇಂದ್ರೀಕರಣ ; ಆ ತತ್ವ, ಯಾರು ಇವತ್ತು ಅಧಿಕಾರ ವಿಕೇಂದ್ರೀಕರಣವನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ, ಯಾರು ಮಾಡಿದ್ದಾರೆ, ಅವರಿಗೇ ಇವತ್ತು 45 ಜನ ಮಂತ್ರಿಮಂಡಲವನ್ನು ರಚನೆ ಮಾಡತಕ್ಕಂಥ ಅವಶ್ಯಕತೆ ಖಂಡಿತ ಇಲ್ಲ. ಹಾಗೆ ಮಾಡಿದ್ದೇ ಆದರೆ ಅಧಿಕಾರ

ವಿಕೇಂದ್ರೀಕರಣವನ್ನು ನೀವು ಸಂಪೂರ್ಣವಾಗಿ ನೀವೇ ಕೈಬಿಟ್ಟಿರಿ you are making it as a laughing stock. 45 ಜನ ಮಂತ್ರಿಮಂಡಲವನ್ನು ರಚನೆ ಮಾಡಿ ನೀವು ಲಾಫಿಂಗ್ ಸ್ಟಾಕ್ ಆಗಿದ್ದೀರಿ ಆದ್ದರಿಂದ ಈ ಅಧಿಕಾರ ವಿಕೇಂದ್ರೀಕರಣ ಇರತಕ್ಕ ಸಂದರ್ಭದಲ್ಲಿ ಕೆಲವು ಮುಖ್ಯವಾಗಿರತಕ್ಕ ಮಂತ್ರಿಗಳು ಮಾತ್ರ ಇರಬೇಕಾಗುತ್ತದೆ. ಹಲವಾರು ಇಲಾಖೆಗಳು ಅದಕ್ಕೆ ವರ್ಗಾವಣೆ ಆಗಿದೆ. ಗೃಹ ಇಲಾಖೆ ಇಲ್ಲೇ ಇರಬೇಕು. ರೆವಿನ್ಯೂ, ಅಗ್ರಿಕಲ್ಚರ್, ಫೈನಾನ್ಸ್ ಇಂತಹ ಮುಖ್ಯ ಇಲಾಖೆಗಳ ಮಂತ್ರಿಗಳು ಇರಬೇಕು. ಉಳಿದ ಎಲ್ಲವೂ ಕೂಡ ಜಿಲ್ಲಾ ಪಂಚಾಯತಿಯ ಕಾನೂನು ಪ್ರಕಾರ ಅವರಿಗೆ 17 ಇಲಾಖೆಗಳು ಅವರ ವ್ಯಾಪ್ತಿಗೆ ಒಳಪಡುತ್ತದೆ. ಅವರೇ ಅದರ ಮೇಲೆ ನಿರ್ಧಾರ ತೆಗೆದುಕೊಳ್ಳತಕ್ಕಂಥ ಅಧಿಕಾರ ಇದೆ ಅವರಿಗೆ. ಹಾಗಿರುವಾಗ ಇಲ್ಲಿ ಏಕೆ 45 ಜನ ಮಂತ್ರಿಗಳು ಬೇಕು? ಮೂರನೆಯದು ಮಂತ್ರಿಮಂಡಲ ಹೆಚ್ಚಾದಷ್ಟು ಅಧಿಕಾರಿಯನ್ನು ನಾವು ಆಡಳಿತ ಯಂತ್ರವನ್ನು ಬಿಗಿ ಮಾಡುತ್ತೇವೆ ಅಥವಾ ಚುರುಕು ಗೊಳಿಸುತ್ತೇವೆ ಎನ್ನತಕ್ಕದ್ದು ಖಂಡಿತ ಸಾಧ್ಯವಿಲ್ಲ. ಏಕೆಂದು ಹೇಳಿದರೆ ಇವತ್ತಿನ ಪರಿಸ್ಥಿತಿಯಲ್ಲಿ ಯಾವ್ಯಾವ ಇಲಾಖೆಯ ಮಂತ್ರಿಗಳಿಗೆ ಯಾರು ಅಧಿಕಾರಿಗಳು ಇದ್ದಾರೆ, ತಮ್ಮ ಇಲಾಖೆಯು ಯಾವುದು ಎಂದು ಹೇಳತಕ್ಕದ್ದು ಮತ್ತು ಜನತೆ ಭಾರೀ ಗೊಂದಲದಲ್ಲಿ ಸಿಕಿದ್ದಾರೆ ; ಯಾರು ಯಾವ ಇಲಾಖೆಯ ಮಂತ್ರಿ, ಯಾರು ಎಲ್ಲಿ ಅಧಿಕಾರಿಗಳು ಇದ್ದಾರೆ ಎನ್ನತಕ್ಕದ್ದು. ಅಧಿಕಾರವನ್ನು ಬಿಗಿಗೊಳಿಸಲಿಕ್ಕಂತೂ ಖಂಡಿತ ಸಾಧ್ಯವಿಲ್ಲ. ಚುರುಕುಗೊಳಿಸಲಿಕ್ಕಂತೂ ಪ್ರಯತ್ನವೇ ಆಗುತ್ತಿಲ್ಲ. ಏಕೆಂದರೆ ಅಧಿಕಾರಿಗಳಿಗೆ ಹೆಚ್ಚಿನ ಸಂದರ್ಭದಲ್ಲಿ ಮಂತ್ರಿಗಳ ಸಭೆಯಲ್ಲಿ ಭಾಗವಹಿಸತಕ್ಕದ್ದೇ ಆಗುತ್ತದೆ. ಅದರ ಜೊತೆಗೆ ಹಣಕಾಸಿನ ಹೊರೆ ವಿಪರೀತವಾಗಿ ರಾಜ್ಯದ ಮೇಲೆ ಆಗುತ್ತದೆ. ಆಯವ್ಯಯವನ್ನು ಮಂಡಿಸತಕ್ಕ ಸಂದರ್ಭದಲ್ಲಿ ನಮ್ಮ ಹಣಕಾಸಿನ ಮಂತ್ರಿಗಳು ನಮ್ಮ ರಾಜ್ಯದ ಒಟ್ಟು ಆದಾಯ 12 ಸಾವಿರ ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಅದರಲ್ಲಿ ಅಧಿಕಾರಿಗಳ ಸಂಬಳ ಸಾರಿಗೆಗೆ ಎಷ್ಟು ಖರ್ಚಾಗುತ್ತಿದೆ ಆ ಅಧಿಕಾರಿಗಳು ಇರತಕ್ಕದ್ದು ಎಷ್ಟು ಪರ್ಸೆಂಟೇಜ್? ಅವರಿಗೆ ಇಡೀ ಆದಾಯದಲ್ಲಿ ಎಷ್ಟು ಪರ್ಸೆಂಟೇಜ್ ಹೋಗುತ್ತಿದೆ ಎಂದರೆ ಹೇಳಿದರೆ ಇಡೀ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಅಧಿಕಾರಿಗಳ ಸಂಖ್ಯೆ ಇರತಕ್ಕದ್ದು ಒಂದು ಪರ್ಸೆಂಟ್.

ಛೇರ್ಮನ್ :- ಉಪ ಮುಖ್ಯಮಂತ್ರಿಗಳು ಸ್ವಲ್ಪ ಗಮನಿಸಬೇಕು. ಅವರು ಹಣಕಾಸಿನ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ :- ಅವರು ಗಮನಿಸಲಿಲ್ಲ. ಶ್ರೀರಾಮ ರೆಡ್ಡಿಯವರು ಈ ಕಡೆ ಬಂದರೆ ಒಳ್ಳೆಯದು ಎಂದು ಅನಿಸುತ್ತದೆ. ಈಗ ಒಟ್ಟು ಆದಾಯ ಹಣಕಾಸಿನ ಮಂತ್ರಿಗಳು ಹೇಳಿರುವ ಪ್ರಕಾರ ನಮ್ಮ ಕರ್ನಾಟಕ ರಾಜ್ಯದ್ದು 12 ಸಾವಿರ ಕೋಟಿ ರೂಪಾಯಿಗಳು ಇದೆ. ಸ್ವಲ್ಪ ಹೆಚ್ಚು ಕಡಿಮೆ. ಅದರಲ್ಲಿ ಅಧಿಕಾರಿಗಳು, ಒಟ್ಟು ಕರ್ನಾಟಕ ರಾಜ್ಯದ ಜನಸಂಖ್ಯೆಯ ಒಂದು ಪರ್ಸೆಂಟ್ ಇದ್ದರೆ, ಆ ಒಟ್ಟು ಆದಾಯದಲ್ಲಿ ಅವರಿಗೆ ಹೋಗತಕ್ಕ ಸಂಬಳ ಸಾರಿಗೆ, ಭತ್ಯೆ ಇವೆಲ್ಲಾ ಸೇರಿ ಒಟ್ಟು ಸರ್ಕಾರದ ವೆಚ್ಚಕ್ಕೆ ಹೋಗತಕ್ಕಂಥ ಒಟ್ಟು ಹಣ 99 ಭಾಗ. ಅಂದರೆ

ಇನ್ನು ಉಳಿದ 99 ಕರ್ನಾಟಕ ರಾಜ್ಯದ ಜನಸಂಖ್ಯೆಗೆ ಹೋಗತಕ್ಕದ್ದು. ಅದರಲ್ಲಿ ಒಂದು ಪರ್ಸೆಂಟ್. ಹಾಗಾದರೆ ಈ ರಾಜ್ಯದ ಅಭಿವೃದ್ಧಿ ಸಾಧ್ಯ ಇದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ. ಯಾವುದೇ ಒಂದು ಜವಾಬ್ದಾರಿ ಇರತಕ್ಕ ಸರ್ಕಾರ ನಮ್ಮ ಒಟ್ಟು ಆದಾಯ ಎಷ್ಟು, ಖರ್ಚು ಎಷ್ಟು, ಅಧಿಕಾರಿಗಳ ಸಂಬಳಕ್ಕೆ ಎಷ್ಟು ಹೋಗುತ್ತದೆ? ಜನರ ಅಭಿವೃದ್ಧಿ ಕಾರ್ಯಕ್ಕೆ ಎಷ್ಟು ಹೋಗುತ್ತಿದೆ ಎಂದು ಹೇಳತಕ್ಕದ್ದನ್ನು ಸರ್ಕಾರ ಗಮನಿಸಿದ್ದರೆ ಬಹುಶಃ ಈ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಇವತ್ತು ಇಡೀ ಕರ್ನಾಟಕ ರಾಜ್ಯದ ಒಟ್ಟು ಆದಾಯದಲ್ಲಿ ಒಂದು ಪರ್ಸೆಂಟ್ ಭಾಗ ಅತಿ ಹೆಚ್ಚಿನ ಭಾಗವನ್ನು ಕಬಳಿಸತಕ್ಕ ಪರಿಸ್ಥಿತಿ ಇರುವಾಗ ಸಾಮಾನ್ಯ ಮನುಷ್ಯನ ಬಳಿಗೆ ಯಾವುದೇ ರೀತಿಯ ಅಭಿವೃದ್ಧಿ ಯೋಜನೆಗಳು ತಲುಪಲಿಕ್ಕೆ ಸಾಧ್ಯವೇ ಇಲ್ಲ. ನಾಲ್ಕನೆಯದು ಸರ್ಕಾರದ ಖರ್ಚು ಕಡಿಮೆ ಆಗಲಿಕ್ಕೆ, ಸರ್ಕಾರ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಬೇಕು. ಆ ಪ್ರಾಮಾಣಿಕವಾದಂತಹ ಪ್ರಯತ್ನ ಇಲ್ಲಿ ಆಗುತ್ತಾ ಇಲ್ಲ. ಹಾಗಾಗಿ ಇವತ್ತು ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತಗೊಳ್ಳತಕ್ಕಂಥ ಪರಿಸ್ಥಿತಿಗೆ ಬಂದಿದೆ. ಮತ್ತೆ ಅಧಿಕಾರ ವಿಕೇಂದ್ರೀಕರಣದ ತತ್ವವನ್ನು ಪ್ರಾಮಾಣಿಕವಾಗಿ ಜಾರಿ ಮಾಡತಕ್ಕಂಥ ಸಂದರ್ಭ ದಲ್ಲಿ ಬರೀ ಜನತೆಗೆ ಅಧಿಕಾರ ಕೊಟ್ಟಿದ್ದೇವೆ, ಅಧಿಕಾರ ವಿಕೇಂದ್ರೀಕರಣ ಆಗಿದೆ ಎಂದು ಹೇಳತಕ್ಕಂಥದ್ದು ಒಂದೇ ಅಲ್ಲ. ಜನತೆಗೆ ಅಧಿಕಾರವನ್ನು ಕೊಡತಕ್ಕ ಸಂದರ್ಭ ದಲ್ಲಿ ಜನತೆಯ ಸಕ್ರೀಯ ಭಾಗವಹಿಸುವಿಕೆ ಅದರಲ್ಲಿರಬೇಕು. ಆದರೆ ಇವತ್ತು ಅದು ಬರೀ ಯಾಂತ್ರೀಕರಣವಾಗಿದೆ. ಜನರ ಸಕ್ರೀಯ ಭಾಗವಹಿಸುವಿಕೆ ಅಧಿಕಾರ ವಿಕೇಂದ್ರೀ ಕರಣದಲ್ಲಿ ಆಗುತ್ತಾ ಇಲ್ಲ. ಇದಕ್ಕೆ ಕಾರಣ ಈ ವ್ಯವಸ್ಥೆ. ಮಂತ್ರಿಮಂಡಲದಿಂದ ಪ್ರಾರಂಭವಾಗಿ ಅಧಿಕಾರಿಗಳ ನೇಮಕಾತಿಯಿಂದ ಪ್ರಾರಂಭವಾಗಿ ಕೆಳಗಿನ ಹಂತದವರೆಗೂ ಕೂಡ ಅಧಿಕಾರ ಬಿಗಿಗೊಳ್ಳುವುದಕ್ಕೂ ಸಾಧ್ಯ ಇಲ್ಲ. ಖರ್ಚುಗಳು ಕಡಿಮೆ ಆಗಲಿಕ್ಕೂ ಸಾಧ್ಯವಿಲ್ಲ. ಅಭಿವೃದ್ಧಿ ಕಾರ್ಯಗಳು ಹೆಚ್ಚು ಆಗಲಿಕ್ಕೂ ಸಾಧ್ಯವಿಲ್ಲ. ಯಾವ ಅಭಿವೃದ್ಧಿ ಕಾರ್ಯಕ್ಕೆ ಸರ್ಕಾರ ಹಣ ಖರ್ಚು ಮಾಡುತ್ತಿದೆಯೋ ಆ ಹಣ ಸಾಮಾನ್ಯ ಮನುಷ್ಯನೊಬ್ಬನಿಗೆ ತಲುಪಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಾಗಾದರೆ ಏಕೆ ಸರ್ಕಾರ ನಡೆಸ ಬೇಕು? ಆದ್ದರಿಂದ ತಮ್ಮ ಮುಖಾಂತರ ನಾನು ಈ ಸರ್ಕಾರವನ್ನು ಕಳಕಳಿಯಿಂದ ವಿನಂತಿ ಮಾಡುತ್ತಿದ್ದೇನೆ. ಮೊಟ್ಟಮೊದಲು ಸರ್ಕಾರದ ಖರ್ಚನ್ನು ಕಡಿಮೆ ಮಾಡಬೇಕು ಎಂದು ಆದರೆ ಇವರು ಮಂತ್ರಿಮಂಡಲದ ಸಂಖ್ಯೆಯನ್ನು ಕಡಿಮೆ ಮಾಡುವುದರಿಂದ ಪ್ರಾರಂಭ ಮಾಡಲಿ. ಇಷ್ಟು ದೊಡ್ಡ ಮಂತ್ರಿ ಮಂಡಲ ಅವಶ್ಯಕತೆ ಇಲ್ಲ. ಮತ್ತೆ ಆಡಳಿತ ಸುಧಾರಣೆ. ಆಡಳಿತ ಪರಿಸ್ಥಿತಿ ಏನಾಗಿದೆ ಎಂದು ಹೇಳಿದರೆ, ಇದು ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವದಲ್ಲಿ ಕಾರ್ಯಾಂಗ ಶಾಸಕಾಂಗಕ್ಕೆ ಅಧೀನವಾಗಿರಬೇಕು. ಇದು ಪ್ರಜಾಪ್ರಭುತ್ವದ ಮೂಲ ನಿಯಮ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಕಾರ್ಯಾಂಗ ಶಾಸಕಾಂಗದ ಮೇಲೆ ಹಿಡಿತ. ನಾವು ಇಲ್ಲಿ ಹಲವಾರು ಸಂದರ್ಭಗಳಲ್ಲಿ ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ, ಪ್ರಶ್ನೋತ್ತರಗಳ ಸಂದರ್ಭದಲ್ಲಿ ನಾವು ನೋಡುತ್ತಿದ್ದೇವೆ. ಅಧಿಕಾರಿಗಳು ಏನು ಬರೆದುಕೊಟ್ಟರೆ, ಅದನ್ನು ತೆಗೆದುಕೊಂಡು ಬಂದು ಓದತಕ್ಕ ಪರಿಸ್ಥಿತಿ ಇದೆ. ಅದು ತಪ್ಪು ಇದ್ದರೂ ಓದುವುದೇ, ಸರಿ ಇದ್ದರೂ ಓದುವುದೇ. ಇಂತಹ ಪರಿಸ್ಥಿತಿ ಬಂದಿದೆ. ಉಪ ಪ್ರಶ್ನೆ ಕೇಳಿದರೆ ನಮ್ಮ ಹತ್ತಿರ

ಮಾಹಿತಿ ಇಲ್ಲ, ತರಿಸಿಕೊಡುತ್ತೇವೆ ಎಂದು ಹೇಳುವುದು. ಏಕೆ ಈ ಪರಿಸ್ಥಿತಿ ಬಂದಿದೆ ಎಂದು ಹೇಳಿದರೆ ಕಾರ್ಯಾಂಗ ಇವತ್ತು ಪ್ರತಿ ಒಂದು ಹಂತದಲ್ಲಿಯೂ ಕೂಡ ಪ್ರಜಾಪ್ರಭುತ್ವದ ನಿಯಮದ ಪ್ರಕಾರ ಶಾಸಕಾಂಗಕ್ಕೆ ಅಧೀನವಾಗಿರಬೇಕು ಈ ಅಂಶವನ್ನು ಮರೆತು ಅವರೇ ಇವತ್ತು ದೊರೆಗಳು. ಅಧಿಕಾರಿಗಳೇ ಇವತ್ತು ದೊರೆಗಳು. ಶಾಸ ಕರಿಂದ ಪ್ರಾರಂಭವಾಗಿ ಎಲ್ಲಾ ಹಂತದಲ್ಲಿ ಜನ ಪ್ರತಿನಿಧಿಗಳು ಕೂಡ ಅಧಿಕಾರಿಗಳ ಹತ್ತಿರ ಹೋಗಿ ಕೈ ಕಟ್ಟಿಕೊಂಡು ನಿಲ್ಲತಕ್ಕ ಪರಿಸ್ಥಿತಿ ಬಂದಿದೆ. ಹಾಗಾದರೆ ಪ್ರಜಾ ಪ್ರಭುತ್ವದ ನಿಯಮಗಳಿಗೆ ಯಾವ ರೀತಿ ಬೆಲೆ ಕೊಡುತ್ತಿದ್ದಾರೆ ಎನ್ನತಕ್ಕದ್ದು ಬಹಳ ಗಂಭೀರವಾದಂತಹ ಪ್ರಶ್ನೆ. ಅಧಿಕಾರಿಗಳಲ್ಲಿ ಇವತ್ತು ಅಂದರೆ ಕಾರ್ಯಾಂಗದಲ್ಲಿ ವಿಕೇಂದ್ರೀಕರಣ ಆಗಿಲ್ಲ. ಮಾನ್ಯ ನಂಜೇಗೌಡರು ಮಾತನಾಡುವಾಗ ಬಹಳ ಸ್ಪಷ್ಟವಾಗಿ ಹೇಳಿದರು. ಅದನ್ನು ನಾನು ಪುನರಾವರ್ತನೆ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿ ಈ ರಾಜ್ಯದಲ್ಲಿ ಏನಾದರೂ ಆಡಳಿತ ಚುರುಕು ಆಗಿದೆಯಾ ಎಂದು ಹೇಳಿದರೆ ಖಂಡಿತ ಇಲ್ಲ. ಅದರ ಜೊತೆಗೆ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿ ರೆಡ್ ಟೇಪಿಸಂ ಇನ್‌ಕ್ರೀಸ್ ಆಗುತ್ತಿದೆ. ಏಕೆಂದು ಹೇಳಿದರೆ ಒಂದು ಇಲಾಖೆಯಲ್ಲಿ ಎಷ್ಟು ಅಧಿಕಾರಿಗಳ ಅವಶ್ಯಕತೆ ಇದೆಯೋ ಆ ಅವಶ್ಯಕತೆಗಿಂತ ಅತಿ ಹೆಚ್ಚು ಅಧಿಕಾರಿಗಳು ಇರುವುದರಿಂದ ಒಂದು ಪೇಪರ್ 20 ಟೇಬಲನ್ನು ಸುತ್ತಬೇಕಾಗುತ್ತದೆ. ಆ 20 ಟೇಬಲ್ ಸುತ್ತಿ ಒಂದು ಪೇಪರ್ ಅಂತಿಮವಾಗಿ ತೀರ್ಮಾನಕ್ಕೆ ಬರಬೇಕಾದರೆ ಕೆಲವು ತಿಂಗಳುಗಳೇ ಹಿಡಿಯುತ್ತದೆ. ಏಕೆ? ಒಂದು ಇಲಾಖೆಗೆ ಅಷ್ಟೊಂದು ಅಧಿಕಾರಿಗಳು ಅಷ್ಟೊಂದು ಸೂಪರಿಂಟೆಂಡೆಂಟ್‌ಗಳು, ಆ ಇಲಾಖೆಯ ವ್ಯವಸ್ಥೆ; ಅಷ್ಟು ಜನ ಅಧಿಕಾರಿಗಳ ಅವಶ್ಯಕತೆ ಇದೆಯೇ; ಖಂಡಿತ ಅವಶ್ಯಕತೆ ಇಲ್ಲ. ಆ ಅಧಿಕಾರಿಗಳ ಸಂಖ್ಯೆ ಹೆಚ್ಚು ಆಗುತ್ತಿರುವುದರಿಂದಲೇ ರೆಡ್ ಟೇಪಿಸಂ ಅಡ್ಮಿನಿಸ್ಟ್ರೇಷನ್‌ನಲ್ಲಿ ಆಗುತ್ತಾ ಇರತಕ್ಕದ್ದು. ತ್ವರಿತವಾಗಿ ಯಾವುದೇ ಸಮಸ್ಯೆ ಪರಿಹಾರ ಆಗದೇ ಇರತಕ್ಕದ್ದು. ಮಂತ್ರಿಗಳೇ ತಾವೇನಾದರೂ ಆರ್ಡರ್ ಹೊರಡಿಸಿದರೆ ಅದು ಆಚೆಗೆ ಬರಬೇಕಾಗಿದರೆ ತಿಂಗಳುಗಳೇ ಹಿಡಿಯುತ್ತದೆ. ಏಕೆ ಮಂತ್ರಿ ಆದೇಶ ಮಾಡ ಬೇಕು, ಅದು ಪಿಎಸ್‌ಗೆ ಹೋಗಬೇಕು. ಮತ್ತೆ ಕನ್ಸರ್ನ್ಡ್ ಸೆಕ್ರೆಟರಿಗೆ ಹೋಗಬೇಕು. ಮತ್ತೆ ಕನ್ಸರ್ನ್ಡ್ ಆಫೀಸ್ ಸೂಪರಿಂಟೆಂಡೆಂಟ್‌ಗೆ ಹೋಗಬೇಕು, ಮತ್ತೆ ಕ್ಲರ್ಕ್‌ಗೆ ಹೋಗ ಬೇಕು. ಅದಕ್ಕೆ ನೋಟ್ ಹಾಕಲಿಲ್ಲ ಎಂದರೆ ಮತ್ತೆ ಅದರ ಮೇಲೆ ಟಿಪ್ಪಣಿ ಬರೆಯುವನು ಒಬ್ಬ. ಅದರ ಮೇಲೆ ಆರ್ಡರ್ ಮಾಡುವವನು ಇನ್ನೊಬ್ಬ. ಮತ್ತೆ ಟೈಪ್ ಮಾಡುವುದು ಇದೇನು ಸ್ವಾಮಿ ವ್ಯವಸ್ಥೆ. ಎಲ್ಲಾದರೂ ಊಹೆ ಮಾಡುವುದಕ್ಕೆ ಸಾಧ್ಯ ಇದೆಯಾ? ಈ ರೀತಿ ಆಡಳಿತ ವ್ಯವಸ್ಥೆ ಇರುವಾಗ ಸಾಮಾನ್ಯ ಮನುಷ್ಯ ನೊಬ್ಬನಿಗೆ ತ್ವರಿತವಾಗಿ ಸರ್ಕಾರದಿಂದ ನ್ಯಾಯ ಸಿಗುವುದಕ್ಕೆ ಸಾಧ್ಯ ಇಲ್ಲ. ಸರ್ಕಾರದ ಅಭಿವೃದ್ಧಿ ಕಾರ್ಯಗಳು ಆತನಿಗೆ ತಲುಪಲಿಕ್ಕೂ ಕೂಡ ಸಾಧ್ಯ ಇಲ್ಲ.

2. 40 ಪಿ.ಎಂ.

ಇದೊಂದು ಕಡೆಯಾದರೆ ಇನ್ನೊಂದು ಕಡೆ ಕೆಲವು ಇಲಾಖೆಗಳಲ್ಲಿ ಕೆಲಸ ಮಾಡುವುದಕ್ಕೆ ಜನರು ಇಲ್ಲ. ಇದರ ಬಗ್ಗೆ ಒಂದು ಉದಾಹರಣೆ ಕೊಡತ್ತೇನೆ. ಈಗ ಕೃಷಿ

ಸಚಿವರಾದ ಬೈರೇಗೌಡರು ಸದನದಲ್ಲಿ ಉಪಸ್ಥಿತರಿದ್ದಾರೆ. ಕೃಷಿ ಇಲಾಖೆಯಲ್ಲಿ ಒಂದೇ ಕಡೆಯವರು ಸೇರಿಕೊಂಡು ಬಿಟ್ಟಿದ್ದಾರೆ. ನಮ್ಮ ರಾಜ್ಯದ ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ರೀತಿಯ ಭಾಷೆ, ಸಮಸ್ಯೆಗಳಿವೆ. ಕೋಲಾರ ಜಿಲ್ಲೆಯಲ್ಲಿ ಬಿಜಾಪುರ ಜಿಲ್ಲೆಯವರು ತುಂಬಿಕೊಂಡಿದ್ದಾರೆ. ಕೋಲಾರ ಜಿಲ್ಲೆಯವರಿಗೆ ಅಲ್ಲಿನ ಕನ್ನಡ ಭಾಷೆಯೇ ಅರ್ಥವಾಗುವುದಿಲ್ಲ, ನಮ್ಮ ಕಡೆ ಮಾತನಾಡುವುದು ತೆಲುಗು ಭಾಷೆ. ಬಿಜಾಪುರ ಜಿಲ್ಲೆಯವರ ಕನ್ನಡ ಭಾಷೆಯಂತೂ ನಮ್ಮ ರೈತರಿಗೆ ಮೊದಲೇ ಅರ್ಥವಾಗುವುದಿಲ್ಲ. ಅವರು ಸಾಮಾನ್ಯ ರೈತರ ಹತ್ತಿರ ಹೋಗಿ ಕೃಷಿ ಬಗ್ಗೆ ಕೇಳಿದರೆ ಅವರ ಭಾಷೆ ಅರ್ಥವಾಗದಿರುವ ಪರಿಸ್ಥಿತಿಯಿರುವಾಗ, ಅವರು ಕೃಷಿ ಬಗ್ಗೆ ಏನಾದರೂ ಸಲಹೆ ಕೊಟ್ಟರೆ ಆ ರೈತ ಹೇಗೆ ಅದನ್ನು ಅನುಸರಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದು ವಾಸ್ತವಿಕ ಪ್ರಶ್ನೆಯಾಗಿದೆ. ಇದಕ್ಕೆ ಕಾರಣವೇನೆಂದರೆ, ವೈಪರೀತ್ಯಗಳು. ಆಯ್ಕೆ ಮಾಡುವಾಗ ವೈಪರೀತ್ಯಗಳು, ನೇಮಕ ಮಾಡುವಾಗ ವೈಪರೀತ್ಯಗಳು. ಹೀಗೆಲ್ಲಾ ಆಗಿ ಇವೊತ್ತು ಯಾವ ಕನಿಷ್ಠ ಉದ್ದೇಶ ಸರ್ಕಾರಕ್ಕಿದೆಯೋ, ಆ ಉದ್ದೇಶ ಒಳ್ಳೆಯದೋ? ಕೆಟ್ಟದ್ದೋ? ಒಟ್ಟಿನಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರಕ್ಕೆ ಉದ್ದೇಶವಿದೆಯೋ ಆ ಉದ್ದೇಶ ಒಬ್ಬ ಸಾಮಾನ್ಯ ಮನುಷ್ಯನಿಗೆ ತಲುಪದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಎರಡನೆಯದಾಗಿ, ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಹೇಳುವುದಾದರೆ, ಒಟ್ಟು 253 ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಒಂದೊಂದು ಇಲಾಖೆಯಲ್ಲೂ ಈ ಅಧಿಕಾರಿಗಳ ಕೆಲಸ ಏನೆಂದರೆ, ಅವರು ಏನು ಕೆಲಸ ಮಾಡುತ್ತಾರೆ? ಯಾವ ರೀತಿಯಾಗಿ ಅವರು ಇವೊತ್ತು ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗುತ್ತದೆ? ನಮ್ಮ ಅನುಭವದ ಆಧಾರದ ಮೇಲೆ ಹೇಳುವುದಾದರೆ, ಐ.ಎ.ಎಸ್. ಪದವಿ ಎಂದರೆ ತಾವು ಸರ್ವಜ್ಞರು ಎಂದು ಅವರು ತಿಳಿದುಕೊಂಡಿದ್ದಾರೆ, ನಾವೂ ಸಹ ಹಾಗೆ ತಿಳಿದು ಕೊಂಡಿದ್ದೇವೆ. ಅವರು ಹೇಳುವುದೆಲ್ಲವೂ ಬ್ರಹ್ಮವಾಕ್ಯ, ಅದರಲ್ಲಿ ಮತ್ತೆ ಯಾವುದೇ ಬದಲಾವಣೆ ಇಲ್ಲ. ಅವರುಗಳು ಮಂತ್ರಿಗಳು ಏನು ಹೇಳಿದರೂ ಕೇಳುವುದಿಲ್ಲ, ಶಾಸಕರು ಏನು ಹೇಳಿದರೂ ಕೇಳುವುದಿಲ್ಲ, ಇನ್ನು ಯಾರು ಏನು ಹೇಳಿದರೂ ಕೂಡ ಕೇಳುವುದಿಲ್ಲ. ಅವರಿಗೆ ಸ್ವತಃ ಪ್ರಾಕ್ಟಿಕಲ್ ಆಗಿ ತಿಳಿವಳಿಕೆ ಇದೆಯೇ? ಡಿ.ಸಿ. ಆಗಲಿ, ಎ.ಸಿ. ಆಗಲಿ ಇನ್ನೊಬ್ಬ ಅಧಿಕಾರಿಗಳಿಗಾಗಲೀ ತಿಳಿವಳಿಕೆ ಇದೆಯೇ ಎಂದರೆ ಅವರಿಗೆ ಅದರ ಬಗ್ಗೆ ಗಂಧವೇ ಇಲ್ಲ. ಇಂತಹ ಪರಿಸ್ಥಿತಿಯಿರುವ ಸಂದರ್ಭದಲ್ಲಿ ಐ.ಎ.ಎಸ್. ಅಧಿಕಾರಿಗಳ ಅವಶ್ಯಕತೆ ನಮಗಿದೆಯೇ? It is definitely a Constitution of Imperialist forces who ruled over us. ಜಗತ್ತಿನ ಯಾವುದೇ ದೇಶದಲ್ಲೂ ಸಹ ನಮ್ಮ ದೇಶದಲ್ಲಿರುವಂತೆ ಐ.ಎ.ಎಸ್. ಅಧಿಕಾರಿಗಳಿಲ್ಲ. ಐ.ಎ.ಎಸ್. ಅಧಿಕಾರಿಗಳೆಂದರೆ, ಅತಿ ಉನ್ನತ ಸ್ಥಾನದಲ್ಲಿರುವವರು, ಯಾವುದೇ ವಿಷಯವಾಗಿ ಒಂದು ತೀರ್ಮಾನ ತೆಗೆದು ಕೊಳ್ಳುವ ಸಂದರ್ಭದಲ್ಲಿ ಅವರಿಗೆ ಪ್ರಾಯೋಗಿಕವಾಗಿ ಅನುಭವವಿಲ್ಲದೆ ಹೋದಾಗ ಅವರು ವಾಸ್ತವಿಕ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದುದರಿಂದ, ಇವೊತ್ತು ಸರ್ಕಾರ ಇಡೀ ಆಡಳಿತ ಯಂತ್ರಾಂಗದ ವ್ಯವಸ್ಥೆ ಬಗ್ಗೆ ಪುನರ್ ಆಲೋಚಿಸಬೇಕಾಗಿದೆ. ಯಾವ ಸರ್ಕಾರ ಆಡಳಿತ ಯಂತ್ರಾಂಗವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲವೋ ಆ ಸರ್ಕಾರ ಸರಿಯಾದ ರೀತಿಯಲ್ಲಿ ಆಡಳಿತ ನಡೆಸುವುದಕ್ಕೆ ಖಂಡಿತಾ

ಸಾಧ್ಯವಾಗುವುದಿಲ್ಲ. ಆಡಳಿತ ಯಂತ್ರಾಂಗದಲ್ಲಿರುವ ಲೋಪ-ದೋಷಗಳನ್ನು ಸರಿಪಡಿಸುವುದಕ್ಕೆ ಅಧಿಕಾರ ವಿಕೇಂದ್ರೀಕರಣದ ತತ್ವವನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳಲ್ಲಿರುವ ಕೆಂಪು ಪಟ್ಟಿ (ರೆಡ್ ಟೇಪಿಸಂ) ಯನ್ನು ಕಡಿಮೆಗೊಳಿಸುವುದಕ್ಕೆ ಮತ್ತು ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದರೆ ಶಾಸಕಾಂಗಕ್ಕೆ ಅತ್ಯುನ್ನತವಾದ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ಸರಿಯಾದ ಬೆಲೆ ಸಿಗುತ್ತದೆ. ಇನ್ನು ಆರೋಗ್ಯ ಇಲಾಖೆ ಕುರಿತು ಹೇಳಬೇಕೆಂದರೆ, ಇದೊಂದು ಅನಾರೋಗ್ಯ ಇಲಾಖೆ. ಇದು ಖಂಡಿತವಾಗಿಯೂ ಆರೋಗ್ಯ ಇಲಾಖೆಯಲ್ಲ. ತನ್ನಲ್ಲಿರತಕ್ಕ ಎಲ್ಲಾ ಅನಾರೋಗ್ಯಗಳ ಲಕ್ಷಣಗಳನ್ನು ಇವೊತ್ತು ಜನರಿಗೆ ವರ್ಗಾಯಿಸುತ್ತಿದೆ. ಇಡೀ ಕರ್ನಾಟಕ ರಾಜ್ಯದಲ್ಲಿರುವ ಯಾವುದಾದರೊಂದು ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಬೇಕು. ತಾವು ಅನುಭವವಿರತಕ್ಕಂಥವರೂ ಕೂಡ ಸರ್ಕಾರಿ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದೀರಿ. ಸರ್ಕಾರಿ ಆಸ್ಪತ್ರೆಗಳಲ್ಲಿ ಕಾಯಿಲೆಯಿಂದ ಬಳಲಿ ಬರುವ ಮನುಷ್ಯನಿಗೆ ರೋಗ ಗುಣಪಡಿಸುವುದಕ್ಕೆ ಅಗತ್ಯವಾಗಿರುವ ವಾತಾವರಣವೇ ಇಲ್ಲ. ಕಾಯಿಲೆಯ ಮನುಷ್ಯನೊಬ್ಬ ಸರ್ಕಾರಿ ಆಸ್ಪತ್ರೆಯೊಳಗೆ ಹೋದರೆ, ಆತನಿಗೆ ಒಂದು ಕಾಯಿಲೆ ಬಂದಿದ್ದರೆ ಆಸ್ಪತ್ರೆಗೆ ಹೋಗುತ್ತಲೇ ಎರಡು-ಮೂರು ಇತರೆ ಕಾಯಿಲೆಗಳೂ ಹೆಚ್ಚಿಗೆ ಬರುತ್ತವೆ. ಆಸ್ಪತ್ರೆಗಳಲ್ಲಿರುವ ಹಾಸಿಗೆಗಳ ವ್ಯವಸ್ಥೆ ಗಮನಿಸಿದರೆ ಹೇಸಿಗೆಯಾಗುತ್ತದೆ, ವಾಕರಿಕೆ ಬರುತ್ತದೆ. ಅಂತಹ ಹಾಸಿಗೆ ಮೇಲೆ ಅನಾರೋಗ್ಯದಿಂದ ಬಳಲುತ್ತಿರುವ ರೋಗಿಯೊಬ್ಬ ಮಲಗಬೇಕು. ಹಾಸಿಗೆಗಳಲ್ಲಿ ತಿಗಣೆ, ಸುತ್ತಮುತ್ತಲೂ ಸೊಳ್ಳೆಗಳ ಕಾಟ.... ಮುಂತಾದುವನ್ನು ಹೇಳುತ್ತಾ ಹೋದರೆ ಉದ್ದದ ಪಟ್ಟಿಯೇ ಬೆಳೆಯುತ್ತದೆ. ಇದಕ್ಕಿಂತ ಮುಖ್ಯವಾಗಿ ರೋಗಿಗಳಿಗಿರುವ ಸ್ನಾನದ ಕೊಠಡಿ ಮತ್ತು ಶೌಚಾಲಯ ವ್ಯವಸ್ಥೆಯನ್ನು ದಯವಿಟ್ಟು ನೋಡಬೇಕು. ಇದನ್ನೆಲ್ಲಾ ನೋಡಿದರೆ ಇವರೇಕೇ ಅಧಿಕಾರದಲ್ಲಿರಬೇಕು? ಅಧಿಕಾರಿಗಳು ಏಕಿರಬೇಕು? ಅವರ ಕೆಲಸವೇನು? ವೈದ್ಯರಾಗಿಲಿ, ಅಧೀಕ್ಷಕರಾಗಲೀ, ಅವರ ಕೆಲಸವೇನು? ಅವರು ಸ್ವಚ್ಛಗೊಳಿಸುವ ಕೆಲಸ ಮಾಡುವುದಿಲ್ಲ, ಸ್ವಚ್ಛಗೊಳಿಸುವುದಕ್ಕೆ ಅವರಿಗೆ ಸಿಬ್ಬಂದಿ ಇದೆ. ಅವರ ಸೇವೆಯನ್ನು ಉಪಯೋಗಿಸಿ ಕೊಂಡು ಆಸ್ಪತ್ರೆಯ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಳ್ಳತಕ್ಕ ಕನಿಷ್ಠ ಪ್ರಜ್ಞೆ ಇಲ್ಲದಿರುವವರು ಅಲ್ಲಿರುವ ವೈದ್ಯರು. ಏಕೆ ಹಾಗಾಗಿದೆ? ವೈದ್ಯರಾಗಿರುವವರು ಯಾರು? ಸಾಮಾನ್ಯ ಮನುಷ್ಯನೊಬ್ಬನ ಮಗ ಇವೊತ್ತು ಈ ದೇಶದಲ್ಲಿ ವೈದ್ಯನಾಗುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿ ಸಾಮಾನ್ಯ ರೈತನ ಮಗನೊಬ್ಬ ವೈದ್ಯನಾಗುವುದಕ್ಕೆ ಸಾಧ್ಯವಿಲ್ಲ. ಯಾರಿಗೆ ಇವೊತ್ತು ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲು ಸಾಧ್ಯವಿದೆಯೋ ಅವರುಗಳು ಮಾತ್ರ ವೈದ್ಯರುಗಳಾಗುತ್ತಾರೆ. ವೈದ್ಯ ಪದವಿ ಪಡೆದರೆ ನಾವು ನೇರವಾಗಿ ಆಕಾಶದಿಂದಿಳಿದು ಬಂದಿದ್ದೇವೆನ್ನುವ ಭಾವನೆ ಒಂದೆಡೆಯಿದ್ದರೆ ಇನ್ನೊಂದು ಕಡೆ ಸಾಮಾನ್ಯ ಜನರ ಪರಿಸ್ಥಿತಿ ಬಗ್ಗೆ ಅರಿವು ಇರುವುದಿಲ್ಲ. ಸರ್ಕಾರಿ ಆಸ್ಪತ್ರೆಗೆ ಯಾರು ಬಡವರು ಬರುತ್ತಾರೋ, ಅವರ ಬಗ್ಗೆ ಕಾಳಜಿ ಇಲ್ಲದಿರುವಂಥ ವೈದ್ಯರೇ ಅಲ್ಲಿರುತ್ತಾರೆ. ವೈದ್ಯರುಗಳು ಇವೊತ್ತಿನ ದಿವಸ ಹಳ್ಳಿಗಾಡುಗಳಲ್ಲಿರುವ ಆಸ್ಪತ್ರೆ ಗಳಿಗೆ ಸೇವೆ ಮಾಡಲು ಹೋಗುವುದಿಲ್ಲ. ನನ್ನ ಕ್ಷೇತ್ರದಲ್ಲಿರುವ ಆಸ್ಪತ್ರೆಗೆ ವೈದ್ಯರನ್ನು ಹಾಕಿಸಿಕೊಳ್ಳುವುದಕ್ಕೆ ಒಂದೂವರೆ ವರ್ಷಗಳಿಂದ ಸತತವಾಗಿ ಆರೋಗ್ಯ ಮತ್ತು ಕುಟುಂಬ

ಕಲ್ಯಾಣ ಮಂತ್ರಿಗಳ ಜೊತೆ ಯುದ್ಧವಾಗುತ್ತಿದೆ. ಆದರೆ, ಇವೊತ್ತಿನವರೆವಿಗೂ ಅಲ್ಲಿನ ಆಸ್ಪತ್ರೆಗೆ ವೈದ್ಯರನ್ನು ಹಾಕಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇವೊತ್ತು ಕೋಲಾರ ಜಿಲ್ಲೆಯ ಹಳ್ಳಿಗಾಡಿನ ಪ್ರದೇಶಗಳಲ್ಲಿರುವ 36 ಆಸ್ಪತ್ರೆಗಳಿಗೆ ವೈದ್ಯರುಗಳಿಲ್ಲ. ಇನ್ನು ಇಡೀ ರಾಜ್ಯ ದಲ್ಲಿ ಬೇರೆ ಕಡೆಗಳಲ್ಲಿರುವ ಆಸ್ಪತ್ರೆಗಳ ಪರಿಸ್ಥಿತಿ ಏನು ಎಂಬುದರ ಬಗ್ಗೆ ಉದಾಹರಣೆ ಕೊಟ್ಟೆ. ಅದೇ ರೀತಿ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿರುವ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರುಗಳಿಲ್ಲ. ಇಂತಹ ಸಂದರ್ಭಗಳಲ್ಲಿ ಆಸ್ಪತ್ರೆಗೆ ಮಹಿಳೆಯರು ಬಂದಾಗ ಅವರಿಗೆ ಸಂಬಂಧಪಟ್ಟ ಕಾಯಿಲೆಗಳಿದ್ದರೆ ಅಥವಾ ಹೆರಿಗೆಯಾಗಬೇಕಿದ್ದರೆ ಮಹಿಳಾ ವೈದ್ಯರಿಲ್ಲದಿರು ವುದರಿಂದ ಬೆಂಗಳೂರಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ವಿದ್ಯಾಭ್ಯಾಸ, ಆರೋಗ್ಯ ವನ್ನು ಒದಗಿಸಿಕೊಡುವುದು ಯಾವುದೇ ಒಂದು ನಾಗರೀಕ ಸರ್ಕಾರದ ಪ್ರಪ್ರಥಮ ಸಾಮಾಜಿಕ ಜವಾಬ್ದಾರಿಯಾಗಿದೆ. ಆದರೆ, ಅದು ಇವೊತ್ತು ಪ್ರಮುಖ ಜವಾಬ್ದಾರಿಯಲ್ಲ, ಸಾಮಾಜಿಕ ಹೊಣೆಗಾರಿಕೆಯಲ್ಲ ಬದಲಾಗಿ ಅಧು ಅನುತ್ಪಾದಕವೆನ್ನುವ ಅಭಿಪ್ರಾಯಕ್ಕೆ ಸರ್ಕಾರ ಬರುತ್ತದೆ. ಹಾಗಾಗಿ ಇಡೀ ಆರೋಗ್ಯ ಇಲಾಖೆ ಅಲಕ್ಷ್ಯಕ್ಕೊಳಗಾಗಿದೆ. ಇನ್ನು ಆಸ್ಪತ್ರೆಗಳಿಗೆ ಸರಬರಾಜು ಮಾಡುವ ಔಷಧಿಗಳ ಪರಿಸ್ಥಿತಿ ನೋಡಿದರೆ ನಿಜವಾಗಿಯೂ ಭಯವಾಗುತ್ತದೆ. ಔಟ್-ದೇಟೆಡ್ ಔಷಧಿಗಳನ್ನು ಪೂರೈಸುತ್ತಾರೆ, ಔಷಧಿಗಳನ್ನು ಉಪ ಯೋಗಿಸುವ ದಿನಾಂಕ ಮುಗಿದುಹೋಗಿರುತ್ತದೆ. ಮತ್ತು ಉಪಯೋಗಿಸಬಾರದೆಂದು ಇಡಲಾದ ಔಷಧಿಗಳನ್ನು ಕೊಡುತ್ತಾರೆ. ಇನ್ನು ಕೆಲವು ಆಸ್ಪತ್ರೆಗಳಲ್ಲಿ ಯಾವುದೇ ಔಷಧಿಗಳಿರುವುದಿಲ್ಲ. ಹಳ್ಳಿಗಾಡಿನ ಪ್ರದೇಶಗಳಲ್ಲಿ ಮುಖ್ಯವಾಗಿ ಯಾರಿಗಾದರೂ ಹಾವು ಕಡಿದರೆ ಔಷಧಿ ಇಲ್ಲ. ಹಾವು ಕಡಿದ ತಕ್ಷಣ ವೈದ್ಯಕೀಯ ಸೌಲಭ್ಯ ಸಿಗದಿದ್ದರೆ ವ್ಯಕ್ತಿ ಬದುಕುವುದಿಲ್ಲ. ಸರ್ವೇಸಾಮಾನ್ಯವಾಗಿ ಎಲ್ಲಾ ಹಳ್ಳಿಗಾಡಿನ ಪ್ರದೇಶಗಳಲ್ಲೂ ಹಾವು ಕಡಿತ, ಚೇಳು ಕಡಿತ ಮಾಮೂಲಾಗಿರುವುದರಿಂದ ಅದರ ಚಿಕಿತ್ಸೆಗೆ ಅಗತ್ಯವಾಗಿ ಬೇಕಾಗಿರತಕ್ಕ ಔಷಧಿಗಳಾಗಲೀ, ಇಂಜೆಕ್ಷನ್‌ಗಳಾಗಲೀ ಯಾವುದೇ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲ. ಇನ್ನು ವರ್ಷಕ್ಕೆ ಇಂತಿಷ್ಟು ಪ್ರಮಾಣದಲ್ಲಿ ಔಷಧಿಗಳನ್ನು ಖರೀದಿಸಬೇಕೆಂದು ಹಣ ಒದಗಿಸಿದರೆ ಔಷಧಿಗಳ ಖರೀದಿ ಸಂದರ್ಭದಲ್ಲಿ ಹಲವಾರು ರೀತಿಯ ಅವ್ಯವಹಾರ ಗಳಾಗುತ್ತದೆ. ಔಷಧಿಗಳ ಖರೀದಿಗಾಗಿ ಸರ್ಕಾರ ಒಂದು ಸಾವಿರ ರೂಪಾಯಿಗಳನ್ನು ಆಸ್ಪತ್ರೆಗೆ ಬಿಡುಗಡೆ ಮಾಡಿದರೆ ಆ ಹಣ ಬರುವ ಎಲ್ಲಾ ಹಂತಗಳಲ್ಲೂ ಸೋರಿ ಹೋಗಿ ಕೊನೆಗೆ ನೂರು ರೂಪಾಯಿಯಾಗಿ ಉಳಿಯುತ್ತದಾದ್ದರಿಂದ ಆ ಹಣದಲ್ಲಿ ಯಾವ ಔಷಧಿಯನ್ನು ಖರೀದಿಸಲು ಸಾಧ್ಯ? ಇವೊತ್ತು ಯಾವುದೇ ಆಸ್ಪತ್ರೆಗೆ ಹೋದರೂ ಔಷಧಿಗಾಗಿ ವೈದ್ಯರು ಚೀಟಿ ಬರೆದು ಕೊಡುತ್ತಾರೆ. ಆ ಔಷಧಿಯನ್ನು ಔಷಧಿ ಅಂಗಡಿಯಿಂದ ಖರೀದಿಸಿಕೊಳ್ಳಬೇಕು. ಕೆಲವು ವೈದ್ಯರುಗಳು ತಾವೇ ಸ್ವತಃ ಔಷಧಿ ಅಂಗಡಿಗಳನ್ನು ತೆರೆದಿದ್ದು, ಅಲ್ಲಿಯೇ ಔಷಧಿಗಳನ್ನು ಖರೀದಿಸಬೇಕೆಂದು ಚೀಟಿಯನ್ನು ಬರೆದುಕೊಡುತ್ತಾರೆ. ಇದು ವ್ಯಾಪಕವಾಗಿರುವುದರಿಂದ, ಇಂತಹ ಪರಿಸ್ಥಿತಿಯನ್ನು ನಿಯಂತ್ರಿಸಲು ಹಿಂದೆ ಆಡಳಿತ ನಡೆಸಿದಂಥ ಮತ್ತು ಈಗ ಆಡಳಿತ ನಡೆಸುತ್ತಿರತಕ್ಕ ಸರ್ಕಾರ ಆ ಕುರಿತು ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಏನಾಗಿದೆಯೆಂದರೆ, ಸಾಮಾನ್ಯ ಮನುಷ್ಯನಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಬಹಳ ಸುಲಭ ರೀತಿಯಲ್ಲಿ ಚಿಕಿತ್ಸಾ ಸೌಲಭ್ಯ ಸಿಗುತ್ತಿಲ್ಲ.

ಇನ್ನು ನರ್ಸಿಂಗ್ ಹೋಂಗಳ ವಿಚಾರವಾಗಿ ಹೇಳುರುದಾದರೆ, ಇವೊತ್ತು ಯಾವುದೇ ವೈದ್ಯರು ಕೆಲಸಕ್ಕೆ ಬರುವುದಿಲ್ಲ. ಅವರಿಗೆ ಕೆಲಸ ಕೊಡುತ್ತೇವೆಂದರೂ ಬರುವುದಿಲ್ಲ. ಏಕೆಂದರೆ, ಅವರು ತಾವು ವೈದ್ಯರೆಂದು ಒಂದು ಫಲಕ ಹಾಕಿಕೊಂಡು, ಒಂದು ಔಷಧಿ ಅಂಗಡಿ ತೆರೆದರೆ ಸರ್ಕಾರಿ ಸಂಬಳಕ್ಕಿಂತ ಜಾಸ್ತಿ ಸಂಪಾದಿಸಬಹುದು. ಹಾಗಾಗಿ, ಸರ್ಕಾರಿ ನೌಕರಿಗೆ ಅವರು ಬರುವುದಿಲ್ಲ. ಎಲ್ಲಿ ನೋಡಿದರೂ ನರ್ಸಿಂಗ್ ಹೋಂಗಳು ತಲೆಯೆತ್ತುತ್ತಿವೆ. ನರ್ಸಿಂಗ್‌ಹೋಂ ಯಾರಿಗೆ ಬೇಕಾಗಿದೆಯೆಂದರೆ ಕೇವಲ ಶ್ರೀಮಂತರಿಗೆ ಮಾತ್ರ ಅದರ ಅಗತ್ಯವಿದೆ. ನಿಮಗೆ ಗೊತ್ತಿದೆ, ನನಗಿಂತಲೂ ಅನುಭವವಿರುವವರು ನೀವಾಗಿದ್ದೀರಿ. ಇವೊತ್ತು ಬೆಂಗಳೂರಿನಲ್ಲಿರುವ ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್‌ಹೋಂಗಳಲ್ಲಿ ಲಕ್ಷಗಟ್ಟಳೆ ಹಣ ಸಂಪಾದಿಸಿ ಲೂಟಿ ಹೊಡೆಯುತ್ತಾರೆ. ಇವೊತ್ತು ಸಾಮಾನ್ಯ ಮನುಷ್ಯನೊಬ್ಬನಿಗೆ ಹೃದಯಕ್ಕೆ ಸಂಬಂಧಿಸಿದ ರೋಗ ಬಂದರೆ ಪ್ರತಿಷ್ಠಿತ ಮಣಿಪಾಲ್ ಆಸ್ಪತ್ರೆಗೋ, ಮಲ್ಯ ಆಸ್ಪತ್ರೆಗೋ ಇಲ್ಲವೇ ವೊಕಾರ್ಡ್ ಆಸ್ಪತ್ರೆಗೆ ಹೋಗತಕ್ಕ ಪರಿಸ್ಥಿತಿ ಈ ದೇಶದಲ್ಲಿ ಎಷ್ಟು ಜನರಿಗಿದೆ?. ಸಾಮಾನ್ಯ ಮನುಷ್ಯರಿಗೆ ಆ ರೀತಿಯಾದ ಖಾಯಿಲೆ ಬಂದರೆ ಅವರುಗಳೆಲ್ಲಿ ಹೋಗಬೇಕು? ಸರ್ಕಾರಿ ಆಸ್ಪತ್ರೆಗಳಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಸೌಲಭ್ಯಗಳಿಲ್ಲ; ವೈದ್ಯರುಗಳಿಲ್ಲ. ಆದ್ದರಿಂದ ಸಾಮಾನ್ಯ ಮನುಷ್ಯರಿಗೆ ಬರತಕ್ಕ ಖಾಯಿಲೆಯನ್ನು ಗುಣಪಡಿಸಲು ಈಗಿನ ಆರೋಗ್ಯ ಇಲಾಖೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಪ್ರತಿಯೊಬ್ಬ ನಾಗರೀಕನಿಗೂ ಆರೋಗ್ಯವನ್ನು ಕೊಡತಕ್ಕದ್ದು ಸರ್ಕಾರದ ಸಾಮಾಜಿಕ ಹೊಣೆಗಾರಿಕೆಯೆಂಬ ಪ್ರಜ್ಞೆಯೇ ಇಲ್ಲ. ಆದ್ದರಿಂದಲೇ ಖಾಸಗಿ ವೈದ್ಯಕೀಯ ಕಾಲೇಜುಗಳು ಹುಟ್ಟಿಕೊಳ್ಳುತ್ತಿವೆ. ಖಾಸಗಿ ಮೆಡಿಕಲ್ ಕಾಲೇಜುಗಳನ್ನು ತೆರೆಯಲು ಅವಕಾಶ ಮಾಡಿಕೊಟ್ಟು ಸರ್ಕಾರ ತನ್ನ ಜವಾಬ್ದಾರಿಯಿಂದ ಕೈತೊಳೆದುಕೊಂಡು ಯಾರಿಗೆ ಹಣವಿರುತ್ತದೆ ಅವರು ವೈದ್ಯರಾಗಬಹುದು, ಯಾರಿಗೆ ಹಣವಿರುತ್ತದೆ ಅವರು ಖಾಯಿಲೆಯನ್ನು ವಾಸಿಮಾಡಿಕೊಳ್ಳಬಹುದಾಗಿದೆ. ಹಣವಿಲ್ಲದವರು ವೈದ್ಯರಾಗುವಂತಿಲ್ಲ ಮತ್ತು ರೋಗಿಗಳು ಖಾಯಿಲೆಯನ್ನು ವಾಸಿಮಾಡಿಕೊಳ್ಳಲಾರದಂಥ ಪರಿಸ್ಥಿತಿ ಇದೆ. ಪರೋಕ್ಷವಾಗಿ ಇಡೀ ಆರೋಗ್ಯ ಇಲಾಖೆಯನ್ನು ಖಾಸಗೀಕರಣಮಾಡತಕ್ಕ ಪ್ರಯತ್ನ ಇಲ್ಲಾಗಿದೆ. ಯಾರಿಗೆ ಹಣದ ಶಕ್ತಿ ಇರುತ್ತದೆ ಅವರು ಆಸ್ಪತ್ರೆಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡು ಗುಣಮಾಡಿಕೊಳ್ಳಬಹುದಾಗಿದೆ. ಇನ್ನು, ಆಸ್ಪತ್ರೆಗಳಿಗೆ ಕೊಡತಕ್ಕ ಸಲಕರಣೆಗಳ ಬಗ್ಗೆ ಹೇಳುವುದಾದರೆ, ತಾಲ್ಲೂಕು ಕೇಂದ್ರಗಳಲ್ಲಿನ ಆಸ್ಪತ್ರೆಗೆ ಎಕ್ಸರೆ ಯಂತ್ರಗಳನ್ನು ಕೊಟ್ಟಿರುತ್ತಾರೆ. ಇಡೀ ರಾಜ್ಯದಲ್ಲಿ ತಾಲ್ಲೂಕು ಕೇಂದ್ರಗಳ ಆಸ್ಪತ್ರೆಗೆ ಕೊಟ್ಟಿರುವ ಎಕ್ಸರೆ ಯಂತ್ರಗಳಲ್ಲಿ ಎಷ್ಟು ಯಂತ್ರಗಳು ಸರಿಯಾಗಿದೆ ಎಂಬ ಬಗ್ಗೆ ಸರ್ಕಾರ ಪರೀಕ್ಷೆ ಮಾಡಬೇಕು. ಕೆಲವು ಆಸ್ಪತ್ರೆಗಳಲ್ಲಿ ವೈದ್ಯರೇ ಎಕ್ಸರೆಯನ್ನು ತೆಗೆದು ಹಣವನ್ನು ಪಡೆದುಕೊಳ್ಳುತ್ತಾರೆ. ಕೆಲವು ಕಡೆಗಳಲ್ಲಿ ಆ ಯಂತ್ರಗಳು ಕೆಟ್ಟುಹೋಗಿ ಎಷ್ಟೋ ವರ್ಷಗಳಾಗಿದೆ, ರಿಪೇರಿ ಮಾಡಿಲ್ಲ. ಮತ್ತೆ ಕೆಲವು ಕಡೆಗಳಲ್ಲಿ ರೋಗಿಗೆ ಯಾವುದೋ ರೋಗವಿದ್ದರೆ ಆ ಎಕ್ಸರೇ ಯಂತ್ರವು ಮತ್ತೊಂದು ರೋಗವನ್ನು ತೋರಿಸುತ್ತದೆ. ಇಂಥ ವ್ಯವಸ್ಥೆ ಇದೆ. ಪ್ರತಿಯೊಂದು ತಾಲ್ಲೂಕು ಕೇಂದ್ರದ ಆಸ್ಪತ್ರೆಯಲ್ಲಿ ಆಂಬೂಲೆನ್ಸ್ ಇರತಕ್ಕ ವ್ಯವಸ್ಥೆ ಇಲ್ಲವಾಗಿದೆ. ತುರ್ತು ಚಿಕಿತ್ಸೆ ಬೇಕಾದಾಗ, ದೂರದ ಪ್ರದೇಶಕ್ಕೆ ಹೋಗಬೇಕಾದಾಗ ಆಂಬೂಲೆನ್ಸ್ ವಾಹನದ ಸೌಲಭ್ಯವಿಲ್ಲ. ಹಳ್ಳಿಗಾಡಿನ

ಪ್ರದೇಶಕ್ಕೆ ಸರಿಯಾದ ಬಸ್ಸುಗಳ ಸೌಕರ್ಯವಿಲ್ಲ. ಮಧ್ಯರಾತ್ರಿಯಲ್ಲೇನಾದರೂ ಹೆಚ್ಚುಕಡಿಮೆಯಾದರೆ ಅವರು ಯಾವ ಬಸ್ಸನ್ನು ಹಿಡಿದುಕೊಂಡು ಬರಬೇಕು? ಅಂಬೂಲೆನ್ಸ್ ಸೌಲಭ್ಯವಿಲ್ಲ. ಹಾಗಾದರೆ ಸಾಮಾನ್ಯ ಮನುಷ್ಯನ ಆರೋಗ್ಯದ ಪ್ರಶ್ನೆಯೇನು? ಸರ್ಕಾರದ ಜವಾಬ್ದಾರಿಯೇನು? ಸಾಮಾನ್ಯ ಮನುಷ್ಯನ ಆರೋಗ್ಯದ ಹೊಣೆಗಾರಿಕೆಯನ್ನು ಸರ್ಕಾರ ಕೈಬಿಟ್ಟಿದೆ ಆದ್ದರಿಂದ ಸರ್ಕಾರ ಆರೋಗ್ಯದ ಹೊಣೆಗಾರಿಕೆಯನ್ನು ಪ್ರಾಥಮಿಕ ಜವಾಬ್ದಾರಿಯನ್ನಾಗಿ ತಿಳಿದುಕೊಡಲು ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಕ ಮಾಡಲು ಕ್ರಮ ತೆಗೆದುಕೊಳ್ಳಬೇಕು, ಅವಶ್ಯಕ ಔಷಧಿಗಳನ್ನು ಸರಬರಾಜು ಮಾಡಬೇಕು, ಆಸ್ಪತ್ರೆಗಳನ್ನು ಸ್ವಚ್ಛವಾಗಿರಲು ಕ್ರಮ ತೆಗೆದುಕೊಳ್ಳಬೇಕು. ಯಾವ ಅಧಿಕಾರಿಗಳು, ವೈದ್ಯರು ಆಸ್ಪತ್ರೆಯನ್ನು ಸ್ವಚ್ಛವಾಗಿಡಲು ಕ್ರಮ ತೆಗೆದುಕೊಳ್ಳುವುದಿಲ್ಲವೋ ಅಂಥವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ತಪ್ಪಿತಸ್ತ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ತಮ್ಮ ಕಾನೂನಿನಲ್ಲಿ ಹಲವಾರು ಅವಕಾಶಗಳಿವೆ. ಆದರೂ ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ? ಆ ರೀತಿ ತಾವು ಸೂಕ್ತವಾದ ಕ್ರಮ ತೆಗೆದುಕೊಂಡಿದ್ದೇ ಆದಲ್ಲಿ ಯಾರೂ ಕರ್ತವ್ಯ ಲೋಪವನ್ನು ಮಾಡಲು ಸಾಧ್ಯವಾಗುವುದಿಲ್ಲ. ವೈದ್ಯರುಗಳೇಕೆ ಹಳ್ಳಿಗಳಿಗೆ ಹೋಗುವುದಿಲ್ಲ? ಒಂದು ಕಡೆ ಹಳ್ಳಿಗೆ ನೇಮಕ ಮಾಡುತ್ತಾರೆ. ಆದರೆ ಅವರುಗಳು ಬೆಂಗಳೂರಿನಲ್ಲೇ ಇದ್ದು ಅದನ್ನು ರದ್ದುಪಡಿಸಿ ಬಿಡುತ್ತಾರೆ. ನನ್ನ ವೈಯಕ್ತಿಕ ಅನುಭವವನ್ನು ಹೇಳಬೇಕಾದರೆ ನನ್ನ ಕ್ಷೇತ್ರದಲ್ಲಿ ಮೂರು ಮಂದಿ ವೈದ್ಯರನ್ನು ಇದೇ ಸರ್ಕಾರದವರು ನೇಮಕ ಮಾಡಿದರು, ಆದರೆ ಅವರುಗಳು ಅಲ್ಲಿಗೆ ಹೋಗಿ ಕರ್ತವ್ಯದಲ್ಲಿ ನಿರತರಾಗದೇ ಇಲ್ಲೇ ಇದ್ದು ಅದನ್ನು ರದ್ದುಪಡಿಸಿಕೊಂಡುಬಿಟ್ಟರು.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಛೇರ್ಮನ್‌ರವರೇ, ನಿನ್ನೆ ನಾನು ನನ್ನ ಕ್ಷೇತ್ರವಾದ ಶಿಕಾರಿಪುರಕ್ಕೆ ಹೋಗಿದ್ದಾಗ ಅಲ್ಲಿನ ಆಸ್ಪತ್ರೆಯ ಬಗ್ಗೆ ನೂರಾರು ಜನರು ಬಂದು ಹೇಳಿದರು. ಸಂಜೆಯ ವೇಳೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಎರಡು ಮೂರು ಗಂಟೆ ವಿದ್ಯುತ್ ಇರುವುದಿಲ್ಲ. ಅಲ್ಲಿನ ರೋಗಿಗಳಿಂದ ಹಣವನ್ನು ಸಂಗ್ರಹ ಮಾಡಿ ವಿದ್ಯುತ್ ಹೋದಾಗ ಮೇಣದ ಬತ್ತಿಯನ್ನು ಹಚ್ಚಲು ಕೊಂಡುಕೊಂಡಿದ್ದಾಗ ವೈದ್ಯರು ಅದನ್ನೂ ಹಚ್ಚಲು ಆಗಿಲ್ಲದ ಪರಿಸ್ಥಿತಿ ಇದೆ. ನಾವೇನೂ ಅಲ್ಲಿಗೆ ಬಂದು ವಿದ್ಯುತ್ ಅಭಾವವನ್ನು ನೀಗಿಸಿಬಿಡುತ್ತೇವೆಂದು ಹೇಳುವುದಿಲ್ಲ. ಕೊನೆಯ ಪಕ್ಷ ಗ್ಯಾಸ್ ಲೈಟ್‌ನ್ನು ಒದಗಿಸಲು ಏರ್ಪಾಡು ಮಾಡಿದರೆ ಒಳ್ಳೆಯದು. ವೈದ್ಯರು ಶಸ್ತ್ರ ಚಿಕಿತ್ಸೆ ಮಾಡುತ್ತಿರುತ್ತಾರೆ, ಚುಚ್ಚುಮದ್ದನ್ನು ನೀಡುತ್ತಿರುತ್ತಾರೆ ಅಂಥಹ ಸಮಯದಲ್ಲಿ ವಿದ್ಯುತ್ ಹೋದಾಗ ತೊಂದರೆಯಾಗುತ್ತದೆ. ಆದ್ದರಿಂದ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಗ್ಯಾಸ್ ಲೈಟನ್ನು ಒದಗಿಸುವ ಏರ್ಪಾಡು ಮಾಡಬೇಕು. ವಿರೋಧ ಪಕ್ಷದ ನಾಯಕನಾಗಿ ನನ್ನ ಕ್ಷೇತ್ರದ ಆಸ್ಪತ್ರೆಯ ಸ್ಥಿತಿಯ ಬಗ್ಗೆ ಹೇಳುತ್ತಿರಬೇಕಾದರೆ ಯಾವ ಪರಿಸ್ಥಿತಿ ಇರಬಹುದು ನೀವೇ ಊಹೆ ಮಾಡಿಕೊಳ್ಳಿ. ಜನರು ಆಸ್ಪತ್ರೆಯ ಸ್ಥಿತಿಯ ಬಗ್ಗೆ ಆಡಿಕೊಳ್ಳುವ ಸ್ಥಿತಿ ಇದೆ. ನಾವು ನಾಚಿಕೆಯಿಂದ ತಲೆತಗ್ಗಿಸಬೇಕಾದ ಸ್ಥಿತಿ ಇದೆ. ಮೇಣದ ಬತ್ತಿಯನ್ನು ಒದಗಿಸಲು ವ್ಯವಸ್ಥೆ ಮಾಡುತ್ತೇನೆ, ತಮ್ಮಿಂದ ಹಣವನ್ನು ಸಂಗ್ರಹ ಮಾಡದಂತೆ ನೋಡಿಕೊಳ್ಳುತ್ತೇನೆಂದು ಹೇಳಿ ತಲೆತಗ್ಗಿಸಿಕೊಂಡು

ಬರಬೇಕಾಯಿತು. ಆದ್ದರಿಂದ ದಯಮಾಡಿ ಪರ್ಯಾಯವಾದ ವ್ಯವಸ್ಥೆ ಮಾಡುವುದಿದ್ದರೆ ವೈದ್ಯರನ್ನು ನೇಮಕಮಾಡುವುದಿರಲಿ ಗ್ಯಾಸ್ ಲೈಟ್‌ನ್ನು ಒದಗಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಬಿ. ವಿ. ಶ್ರೀರಾಮರೆಡ್ಡಿ :- ಮಾನ್ಯ ಛೇರ್ಮನ್‌ರವರೆ, ಗೃಹ ಇಲಾಖೆಯ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಸಾಕಷ್ಟು ಹೇಳಿದ್ದಾರೆ. ಪೋಲೀಸ್ ಇಲಾಖೆಯನ್ನೇನಾದರೂ ಸರಿಪಡಿಸಬೇಕೆಂದು ಕಾಳಜಿ ಇದ್ದರೆ ಮೊದಲು ಆ ಇಲಾಖೆಯಲ್ಲಿರುವ ನಿಯಮವನ್ನು ಸರಿಪಡಿಸಬೇಕು. ಇವತ್ತು ಪೋಲೀಸ್ ಇಲಾಖೆಯ ಒಬ್ಬ ಪೇದೆಗೆ ಇರತಕ್ಕ ಅಧಿಕಾರ ಈ ರಾಷ್ಟ್ರದ ಅಧ್ಯಕ್ಷರಿಗೆ ಇಲ್ಲ. ಅವನಿಗೆ ಬೇಕಾದಂತೆ ಕಂಪ್ಲೆಂಟನ್ನು ಬರೆಯಬಹುದು, ಆದರೆ ಅವನನ್ಯಾರೂ ಪ್ರಶ್ನೆ ಮಾಡುವಂತಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ, ಒಬ್ಬರು ಗಲಾಟೆಯಲ್ಲಿ ಕೈಯನ್ನು ಮುರಿದುಕೊಂಡುಬಿಟ್ಟಿದ್ದಾರೆ, ಪೋಲೀಸ್ ಠಾಣೆಗೆ ಬಂದು ದೂರನ್ನು ಕೊಟ್ಟರು, ಪೋಲೀಸಿನ ವರು ಅಪರಾಧಿಗಳನ್ನು ಹುಡುಕಿಕೊಂಡು ಬರಲು ಹೋದರೂ ಅದೇನು ಮಾತನಾಡಿ ಕೊಂಡು ಬಂದರೋ ಏನೋ ಸಬ್‌ಇನ್ಸ್‌ಪೆಕ್ಟರ್ ರವರು ಏನು ಬರೆದರು ಎಂಬುದನ್ನು ಹೇಳುತ್ತೇನೆ. ಇವರು ಎತ್ತಿನ ಗಾಡಿಯನ್ನು ಹೊಡೆದುಕೊಂಡು ಬರುತ್ತಿದ್ದರು. ಬಿದ್ದು ಕೈಯನ್ನು ಮುರಿದುಕೊಂಡು ಬಿಟ್ಟಿದ್ದಾರೆಂದು ಬರೆದುಕೊಂಡರು. ಕೈಮುರಿಸಿಕೊಂಡು ಬಂದು ದೂರನ್ನು ಕೊಟ್ಟರೆ ಆ ರೀತಿ ಸಬ್‌ಇನ್ಸ್‌ಪೆಕ್ಟರ್ ಬರೆಯುತ್ತಾನೆ. ಪೋಲೀಸ್‌ನವರಿಗೆ ಯಾವ ರೀತಿ ಅಧಿಕಾರವಿದೆ ಎಂಬುದಕ್ಕೆ ಇದೊಂದೇ ಉದಾಹರಣೆ ಸಾಕು. ಮಾನವಂತ ಮನುಷ್ಯರ್‍ಯಾರೂ ಪೋಲೀಸ್ ಠಾಣೆಗೆ ಹೋಗಿ ಮಾನವತೆಯಿಂದ ಹೊರಗೆ ಬರಲು ಸಾಧ್ಯವಿಲ್ಲ. ಗೌರವಾಗಿರತಕ್ಕವರು ಸ್ವಾಭಿಮಾನವಿರತಕ್ಕವರು ಪೋಲೀಸ್ ಠಾಣೆಗೆ ಹೋದರೆ ಅವರು ಪೋಲೀಸ್‌ನವರಿಗೆ ಹೊಡೆಯಬೇಕು ಇಲ್ಲದಿದ್ದರೆ ಪೋಲೀಸ್‌ನವರಿಂದ ಏಟು ತಿಂದು ಒಳಗೆ ಸೇರಬೇಕಾಗುತ್ತದೆ. ಇನ್ನು ಹೆಣ್ಣುಮಕ್ಕಳಂತೂ ಪೋಲೀಸ್ ಠಾಣೆಗೆ ಹೋಗತಕ್ಕ ಪರಿಸ್ಥಿತಿನೇ ಇಲ್ಲ. ಪೋಲೀಸ್ ಇಲಾಖೆಯವರು ಅಪರಾಧಿಗಳ ಮೇಲೆ ಕೇಸನ್ನು ದಾಖಲು ಮಾಡುತ್ತಾರೆ, ಮಾನ್ಯ ಗೃಹಸಚಿವರಾದ ರೋಷನ್‌ಬೇಗ್‌ರವರು ಇಲ್ಲೇ ಇದ್ದಾರೆ, ತಮ್ಮ ಇಲಾಖೆಯವರು ಹಾಕಿರುವ ಕೇಸುಗಳಲ್ಲಿ ಎಷ್ಟು ಕೇಸುಗಳು ಕೋರ್ಟ್‌ನವರು ಎತ್ತಿಹಿಡಿದಿದ್ದಾರೆ ಎಂಬ ಬಗ್ಗೆ ಹೇಳಿಬಿಡಿ. ಏಕೆ ಪೋಲೀಸ್‌ನವರು ಹಾಕಿರುವ ಕೇಸುಗಳನ್ನು ಕೋರ್ಟ್ ಒಪ್ಪಿಕೊಳ್ಳುವುದಿಲ್ಲ? ಏಕೆಂದರೆ ಕೊಲೆ ಕೇಸಿಗೆ ಎಫ್.ಐ.ಆರ್. ಬರೆಯತಕ್ಕವರು ಪೇದೆ, ಅವನ ಕ್ವಾಲಿಫಿಕೇಷನ್ ಎಸ್.ಎಸ್.ಎಲ್.ಸಿ. ಅವರು ಬರೆದಂಥ ಎಫ್.ಐ.ಆರ್.ನ್ನು ಕೋರ್ಟ್‌ನಲ್ಲಿ ವಾದ ಮಾಡುವವರು ಎರಡು ಪದವಿಯನ್ನು ಪಡೆದಿರುವ ವಕೀಲರು, ಅದರ ಬಗ್ಗೆ ತೀರ್ಮಾನ ಕೊಡತಕ್ಕವರು ಮೂರು ಪದವಿಯನ್ನು ಪಡೆದಿರುವ ನ್ಯಾಯಮೂರ್ತಿಗಳು. ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿ ದಂಥವರು ಎಫ್.ಐ.ಆರ್. ಮತ್ತು ಚಾರ್ಜ್ ಶೀಟನ್ನು ಬರೆದು ಅದರ ಮೇಲೆ ಕೋರ್ಟ್‌ಗೆ ಹೋದರೆ ಯಾವ ಕೇಸುತಾನೇ ಉಳಿದುಕೊಳ್ಳುತ್ತದೆ ನೀವೇ ಯೋಚನೆ ಮಾಡಿ. ಪೋಲೀಸ್‌ನವರು ಹಾಕಿದಂಥ ಕೇಸುಗಳಲ್ಲಿ ನೂರಕ್ಕೆ ತೊಂಭತ್ತು ಭಾಗ ಕೇಸುಗಳು ಫೇಲ್ಯೂರ್ ಆಗುತ್ತದೆ. ಇದರ ಬಗ್ಗೆ ತಾವು ಕನಿಷ್ಟ ಆಲೋಚನೆ ಮಾಡು ವುದಿಲ್ಲವೇ? ಹತ್ತಾರು ವರ್ಷಗಳ ಅನುಭವ ಪಡೆದಿರುವ ನ್ಯಾಯಮೂರ್ತಿಗಳು

ತೀರ್ಮಾನ ಮಾಡುತ್ತಾರೆ, ಎರಡು ಪದವಿ ಪಡೆದಿರುವ ವಕೀಲರು ವಾದ ಮಾಡುತ್ತಾರೆ, ಆದರೆ ಕೇಸನ್ನು ಬರೆಯುವವರು ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿರುವ ಪೇದೆ. ಹೀಗಾದರೆ ನಿಮ್ಮ ಕೇಸುಗಳು ಕೋರ್ಟ್‌ನಲ್ಲಿ ಹೇಗೆ ಸ್ಟ್ಯಾಂಡ್ ಆಗುತ್ತದೆ? ಸಾಮಾನ್ಯ ಜನರಲ್ಲಿ ಪೋಲೀಸ್ ಕೇಸುಗಳಲ್ಲಿ ಏತಕ್ಕೆ ನಂಬಿಕೆ ಹೋಗುತ್ತಿದೆಯೆಂದರೆ ಬಹುಪಾಲು ಪೋಲೀಸ್ ಕೇಸ್‌ಗಳು ಕೋರ್ಟ್‌ನಲ್ಲಿ ಉಳಿಯುವುದಿಲ್ಲ. ಏಕೆಂದರೆ ಎಫ್.ಐ.ಆರ್. ಬರೆಯುವವನಿಗೆ ಕಾಗುಣಿತವೇ ಬರುವುದಿಲ್ಲ, ಇನ್ನು ಕಾನೂನನ್ನೆಲ್ಲಿಂದ ಬರೆಯುತ್ತಾನೆ? ಪೋಲೀಸ್ ಠಾಣೆಯಲ್ಲಿ ರೈಟರ್ ಇರುತ್ತಾನೆ, ಅವನ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಅವನೇ ಎಲ್ಲವನ್ನೂ ಬರೆಯುವುದು. ಅವನಿಗೆ ತಾನು ಏನು ಬರೆಯುತ್ತಿದ್ದೇನೆ, ಕಾನೂನೇನಿದೆ ಎಂಬುದು ಗೊತ್ತೇ ಇಲ್ಲ. ಅದನ್ನು ತಂದು ವಕೀಲರು ವಾದಮಾಡಿದರೆ ಹೇಗೆತಾನೇ ಕೋರ್ಟ್‌ನಲ್ಲಿ ಕೇಸು ಉಳಿಯುತ್ತದೆ? ಈಗ ಬಂಗಾರಪೇಟೆಯಲ್ಲಿ ಲಾಕಪ್ ಡೆತ್ ಆಗಿದೆ, ಅದರ ಬಗ್ಗೆ ಕೋರ್ಟ್‌ಗೆ ಪೋಲೀಸ್ ಕೇಸು ಬರುತ್ತದೆ, ಆ ಕೇಸು ಕೋರ್ಟ್‌ನಲ್ಲಿ ಉಳಿಯುತ್ತದೆಯೇ? ಖಂಡಿತಾ ಉಳಿಯುವುದಿಲ್ಲ. ಎಫ್.ಐ.ಆರ್.ನ ಆಧಾರದ ಮೇಲೆಯೇ ಕೋರ್ಟ್‌ನಲ್ಲಿ ಕೇಸು ಉಳಿಯುವುದಿಲ್ಲ. ಇದರಿಂದ ಸಾಮಾನ್ಯ ಮನುಷ್ಯ ನಿಗೆ ಪೋಲೀಸ್ ಇಲಾಖೆಯ ಮೇಲೆ ಯಾವ ರೀತಿಯಲ್ಲಿ ನಂಬಿಕೆ ಬರುತ್ತದೆ? ಇನ್ನು ಪೋಲೀಸ್ ಸಿಬ್ಬಂದಿಗೆ ಎಷ್ಟು ಭ್ರಷ್ಟತನ, ದುರಹಂಕಾರವಿದೆಯೆಂದರೇ, ಅವರಿಗೆ ಪ್ರಜಾ ಪ್ರಭುತ್ವದ ಗಂಧ, ಗಾಳಿಯೇ ಗೊತ್ತಿಲ್ಲ. ಏಕೆಂದರೆ ಪೋಲೀಸರಿಗೆ ಪೋಲೀಸ್ ಅಕಾಡೆಮಿಯಲ್ಲಿ ತರಬೇತಿ ನೀಡುವಾಗ ಅವರಿಗೆ ಆಲೋಚನೆ ಮಾಡುವುದನ್ನು ಹೇಳಿ ಕೊಡುವುದಿಲ್ಲ, Follow the order ಎಂದು ಮಾತ್ರ ಹೇಳಿಕೊಡುತ್ತಾರೆ. ಸಬ್ ಇನ್ಸ್‌ಪೆಕ್ಟರ್ ಹೇಳಿದ ಎಂದರೆ ಪೇದೆ ಹೊಡೆಯುವುದು ಎಸ್.ಪಿ. ಹೇಳಿದರೆಂದರೆ ಸಬ್ ಇನ್ಸ್‌ಪೆಕ್ಟರ್ ಹೊಡೆಯುವುದು ಇಷ್ಟೇ ಹೇಳಿಕೊಡುವುದು. ಮತ್ತು ಮನುಷ್ಯರು ಸಾಮಾನ್ಯವಾಗಿ ಮಾತನಾಡುವ ಭಾಷೆಯನ್ನು ಪೋಲೀಸ್‌ನವರು ಮಾತನಾಡಬಾರದೆಂದೂ ಸಹ ತರಬೇತಿ ಕೊಡುತ್ತಾರೆ. ಸೌಜನ್ಯದಿಂದ ಮಾತನಾಡತಕ್ಕದ್ದು ಪೋಲೀಸ್ ಇಲಾಖೆ ಯಲ್ಲಿ ಇಲ್ಲವೇ ಇಲ್ಲ. ಮಾನ್ಯ ಸಿಂಧ್ಯಾರವರಿಗೂ ಅದು ಗೊತ್ತಿದೆ. ತುರ್ತುಪರಿಸ್ಥಿತಿ ಯಲ್ಲಿ ಅವರು ಅನುಭವಿಸಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಛೇರ್ಮನ್‌ರವರೇ, ಯಾರೋ ನಾಲ್ಕೈದು ಜನ ಪೋಲೀಸ್‌ನವರು ಆ ರೀತಿ ನಡೆದುಕೊಂಡಿರಬಹುದು. ಆದರೆ ಪೋಲೀಸ್ ಸಿಲಬಸ್ ಚೆನ್ನಾಗಿಯೇ ಇದೆ. ನಾನು ಅದನ್ನು ಓದಿದ್ದೇನೆ. ಮಾನ್ಯ ಸದಸ್ಯರು ಏನು ಬೇಕಾದರೂ ಹೇಳಿಕೊಳ್ಳಲಿ. ಆದರೆ ಹೇಳಿದಂತೆ ಸಿಲಬಸ್‌ನಲ್ಲಿ ಇಲ್ಲ. ನಮ್ಮ ರಾಜ್ಯದಲ್ಲಿ ಡಾ : ಕೃಷ್ಣಮೂರ್ತಿಯೆನ್ನುವವರು ತರಬೇತಿ ವಿಭಾಗದ ಮುಖ್ಯಸ್ಥರಿ ದ್ದಾರೆ. ಪೋಲೀಸ್ ತರಬೇತಿ ಕಾಲೇಜಿಗೆ, ಅಕಾಡೆಮಿಗೆ ಒಬ್ಬರು ಪ್ರಾಚಾರ್ಯರಿದ್ದಾರೆ. ಅದು ಬಹಳ ಒಳ್ಳೆಯ ತರಬೇತಿ ಶಾಲೆ, ಉತ್ತಮವಾದ ತರಬೇತಿಯನ್ನು ಪೋಲೀಸ್ ಅಧಿಕಾರಿಗಳಿಗೆ ಅಲ್ಲಿ ಕೊಡುತ್ತಿದ್ದಾರೆ. ಪೇದೆ ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿ ರುವವನು ಎಫ್.ಐ.ಆರ್. ಬರೆಯುತ್ತಾನೆ, ಅದನ್ನು ಹಲವಾರು ಪದವಿಯನ್ನು ಪಡೆ ದಿರುವವರು ತೀರ್ಮಾನ ಮಾಡುತ್ತಾರೆ ಎಂದು ಹೇಳುವುದು ಸರಿಯಾಗಿದೆ. ಆದರೆ

ಇರತಕ್ಕ ಪದ್ಧತಿಯನ್ನು ಅಭಿವೃದ್ಧಿ ಮಾಡುವ ಬಗ್ಗೆ ತಮ್ಮ ಸಲಹೆಗಳನ್ನು ಹೇಳಿ. ಅದನ್ನು ಅಳವಡಿಸಿಕೊಳ್ಳಲು ಪ್ರಯತ್ನ ಮಾಡೋಣ. ಇಡೀ ರಾಜ್ಯದಲ್ಲಿ 750 ಪೋಲೀಸ್ ಠಾಣೆಗಳಿವೆ. ಅಲ್ಲಿ ಬರೆಯತಕ್ಕವರೆಲ್ಲಾ ಮುಖ್ಯಪೇದೆಗಳೇ ಆದರಲ್ಲಿ ಅನೇಕಮಂದಿ ಪದವೀಧರರು ಮತ್ತು ಸ್ನಾತಕೋತ್ತರರು ಇದ್ದಾರೆ. ಎಸ್.ಪಿ. ಮಟ್ಟದ ಅಧಿಕಾರಿಗಳು ಅವರಿಗೆ ತರಬೇತಿಯನ್ನು ಕೊಡುವುದೂ ಇದೆ. ಪ್ರತಿಯೊಂದಕ್ಕೂ ಡಿಫರೆಂಟ್ ಕೋರ್ಸ್‌ಸ್ ಇದೆ. ನಿಮ್ಮದೇನಾದರೂ ಈ ಬಗ್ಗೆ ಸಲಹೆ ನೀಡುವುದಿದ್ದರೆ ನೀಡಿ. ಆದರೆ ನಿಮಗೆ ಏನು ಹೇಳಬೇಕೆನಿಸುತ್ತದೋ ಅದಕ್ಕೆ ದಯವಿಟ್ಟು ಸಿಂಧ್ಯಾರವರನ್ನು ಸಾಕ್ಷಿಯಾಗಿ ತೆಗೆದು ಕೊಳ್ಳಲಿಕ್ಕೆ ಹೋಗಬೇಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಸಿಂಧ್ಯಾರವರನ್ನು ನಾನು ಸಾಕ್ಷಿಯಾಗಿ ತೆಗೆದುಕೊಳ್ಳುತ್ತೇನೆ ಎಂದು ಹೇಳಲಿಲ್ಲ. ಮಾನ್ಯ ಸಿಂಧ್ಯಾರವರು ಬಹಳ ಅನುಭವಸ್ಥರಿದ್ದಾರೆ ಎಂದಷ್ಟೇ ನಾನು ಹೇಳಿದೆ. ಏಕೆಂದರೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನಾವಿಬ್ಬರೂ ಹೆಚ್ಚುಕಡಿಮೆ....

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ನಿಮಗೆ ಏನು ಅನಿಸುತ್ತದೆಯೋ ಅದನ್ನು ನನ್ನ ಬಾಯಲ್ಲಿ ಹೇಳಿಸಬೇಡಿ.

ಶ್ರೀ ಎ. ರುಕ್ಮಯ್ಯ ಪೂಜಾರಿ :- ಮಾನ್ಯ ಸಿಂಧ್ಯಾರವರು ತಮ್ಮ ಒಳ್ಳೆಯ ಅನುಭವವನ್ನು ಹೇಳಿದರು. ಆದರೆ ನನ್ನ ಅನುಭವ ಕೆಟ್ಟ ಅನುಭವ. ನಾನು 55 ದಿನ ತುರ್ತು ಪರಿಸ್ಥಿತಿ ಸಮಯದಲ್ಲಿ ಪೋಲೀಸ್ ಕಸ್ಟಡಿಯಲ್ಲಿ ಇದ್ದೇ, ಜೈಲಿನಲ್ಲಿ ಅಲ್ಲ. 30 ದಿನ ಒಂದೇ ಸ್ಟೇಷನ್‌ನಲ್ಲಿ ಇದ್ದೆ. ಉಳಿದ 25 ದಿನ ನಮ್ಮ ರಾಜ್ಯದ ಬೇರೆ ಬೇರೆ ಸ್ಟೇಷನ್‌ಗಳಲ್ಲಿ ನಮ್ಮನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಹಾಕಿದ್ದರು. ಆ ಜೈಲಿನಲ್ಲಿ ಇದ್ದಂತಹ ಖೈದಿಗಳೊಂದಿಗೆ ನಮ್ಮನ್ನು ಇಂಟರ್‌ಡ್ಯೂಸ್ ಮಾಡಿಸಿದರು. ಇವರು ಕೇರಳದಿಂದ ಬಂದಂತಹ ಕಳ್ಳರು, ಇವರನ್ನು ನಾವು ಎನ್‌ಕ್ವೈರಿ ಮಾಡಲಿಕ್ಕೆ ಕರೆದುಕೊಂಡು ಬಂದಿದ್ದೇವೆ ಎಂದು ಹೇಳಿ ನಮಗೆ ಪರಿಚಯ ಮಾಡಿಸಿದರು. ಈ ರೀತಿ ಕೂಡ ನನಗೆ ಅನುಭವ ಇದೆ. ನಿಮಗೆ ಒಳ್ಳೆಯ ಅನುಭವ ಇದೆ, ಆದರೆ ನನಗೆ ಆದದ್ದು ಕೆಟ್ಟ ಅನುಭವ. ಪೋಲೀಸ್ ಸ್ಟೇಷನ್‌ನಲ್ಲಿ ನಮಗೆ ಏರೋಪ್ಲೇನ್, ಚಪಾತಿ ಎಲ್ಲದರ ಅನುಭವವೂ ಆಗಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಜೊತೆಯಲ್ಲಿ ಅನುಭವಿಸಿದಂತಹವರೇ ಇವತ್ತು ಈ ರೀತಿ ಹೇಳಿಬಿಟ್ಟರೆ ನಮ್ಮ ಪರಿಸ್ಥಿತಿ ಏನಾಗಬೇಕು. ತುರ್ತು ಪರಿಸ್ಥಿತಿ ಸಮಯದಲ್ಲಿ ಮಾನ್ಯ ಸಿಂಧ್ಯಾರವರೂ ಕೂಡ ಅದೇ ಪರಿಸ್ಥಿತಿಯನ್ನು ಅನುಭವಿಸಿದ್ದಾರೆ, ನಾನೂ ಕೂಡ ಅನುಭವಿಸಿದ್ದೇನೆ. ಆದರೂ ಇವತ್ತು ಮಾನ್ಯ ಸಿಂಧ್ಯಾರವರು ಈ ರೀತಿ ಹೇಳಿ ಬಿಟ್ಟರೆ ನಮ್ಮ ಪರಿಸ್ಥಿತಿ ಏನಾಗಬೇಕು, ನಾನೇನು ಸಾಕ್ಷಿಗೆ ಅವರನ್ನು ಕೇಳುತ್ತಿಲ್ಲ. ಅವರ ಅನುಭವವನ್ನಷ್ಟೇ ಹೇಳಿದೆ. ಏಕೆಂದರೆ ಅದನ್ನು ನಾನು ನೋಡಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ ಅವರು ಹೇಳಿದ ಹಾಗೆ....

ಶ್ರೀ ಬಿ. ಎಸ್. ಯಡಿಯೂರಪ್ಪ :- ಆಡಳಿತ ಪಕ್ಷದಲ್ಲಿ ಇದ್ದಾಗ ಸತ್ಯ ಹೇಳುವುದಕ್ಕಾಗುವುದಿಲ್ಲ ಅಷ್ಟೆ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :- ಆಡಳಿತ ಪಕ್ಷದಲ್ಲಿ ಇದ್ದಾಗ ಸತ್ಯ ಹೇಳಬಾರದು ಎಂದು ಏನೂ ಇಲ್ಲ. ಅವರು ಹೇಳಬಹುದು, ಅದಕ್ಕೆ ಅವರು ಯಾರೂ ಅಡ್ಡಿ ಬರುವುದಿಲ್ಲ. ಈಗ ಮಾನ್ಯ ಸಿಂಧ್ಯಾರವರು ಹೇಳಿದರು....

ಛೇರ್ಮನ್ :- ಅವರಿಗೆ ಅನೇಕ ಜನರ ಜೊತೆಗೆ ಇದ್ದು ಅನುಭವ ಇದೆ. ಆಮೇಲೆ ಪ್ರತಿಪಕ್ಷದ ಉಪನಾಯಕರಾಗಿ ಕೂಡ ಅನುಭವ ಇದೆ. ಹಾಗೆಯೇ ಗೃಹ ಖಾತೆಯ ಮಂತ್ರಿಗಳಾಗಿ ಸಹ ಅನುಭವ ಇದೆ. ಅದನ್ನು ಹೇಗೆ ಸುಧಾರಣೆ ಮಾಡಬೇಕೆನ್ನುವ ವಿಚಾರ ಅವರಲ್ಲಿದೆ. ಆದರೂ ಅವರು ತಮ್ಮನ್ನು ಸಲಹೆ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ವೈ. ರಾಮಕೃಷ್ಣ :- ಮಂತ್ರಿಗಳಾದರೇನು ಸ್ವಾಮಿ, ಸತ್ಯ ಹೇಳುತ್ತಾರೆ. ಮಾನ್ಯ ಬೈರೇಗೌಡರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಶೇಕಡ 90 ರಷ್ಟು ಹಣ ಸಾಯಿಲ್ ಕನ್‌ಸರ್‌ವೇಷನ್‌ನಲ್ಲಿ ಅವ್ಯವಹಾರವಾಗಿ 135 ಜನರನ್ನು ಅರೆಸ್ಟ್ ಮಾಡಿದ್ದೇವೆ ಎಂದು ಅವರು ಹೇಳಿದ್ದಾರೆ. ಅದು ಅವರ ಪ್ರಾಮಾಣಿಕತೆ ಮತ್ತು ಎಫಿಷಿಯನ್ಸಿ ತೋರಿಸುತ್ತದೆ. ನಿಜವಾಗಿಯೂ ಕೂಡ ಇದಕ್ಕಾಗಿ ಅವರಿಗೆ ನಾವು ರೆಸ್ಪೆಕ್ಟ್ ಕೊಡಬೇಕು.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :- ಮಾನ್ಯ ಸಿಂಧ್ಯಾರವರ ಪ್ರಾಮಾಣಕತೆಯನ್ನು ನಾನಿಲ್ಲಿ ಪ್ರಶ್ನೆ ಮಾಡುತ್ತಿಲ್ಲ. ಏಕೋ ಅವರು ನಿಜ ಹೇಳಲಿಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಅದರಿಂದೇನೂ ತೊಂದರೆಯಿಲ್ಲ ಬಿಡಿ ಮಾನ್ಯ ಸಿಂಧ್ಯಾರವರು ಪೋಸ್ಟ್ ಗ್ರಾಜುಯೇಟ್ಸ್ ಬಹಳ ಜನ ಪೊಲೀಸ್ ಸ್ಟೇಷನ್‌ಗಳಲ್ಲಿ ಇದ್ದಾರೆ ಎಂದು ಹೇಳಿದರು. ಎಲ್ಲೋ ಒಂದೆರಡು ಪೊಲೀಸ್ ಸ್ಟೇಷನ್‌ಗಳಲ್ಲಿ ಎಫ್.ಐ.ಆರ್. ಮತ್ತು ಚಾರ್ಜ್‌ಷೀಟ್ ಬರೆಯ ತಕ್ಕವರು ಪೋಸ್ಟ್ ಗ್ರಾಜುಯೇಟ್ಸ್ ಇರಬಹುದು. ಆದರೆ ಜನರಲ್ಲಾಗಿ ಎಲ್ಲಾ ಪೊಲೀಸ್ ಸ್ಟೇಷನ್‌ನಲ್ಲಿ ಪೋಸ್ಟ್ ಗ್ರಾಜಯೇಟ್ಸ್ ಮತ್ತು ಟ್ರೈನ್ಡ್ ಆಗಿರತಕ್ಕವರು ಇದ್ದಾರೆ ಎಂದು ಮಾನ್ಯ ಸಚಿವರು ಹೇಳತಕ್ಕದ್ದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಆ ರೀತಿ ಏನಾದರೂ ಇದ್ದರೆ, ಅವರು ಆ ಬಗ್ಗೆ ಅಂಕಿ ಅಂಶಗಳನ್ನು ಕೊಡಲಿ; ನಾನು ಹೇಳಿದ ಮಾತಿನಲ್ಲಿ ತಪ್ಪು ಇದ್ದರೆ, ನಾನು ಖಂಡಿತ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳಲಿಕ್ಕೆ ತಯಾರಿದ್ದೇನೆ. ಮಾನ್ಯ ಸಚಿವರು ಹೇಳುವಂತಹ ಪರಿಸ್ಥಿತಿ ಖಂಡಿತಾ ಇಲ್ಲ. ಅದನ್ನು ಪ್ರಾಮಾಣಿಕ ವಾಗಿ ಸರ್ಕಾರ ಒಪ್ಪಬೇಕು. ಪೊಲೀಸ್ ಇಲಾಖೆಯನ್ನು ನೀವು ಸಂಪೂರ್ಣವಾಗಿ, ಆಮೂಲಾಗ್ರವಾಗಿ ಬದಲಾವಣೆ ಮಾಡದೇ ಹೋದರೆ ಆಡಳಿತ ಸುಧಾರಣೆ ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಪೊಲೀಸ್ ಇಲಾಖೆಗೆ ಹಲವಾರು ವೈಜ್ಞಾನಿಕ ಪದ್ಧತಿಗಳು ಬಂದಿವೆ. ಅವುಗಳನ್ನು ಅಳವಡಿಸಿಕೊಳ್ಳಲಿಕ್ಕೆ ಏಕೆ ಅವರು ಹಿಂದೇಟು ಹಾಕುತ್ತಿದ್ದಾರೆ. ಈಗ ಲಾಕಪ್‌ಡೆತ್‌ಗಳು ಏಕಾಗುತ್ತಿವೆ ಎಂದರೆ, ನೂರು ವರ್ಷಗಳ ಹಿಂದೆ ಇದ್ದಂತಹ ಹಳೆಯ ಪದ್ಧತಿಗಳನ್ನೇ ಇವತ್ತೂ ಕೂಡ ಇಂಟರಾಗೇಷನ್‌ನಲ್ಲಿ ಉಪಯೋಗಿಸುತ್ತಿದ್ದಾರೆ. ಹಲವಾರು ವೈಜ್ಞಾನಿಕ ಸಲಕರಣೆಗಳು, ಉಪಕರಣಗಳು ಈಗ ಬಂದಿದೆ. ಅವುಗಳನ್ನು

ಇಂಟರಾಗೇಟ್ ಮಾಡಲಿಕ್ಕೆ ಏಕೆ ಅಳವಡಿಸಿಕೊಳ್ಳಬಾರದು? ಪೊಲೀಸ್ ಸ್ಟೇಷನ್‌ಗೆ ಹೋದವರನ್ನೆಲ್ಲಾ ಅಪರಾಧಿಗಳು ಎಂದು ತೀರ್ಮಾನ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಪೊಲೀಸ್ ಸ್ಟೇಷನ್‌ನಲ್ಲಿ ಒಳ್ಳೆಯವರ ಮೇಲೂ ಕೇಸ್ ಹಾಕುತ್ತಾರೆ. ಕೆಟ್ಟವರ ಮೇಲೂ ಕೇಸ್ ಹಾಕುತ್ತಾರೆ. ಇಂಟರಾಗೇಷನ್ ಮಾಡತಕ್ಕ ವಿಧಾನದಲ್ಲಿ ನೀವೇಕೆ ಬದಲಾವಣೆ ಮಾಡಬಾರದು? ಇವತ್ತು ಈ ದಿಸೆಯಲ್ಲಿ ಹಲವಾರು ರೀತಿಯ ಸುಧಾರಣೆಗಳಾಗಿವೆ. ಅದನ್ನು ಏಕೆ ನೀವು ಅಳವಡಿಸಿಕೊಳ್ಳಬಾರದು? ಅಂತಹವುಗಳನ್ನು ಅಳವಡಿಸಿದಂತಹ ಸಂದರ್ಭದಲ್ಲಿ ಈ ರೀತಿಯ ಅನಾಹುತಗಳು ಆಗಲಿಕ್ಕೆ ಸಾಧ್ಯವಿಲ್ಲ. ಲಾಕಪ್‌ಡೆತ್ ಇತ್ಯಾದಿಗಳು ಆಗಲಿಕ್ಕೆ ಸಾಧ್ಯವಿಲ್ಲ ಪೊಲೀಸ್‌ನವರಲ್ಲಿ ಕೆಲವರು ಒಳ್ಳೆಯವರು ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಪೊಲೀಸ್‌ನವರ ಬಗ್ಗೆ ಸಾಮಾನ್ಯ ಜನರಿಗೆ ಇರತಕ್ಕ ಅಭಿಪ್ರಾಯ ಏನು? ಅದು ನಾವು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಸಾಮಾನ್ಯ ಮನುಷ್ಯನೊಬ್ಬನಿಗೆ ಪೊಲೀಸರ ಬಗ್ಗೆ ತದ್ವಿರುದ್ಧ ವಾದಂತಹ ಅಭಿಪ್ರಾಯ ಇದೆ. ಪೊಲೀಸ್ ನವರ ಬಗ್ಗೆ ಇವತ್ತು ಸಾಮಾನ್ಯ ಮನುಷ್ಯನಿಗೆ ಆಕ್ರೋಶ ಇದೆ. ಸಾಮಾನ್ಯ ಮನುಷ್ಯ ಪೊಲೀಸ್‌ರನ್ನು ತನ್ನ ಒಬ್ಬ ಶತ್ರು ಎಂದು ಭಾವಿಸತಕ್ಕ ಅಭಿಪ್ರಾಯ ಆತನಿಗಿದೆ. ಪೊಲೀಸ್ ಸ್ಟೇಷನ್‌ಗೆ ಹೋದರೆ ಇವತ್ತು ನ್ಯಾಯ ಸಿಗುತ್ತದೆ ಎಂಬ ಅಭಿಪ್ರಾಯ ಸಾಮಾನ್ಯ ಮನುಷ್ಯನಿಗೆ ಇಲ್ಲ. ಆ ಸಾಮಾನ್ಯ ಮನುಷ್ಯನ ದೃಷ್ಟಿಯಿಂದ ನಾವು ನೋಡಬೇಕು. ಸಾಮಾನ್ಯ ಮನುಷ್ಯನ ದೃಷ್ಟಿಯಲ್ಲಿ ಪೊಲೀಸರ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ. ಇವತ್ತು ಗೃಹ ಇಲಾಖೆ ಇರಲಿ ಅಥವಾ ಇನ್ನಾವುದೇ ಇಲಾಖೆಯ ಆಡಳಿತವನ್ನು ನಡೆಸಲಿ, ಅದನ್ನು ಸಾಮಾನ್ಯ ಮನುಷ್ಯನೊಬ್ಬನ ದೃಷ್ಟಿಯಿಂದ ಆಡಳಿತವನ್ನು ನಡೆಸಬೇಕೇ ಹೊರತು ಯಾರೋ ಕೆಲವರ ದೃಷ್ಟಿಯಿಂದ ಆಡಳಿತವನ್ನು ನಡೆಸತಕ್ಕದ್ದಲ್ಲ ಅವರಿಗೋಸ್ಕರ ಸುಧಾರಣೆ ಮಾಡತಕ್ಕದ್ದಲ್ಲ. ಇಡೀ ಪೊಲೀಸ್ ಇಲಾಖೆ ಇವತ್ತು ಆಮೂಲಾಗ್ರವಾಗಿ ಬದಲಾವಣೆಯಾಗಬೇಕು. ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತೇನೆ, ಪ್ರತಿಯೊಂದು ಪೊಲೀಸ್ ಸ್ಟೇಷನ್‌ಗೆ ಎಫ್.ಐ.ಆರ್. ಬರೆಯುವ ಸಲುವಾಗಿ ಒಬ್ಬ ಟ್ರೈನ್ಡ್ ಗ್ರಾಜುಯೇಟ್‌ಅನ್ನು ಪೋಸ್ಟ್ ಮಾಡಿ. ಈಗ ಒಬ್ಬ ರೈಟರ್ ಎಂದು ಪೊಲೀಸ್ ಸ್ಟೇಷನ್‌ನಲ್ಲಿ ಏನು ಇರುತ್ತಾನೋ, ಆ ರೈಟರ್ ಪೋಸ್ಟ್‌ಗೆ ಒಬ್ಬ ಪ್ರೊಫೆಷನಲ್ ಅಡ್ವೋಕೇಟ್ ಅಥವಾ ಲಾ ಗ್ರಾಜುಯೇಟ್ ಅನ್ನು ನೀವೇಕೆ ಅಲ್ಲಿ ಪೋಸ್ಟ್ ಮಾಡಬಾರದು? ಪ್ರತಿಯೊಂದು ಪೊಲೀಸ್ ಸ್ಟೇಷನ್‌ನಲ್ಲಿ ಎಫ್.ಐ.ಆರ್. ಬರೆಯಲಿಕ್ಕೆ ಲಾ ಗ್ರಾಜುಯೇಟ್ ಅನ್ನು ನೀವೇಕೆ ನೇಮಿಸಬಾರದು? ತಾವು ಅವರನ್ನು ಪೋಸ್ಟ್ ಮಾಡಿಬಿಟ್ಟರೆ ಎಲ್ಲಾ ಸರಿ ಹೋಗುತ್ತದೆ ಎಂದು ನಾನು ಹೇಳುವುದಿಲ್ಲ. ಕನಿಷ್ಟ ಸ್ವಲ್ಪ ಮಟ್ಟಿಗಾದರೂ ಅದನ್ನು ಸುಧಾರಣೆ ಮಾಡಲಿಕ್ಕೆ ಸಾಧ್ಯವಿದೆಯಾದ್ದರಿಂದ ನೀವೇಕೆ ಅವರನ್ನು ಪೋಸ್ಟ್ ಮಾಡಬಾರದು? ಅದೇ ರೀತಿಯಲ್ಲಿ ಇಂಟರಾಗೇಷನ್ ಮಾಡತಕ್ಕ ಬೇರೆ ಬೇರೆ ವಿಧಾನಗಳೇನಿವೆ, ಅದನ್ನು ಬದಲಾವಣೆ ಮಾಡಬೇಕು. ಈಗಿರತಕ್ಕ ಪೊಲೀಸ್ ಕಾನೂನಿನಲ್ಲೂ ಸಹ ನೀವು ಕೆಲವೊಂದು ನಿಯಮಗಳನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಇವತ್ತು ಪೊಲೀಸರಿಗೆ ಹೆಚ್ಚು ಅಧಿಕಾರ ಇದೆ. ಅಂತಹ ನಿಯಮವನ್ನು ನೀವು ತಿದ್ದುಪಡಿ ಮಾಡಬೇಕಾಗುತ್ತದೆ. ಇವತ್ತು ಒಬ್ಬ ಪೊಲೀಸ್ ಅಧಿಕಾರಿ ಏನು ಬೇಕಾದರೂ ಮಾಡಬಹುದು. ಈ ರೀತಿ ಪೊಲೀಸ್ ಅಧಿಕಾರಿಗೆ ಇರುವ ಅಧಿಕಾರವನ್ನು ಸ್ವಲ್ಪ ಕಡಿಮೆ ಮಾಡಿ. ಬೇರೆ ಬೇರೆ ಹಂತಗಳಲ್ಲಿ ಅಧಿಕಾರವನ್ನು

ವಿಕೇಂದ್ರೀಕರಣ ಮಾಡಿ. ಪೊಲೀಸ್ ಸ್ಟೇಷನ್‌ನಲ್ಲಿ ಒಂದು ಎಫ್.ಐ.ಆರ್. ಬರೆಯ ಬೇಕಾದರೆ ಮೇಲಿನ ಅಧಿಕಾರಿಗಳು ಅದನ್ನು ಅಪ್ರೂವ್ ಮಾಡಬೇಕು ಎಂಬಂತಹ ರೀತಿಯಲ್ಲಾದರೂ ಒಂದು ವ್ಯವಸ್ಥೆ ತನ್ನಿ. ಇಲ್ಲದಿದ್ದರೆ ಅವರು ಏನು ಬರೆಯುತ್ತಾರೋ ಅದೇ ಎಫ್.ಐ.ಆರ್. ಆಗುತ್ತದೆ ಎನ್ನುವಂತಹ ಪರಿಸ್ಥಿತಿ ಬಂದು ಬಿಡುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :– ನಡೆದಂತಹ ಘಟನೆಯನ್ನು ಬರೆಯುವುದೇ ಎಫ್.ಐ.ಆರ್. ಇನ್‌ವೆಸ್ಟಿಗೇಷನ್ ಸ್ಟೇಜಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಇರುತ್ತಾರೆ. ಐಪಿಸಿ 302 ರಡಿಯಲ್ಲಿ ಹಾಕಲಾದ ಕೇಸ್‌ಗಳಲ್ಲಿ ಇನ್‌ವೆಸ್ಟಿಗೇಟಿಂಗ್ ಆಫೀಸರ್ ಆಗಿ ಸರ್ಕಲ್ ಇನ್ಸ್‌ಪೆಕ್ಟರ್ ಇರುತ್ತಾರೆ, ದಫೇದಾರ್ ಅಥವಾ ಸೆಂಟ್ರಿ ಏನೂ ಇನ್‌ವೆಸ್ಟಿಗೇಟ್ ಮಾಡುವುದಿಲ್ಲ. ಎಫ್.ಐ.ಆರ್.ಅನ್ನು ತಿದ್ದಿ ಬರೆಯಲಿಕ್ಕೆ ಆಗುವುದಿಲ್ಲ. ನಡೆದಂತಹ ಘಟನೆ ಏನಿದೆ, ಅದನ್ನು ಬಂದು ಹೇಳಿದಾಗ, ಅದನ್ನು ಬರೆದುಕೊಳ್ಳುತ್ತಾರೆ. ದೂರು ಏನು ಬರುತ್ತದೆಯೋ ಅದನ್ನು ಬರೆದುಕೊಳ್ಳುತ್ತಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ದೂರೇ ಎಫ್.ಐ.ಆರ್. ಎಂಬುದು ನನಗೂ ಗೊತ್ತಿದೆ. ಆದರೆ ಆ ದೂರನ್ನು ಪೊಲೀಸಿನವರೇ ಬರೆಸುತ್ತಾರೆ, ಇದು ವಾಸ್ತವಿಕವಾಗಿ ಇರತಕ್ಕ ಪರಿಸ್ಥಿತಿ. ಯಾವ ಮನುಷ್ಯ ಪೊಲೀಸ್ ಸ್ಟೇಷನ್‌ಗೆ ನನಗೆ ಅನ್ಯಾಯವಾಗುತ್ತಿದೆ ಎಂದು ಕಂಪ್ಲೇಂಟ್ ತೆಗೆದುಕೊಂಡು ಬರುತ್ತಾನೋ, ಅವನು ಬರೆ ದಂತಹ ಕಂಪ್ಲೇಂಟ್‌ಅನ್ನು ಪೊಲೀಸಿನವರು ಒಪ್ಪುವುದಿಲ್ಲ, ಅದನ್ನು ಹೀಗೇ ಬರೆಯಿರಿ ಎಂದು ಅವರು ಹೇಳುತ್ತಾರೆ. ಆಗ ಆಗತಕ್ಕದೇ ಕಂಪ್ಲೇಂಟ್. ಕಂಪ್ಲೇಂಟೇ ಎಫ್.ಐ.ಆರ್. ಎಂಬುದು ಕರೆಕ್ಟ್, ಇನ್‌ವೆಸ್ಟಿಗೇಟಿಂಗ್ ಆಫೀಸರ್ ಸರ್ಕಲ್ ಇನ್ಸ್‌ಪೆಕ್ಟರ್ ಎಂಬುದೂ ಕರೆಕ್ಟ್ ಪ್ರಾಕ್ಟಿಕಲ್ ಆಗಿ ಇರತಕ್ಕದ್ದೇ ಬೇರೆ. ಸರ್ಕಲ್ ಇನ್ಸ್‌ಪೆಕ್ಟರ್ ಏನೇನು ಇನ್‌ವೆಸ್ಟಿಗೇಟ್ ಮಾಡುತ್ತಾನೋ, ಇಡೀ ಚಾರ್ಜ್‌ಷೀಟ್‌ನಲ್ಲಿ ಆತ ಏನೇನು ಬರೆಯುತ್ತಾನೋ... ಮಾನ್ಯ ಜಯಪಕಾಶ್ ಹೆಗಡೆಯವರೂ ಕೂಡ ವಕೀಲರು, ತಾತ್ವಿಕವಾಗಿ ಅವರು ಹೇಳುವುದು ಕರೆಕ್ಟ್. ಐ.ಓ. ಸರ್ಕಲ್ ಇನ್ಸ್‌ಪೆಕ್ಟರ್ ಅನ್ನುವುದು ಸರಿ, ಆದರೆ ಇಡೀ ಚಾರ್ಜ್‌ಷೀಟ್‌ನಲ್ಲಿ ಮತ್ತು ಎಫ್.ಐ.ಆರ್.ನಲ್ಲಿ ಆ ಸರ್ಕಲ್ ಇನ್ಸ್‌ಪೆಕ್ಟರ್ ಸ್ವಂತ ಬರೆದಿರತಕ್ಕ ಬರವಣಿಗೆ ಎಷ್ಟು? ಆತನು ಸ್ವತಃ ಇನ್‌ವೆಸ್ಟಿಗೇಟ್ ಮಾಡಿರತಕ್ಕಂತಹ ವಿಷಯಗಳು ಎಷ್ಟಿರುತ್ತವೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಏಕೆಂದರೆ ಮಾನ್ಯ ಜಯಪ್ರಕಾಶ್ ಹೆಗಡೆಯವರೂ ಇಂತಹ ಕೇಸ್‌ಗಳಲ್ಲಿ ವಕೀಲರಾಗಿ ವಾದ ಮಾಡಿರ ಬಹುದು. ಅದು ಥಿಯರಿ ಅಷ್ಟೆ. ಆದರೆ ಪ್ರಾಕ್ಟಿಕಲ್ ಆಗಿ ರಿಯಾಲಿಟಿಯೇ ಬೇರೆ. ನಾವು ಪುಸ್ತಕ ನೋಡಿಕೊಂಡು ಈ ರೀತಿ ಸೆಕ್ಷನ್ ಇದೆ ಎಂದು ಹೇಳಿ ಬಿಟ್ಟರೆ ಆಗುವುದಿಲ್ಲ. ಆದರೆ ರಿಯಾಲಿಟಿ ಆಲ್‌ಟುಗೆದರ್ ಬೇರೆಯಾಗಿಯೇ ಇರುತ್ತದೆ. ಅದನ್ನು ನಾನಿಲ್ಲಿ ಹೇಳುತ್ತಿದ್ದೇನೆ. ಐ.ಓ. ಸರ್ಕಲ್ ಇನ್ಸ್‌ಪೆಕ್ಟರ್, ಕಂಪ್ಲೇಂಟೇ ಎಫ್. ಐ.ಆರ್. ಎನ್ನುವುದೆಲ್ಲಾ ನನಗೂ ಗೊತ್ತಿದೆ. ಆದರೆ ಇದು ಪುಸ್ತಕದಲ್ಲಿ ಇರತಕ್ಕ ಕಾನೂನು. ಆದರೆ ರಿಯಾಲಿಟಿ ಬೇರೆಯದೇ ಆಗಿದೆ. ಆದುದರಿಂದಲೇ ಇವತ್ತು ಪೊಲೀಸ್ ಇಲಾ ಖೆಯಲ್ಲಿ ಸಾಮಾನ್ಯ ಜನರಿಗೆ ನಂಬಿಕೆ ಹೋಗಿದೆ. ಆದುದರಿಂದ ಇಡೀ ಪೊಲೀಸ್ ವ್ಯವಸ್ಥೆಯನ್ನು ಇವತ್ತು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು. ಬದಲಾವಣೆ ಮಾಡತಕ್ಕ ಹಂತದಲ್ಲಿ ಕೆಲವು ನಿಯಮಗಳನ್ನೂ ಕೂಡ ತಿದ್ದುಪಡಿ ಮಾಡಬೇಕಾಗುತ್ತದೆ.

ಎಫ್.ಐ.ಆರ್.ಅನ್ನು ಪೊಲೀಸಿನವರೇ ಬರೆದರೆ, ಚಾರ್ಜ್‌ಷೀಟ್ ಕೂಡ ಅವರೇ ಬರೆದರೆ, ಅದು ಸರಿಯೇ ಈಗಲೂ ಆ ವ್ಯವಸ್ಥೆ ಇದೆ, ಏನು ಚಾರ್ಜ್‌ಷೀಟ್ ಬರೆಯುತ್ತಾರೋ ಅದನ್ನು ಎ.ಪಿ.ಪಿ.ಗೆ ಕಳುಹಿಸುತ್ತಾರೆ. ಆತನು ಅಪ್ರೂವಲ್ ಮಾಡಿ ಕಳುಹಿಸಬೇಕು. ಇದೆಲ್ಲಾ ಕಾನೂನಿನಲ್ಲಿದೆ. ಆದರೆ ವಾಸ್ತವಿಕತೆ ಏನು ಎಂಬುದು ಎಲ್ಲರಿಗೂ ಗೊತ್ತಿದೆ. ಆ ಅಪ್ರೂವಲ್ ಹೇಗೆ ಆಗುತ್ತದೆ, ಇವರು ಹೇಗೆ ಓ.ಕೆ. ಮಾಡುತ್ತಾರೆ, ಅವರು ಹೇಗೆ ಮಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ.

3.10 ಪಿ. ಎಂ.

ಅದರಿಂದ ಏನೂ ಸುಧಾರಣೆ ಮಾಡುವುದಕ್ಕಾಗುವುದಿಲ್ಲ. ಕಾನೂನಿನಲ್ಲಿ ಬದಲಾವಣೆ ಗಳನ್ನು ಮಾಡಿದರೆ ಮಾತ್ರ ಸುಧಾರಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಮಹಿಳಾ ಅಪರಾಧಿಗಳು ಎಂದು ಪೊಲೀಸರು ಕರೆದುಕೊಂಡು ಬಂದರೆ ಆ ಮಹಿಳಾ ಅಪರಾಧಿಗಳನ್ನು ಆ ಪೊಲೀಸ್ ಸ್ಟೇಷನ್‌ನಲ್ಲಿ ಅವರು ನಡೆಸಿಕೊಳ್ಳತಕ್ಕಂತಹ ವಿಧಾನ ಖಂಡಿತವಾಗಿ ಆತ್ಮ ಗೌರವ ಇರತಕ್ಕಂತಹ ಯಾವ ಒಬ್ಬ ಮಹಿಳೆ ಕೂಡ ಪೊಲೀಸ್ ಸ್ಟೇಷನ್‌ಗೆ ಹೋದರೆ ಅವರು ಮತ್ತೆ ಆತ್ಮ ಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಈ ದೇಶದಲ್ಲಿದೆ. ಆದ್ದರಿಂದ ಮಹಿಳಾ ಪೋಲೀಸರನ್ನು ಹೆಸರಿಗೆ ಒಂದೊಂದು ಪೊಲೀಸ್ ಸ್ಟೇಷನ್‌ಗೆ ಒಬ್ಬೊಬ್ಬರನ್ನು ಇಟ್ಟಿರುತ್ತಾರೆ. ನಾವು ಇಟ್ಟಿದ್ದೇವೆ ಮಹಿಳಾ ಪೊಲೀಸರನ್ನು ಎಂದು ಒಬ್ಬೊಬ್ಬರನ್ನು ಇಟ್ಟಿರುತ್ತಾರೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ಸಿಂಧ್ಯರವರು ಗೃಹ ಮಂತ್ರಿಗಳಾಗಿದ್ದಾಗ ಹೇಳುತ್ತಿದ್ದರು. ಪ್ರತಿಯೊಂದು ಮಹಿಳಾ ಪೊಲೀಸ್ ಠಾಣೆಗಳನ್ನು ಪ್ರತ್ಯೇಕವಾಗಿ ನಾವು ಪ್ರಾರಂಭಮಾಡುತ್ತೇವೆಂದು ಇದೇ ಹೌಸ್‌ನಲ್ಲಿ ಹೇಳಿದ್ದರು. ಆದರೆ ಇವತ್ತು ಅದು ಕಾರ್ಯಗತ ಆಗಲಿಲ್ಲ. ಮಹಿಳಾ ಪೊಲೀಸ್ ಸ್ಟೇಷನ್ ಮಾಡಿದರೆ ಸುಧಾರಣೆಯಾಗುತ್ತದೆ ಎಂದು ನನಗೆ ನಂಬಿಕೆ ಇಲ್ಲ. ಪೊಲೀಸ್ ಸ್ಟೇಷನ್ ಮಾಡಿ ಆ ನಿಯಮಗಳನ್ನು ತಿದ್ದುಪಡಿ ಮಾಡಬೇಕಾಗುತ್ತದೆ ಆಗ ಏನಾದರೂ ಸುಧಾರಣೆ ಆಗಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಖಂಡಿತವಾಗಿ ಸುಧಾರಣೆ ಸಾಧ್ಯವಾಗು ವುದಿಲ್ಲ. ಇನ್ನೊಂದು ಮುಖ್ಯವಾದ ವಿಷಯ ಇವತ್ತು ದುರಾದೃಷ್ಟವಶಾತ್ ಶಿಕ್ಷಣ ಸಚಿವರು ಇಬ್ಬರೂ ಇಲ್ಲ. ಉನ್ನತ ಶಿಕ್ಷಣ ಸಚಿವರು ಮತ್ತು ಪ್ರಾಥಮಿಕ ಶಿಕ್ಷಣ ಸಚಿವರು ಎಲ್ಲಿ ಎಂದು ಕೇಳಿದರೆ ನಾವು ಏನು ಕುಳಿತಿರುವವರು ಮಂತ್ರಿಗಳು ಅಲ್ಲವೇ ಎಂದು ಅವರು ಹೇಳುತ್ತಾರೆ. ಶಿಕ್ಷಣದ ಬಗ್ಗೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಅವರಿಗೆ ಶಿಕ್ಷಣದ ಬಗ್ಗೆ ಪ್ರಾಥಮಿಕ ಕಲ್ಪನೆ ಕೂಡ ಇಲ್ಲ. ಶಿಕ್ಷಣ ಎಂದರೆ ಒಂದು ಇಡೀ ಸಮಾಜದ ಮೆದುಳು. ಆ ಮೆದುಳು ಸರಿಯಾದ ರೀತಿಯಲ್ಲಿ ಕೆಲಸ ಮಾಡದೆ ಹೋದರೆ ಏನಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಒಬ್ಬ ಮನುಷ್ಯನಿಗೆ ಮೆದುಳು ಏನಾದರೂ ಸ್ವಲ್ಪ ಹೆಚ್ಚು ಕಡಿಮೆ ಆದರೆ ಇಡೀ ಮನುಷ್ಯ ಹಾಳಾಗಿ ಹೋಗುತ್ತಾನೆ. If the brain is paralysed, the invidual will get completely paralysed. ಹಾಗೆ ಸಮಾಜಕ್ಕೆ ಶಿಕ್ಷಣ ಮೆದುಳು. ಇವತ್ತು ಆ ಮೆದುಳು ಸಂಪೂರ್ಣ ರೋಗಗ್ರಸ್ಥವಾಗಿದೆ. ಆ ರೋಗಗ್ರಸ್ಥ ಮೆದುಳು ಇವತ್ತು ಈ ರೋಗಗ್ರಸ್ಥ ಸಮಾಜದ ಸೃಷ್ಟಿ ಮಾಡುತ್ತಿದೆ. ಅಂದರೆ ಶಿಕ್ಷಣ ಎನ್ನತಕ್ಕಂಥದ್ದು ಈ ಸಮಾಜದ ಮೆದುಳು. ಆ ಮೆದುಳನ್ನು ಇವತ್ತು ನಾವೆಲ್ಲರೂ ಸೇರಿ ರೋಗಗ್ರಸ್ಥ ಮಾಡಿದ್ದೇವೆ.

ನಾವು ಈ ದೇಶದ ಮಕ್ಕಳಿಗೆ ವಿದ್ಯಾಭ್ಯಾಸದ ಮುಖಾಂತರ ಏನು ಕೊಡುತ್ತಿದ್ದೇವೆ ಎಂದು ಪ್ರಾಮಾಣಿಕವಾಗಿ ಆಲೋಚನೆ ಮಾಡಿದರೆ ಖಂಡಿತವಾಗಿ ನಾವು ಯಾರೂ ಕೂಡ ತಲೆ ಎತ್ತಿಕೊಂಡು ಓಡಾಡತಕ್ಕಂತಹ ಪರಿಸ್ಥಿತಿಯಲ್ಲಿ ಇಲ್ಲ. ಶಿಕ್ಷಣ ಒಂದು ದೇಶದ ಸಂಪತ್ತು. ಒಂದು ಕಡೆ ಸಮಾಜದ ಮೆದುಳು ಇನ್ನೊಂದು ಕಡೆ ಈ ದೇಶದ ಸಂಪತ್ತು. ಇಡೀ ಶಿಕ್ಷಣವೇ ಇವತ್ತು ಸಂಪೂರ್ಣವಾಗಿ ಕುಲಗೆಟ್ಟು ಹೋಗಿದೆ. ಹಲ ವಾರು ಕಮಿಷನ್‌ಗಳನ್ನು ನೇಮಕ ಮಾಡಿದರು ಎಂದು ನಮ್ಮ ಮಿತ್ರರು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ಹಿಂದಿನ ಸಮಿತಿಗಳೆಲ್ಲಾ ಬಿಡಿ, ರೀಸೆಂಟಾಗಿ ಇತ್ತೀಚಿನ ದಿನಗಳಲ್ಲಿ ಎರಡು ಸಮಿತಿಗಳು ಉನ್ನತ ಶಿಕ್ಷಣದ ಬಗ್ಗೆ ಒಂದು ಸಮಿತಿ ಮತ್ತು ಪ್ರಾಥಮಿಕ ಶಿಕ್ಷಣದ ಬಗ್ಗೆ ಒಂದು ಸಮಿತಿ ನೇಮಕ ಮಾಡಿದರು. ನವನೀತ ರಾವ್ ಕಮಿಟಿ ಉನ್ನತ ಶಿಕ್ಷಣ ಯಶಪಾಲ್ ಕಮಿಟಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಒಂದು ಸಮಿತಿ ನೇಮಕ ಮಾಡಿದರು. ಈ ಉನ್ನತ ಶಿಕ್ಷಣದ ಬಗ್ಗೆ ನೇಮಕ ಮಾಡಿದಂತಹ ಸಮಿತಿ ಅಬ್ಸರ್ವೇಷನ್ ಮಾಡಿದೆ. ಎಂತಹ ಅಬ್ಸರ್ವೇಷನ್ ಮಾಡಿದ್ದಾರೆ ಎಂದರೆ ಅವರು ``Non-committed teachers tackling unwilling students having irrelevant syllabus facing uncertain examination. "This is the main observation made by the Navaneetha Rao Committee. ಆ ಕಮಿಟಿ ವರದಿ ಏನಾಗಿದೆ ಆ ಪ್ರಶ್ನೆ ಅವರು ಒಪ್ಪುತ್ತಾರೆ, ಬಿಡುತ್ತಾರೆ ನಾನು ಇದಕ್ಕೆ ಹೋಗುವುದಿಲ್ಲ. ಅಬ್ಸರ್ವೇಷನ್ ಇದೆಯಲ್ಲಾ Non-committed teachers tackling unwilling students having irrelevant syllabus facing uncertain examination. ಎಂದು ಏನಿದೆ ಇದು ಇಡೀ ಶಿಕ್ಷಣ ವ್ಯವಸ್ಥೆಯ ಸ್ವರೂಪವನ್ನು ತೋರಿಸುತ್ತದೆ. But, we should know teachers. The teachers have become non-committed teachers towards education. Also we should know why the students are unwilling to study. Then, we have to know why the irrelevant syllabus is existing till to-day. Then, finally it will come. Because of all these things, they are facing uncertain examination. ನಮ್ಮ ರಾಜ್ಯದಲ್ಲಿರತಕ್ಕಂತಹ ಉಪಾಧ್ಯಾಯರು ಉಪಾಧ್ಯಾಯರ ಕೆಲಸವನ್ನು ಬಿಟ್ಟು ಬೇರೆ ಎಲ್ಲಾ ಕೆಲಸವನ್ನೂ ಮಾಡುತ್ತಾರೆ. ಉಪಾಧ್ಯಾಯರ ವೃತ್ತಿಯನ್ನು ಮಾತ್ರ ಮಾಡುವುದಿಲ್ಲ. ಏಕೆ? ಇವತ್ತು ಇಡೀ ಶಿಕ್ಷಣ ಸಂಪೂರ್ಣವಾಗಿ ತಿರಸ್ಕಾರಕ್ಕೆ ಒಳಗಾಗಿದೆ. ಉಪಾಧ್ಯಾಯರ ವೃತ್ತಿ ಹಾಗೂ ವಿದ್ಯಾಭ್ಯಾಸವೂ ತಿರಸ್ಕಾರಕ್ಕೆ ಒಳಗಾಗಿದೆ. ಏಕೆ ಈ ಪರಿಸ್ಥಿತಿ ಉದ್ಭವ ವಾಗಿದೆ ಎಂದರೆ ಪಾಠ ಮಾಡತಕ್ಕಂತಹ ಒಬ್ಬ ಮಾಸ್ತರರಿಗೆ ಹಿಂದೆ ಅದು ಒಂದು ಗೌರವಾನ್ವಿತವಾದ ಹುದ್ದೆ ಎಂದು ಇತ್ತು. ಇಡೀ ಸಮಾಜ ಅವನಿಗೆ ಗೌರವ ಕೊಡುತ್ತಿತ್ತು. ಆದರೆ ಇವತ್ತು ಸಮಾಜ ಅವನಿಗೆ ಗೌರವ ಕೊಡುವುದಿಲ್ಲ ಗೌರವ ಕೊಡುವ ರೀತಿಯಲ್ಲಿ ಆ ಉಪಾಧ್ಯಾಯರು ನಡೆದುಕೊಳ್ಳುತ್ತಿಲ್ಲ. ಅದಕ್ಕೆ ಕಾರಣ ಉಪಾಧ್ಯಾಯರು ಒಬ್ಬರೇ ಅಂದರೆ ನಾನು ಒಪ್ಪುವುದಿಲ್ಲ. ಉಪಾಧ್ಯಾಯರನ್ನು ಆ ಸ್ಥಿತಿಗೆ ತಂದಿರತಕ್ಕಂತಹ ಈ ಸಾಮಾಜಿಕ ವ್ಯವಸ್ಥೆ, ಈ ಶಿಕ್ಷಣ ವ್ಯವಸ್ಥೆ. ಶಿಕ್ಷಣದ ಬಗ್ಗೆ ಸಂಪೂರ್ಣವಾಗಿ ತಿರಸ್ಕಾರದ ಮನೋಭಾವ ಉಂಟಾಗಲಿಕ್ಕೆ ಕಾರಣವಾಗಿದೆ.

ಏಕೆಂದರೆ ಇವತ್ತು ಏನಾಗಿದೆ, ವಿದ್ಯೆ ಎನ್ನತಕ್ಕಂಥದ್ದು ತನ್ನ ಸಾಮಾಜಿಕ ಹೊಣೆಗಾರಿಕೆ ಎನ್ನತಕ್ಕಂಥದ್ದನ್ನು ಸರ್ಕಾರ ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಇಡೀ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಖಾಸಗೀಕರಣ ಮಾಡಿದೆ ಎಂದರೆ ಏನು ಅರ್ಥ? ಹಿಂದೆ ಹೇಳುತ್ತಿದ್ದರು, ಮನು ಹೇಳಿದ ನಾಶೂದ್ರಾಯಮತಿತತಾತಿ ಎಂದು. ಮನು ಹೇಳಿದ ಪ್ರಕಾರ ಶೂದ್ರರಿಗೆ ವಿದ್ಯಾಭ್ಯಾಸ ಬುದ್ಧಿ ಏನೂ ಬೇಡ ಎಂದು ಹೇಳಿ ಬಿಟ್ಟು ಹೋಗಿದ್ದ. ಇವತ್ತು ಏನಾದರೂ ಬದಲಾವಣೆ ಆಗಿದೆ ಎಂದರೆ ಏನೂ ಮೂಲಭೂತ ಬದಲಾವಣೆ ಆಗಿಲ್ಲ. ಅವತ್ತು ಮನು ಹೇಳಿದ್ದು ನಾಶೂದ್ರಾಯಮತಿತತಾತಿ, ಇವತ್ತು ಏನಾಗಿದೆ ಎಂದರೆ ಯಾರಿಗೆ ಹಣ ಇದೆಯೋ ಅವನು ಮಾತ್ರ ವಿದ್ಯಾಭ್ಯಾಸ ಪಡೆಯಬೇಕು. ಆ ಸೂತ್ರ ಮನು ಹೇಳಿದ್ದು ಒಂದು ಕಾಂಟೆಕ್ಸ್ಟ್ ಆದರೆ ಆದರ ಸ್ವರೂಪ ಬದಲಾಗಿ ಹಣ ಉಳ್ಳವರಿಗೆ ಮಾತ್ರ ವಿದ್ಯಾಭ್ಯಾಸ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಇಂತಹವರು ಓದಬಾರದು ಎಂದು ನಿಯಮ ಮಾಡುವುದಕ್ಕಾಗುವುದಿಲ್ಲ. ಇದು ಜನರಲ್ ಎಜ್ಯುಕೇಷನ್. ಯಾರು ಬೇಕಾದರೂ ಓದಬಹುದು, ಪರಿಸ್ಥಿತಿ ಏನಾಗಿದೆ ಎಂದರೆ ಯಾರು ಬೇಕಾದರೂ ಓದಬಹುದು ಎಂದು ಪುಸ್ತಕದಲ್ಲಿ ಬರೆದು, ಸಂವಿಧಾನದಲ್ಲಿ ಬರೆದು ವಾಸ್ತವವಾಗಿ ಇಂತಹ ಪರಿಸ್ಥಿತಿ ಸೃಷ್ಟಿ ಮಾಡಿದ್ದಾರೆ ಎಂದರೆ, ಹಣ ಇಲ್ಲದವರು ಓದಕೂಡದು, ಹಣ ಇದ್ದವರು ಮಾತ್ರ ಒಳ್ಳೆಯ ವಿದ್ಯಾಭ್ಯಾಸ ಪಡೆಯ ಬೇಕು. ಹಣ ಇದ್ದವನಿಗೆ ಕಾನ್ವೆಂಟ್ ಸೀಟ್, ಹಣ ಇದ್ದವನಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು, ಹಣ ಇದ್ದವರಿಗೆ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಸೀಟ್, ಹಣ ಇದ್ದವರಿಗೆ ಮಾತ್ರ ಒಳ್ಳೆಯ ವಿದ್ಯಾಭ್ಯಾಸ ಸಿಗುತ್ತದೆ. ಬಡವರ ಮಕ್ಕಳಿಗೆ ಮಾತ್ರ ಒಳ್ಳೆಯ ವಿದ್ಯಾಭ್ಯಾಸ ಇಲ್ಲ. ಅವತ್ತು ಮನು ಹೇಳಿದ್ದು, ಇವತ್ತು ನಾವು ಮಾಡು ತ್ತಿರುವುದು, ಇದು ಮೂಲಭೂತವಾಗಿ ಏನಾದರೂ ವ್ಯತ್ಯಾಸ ಇದೆಯೇ ಏನೂ ವ್ಯತ್ಯಾಸ ಇಲ್ಲ. ಸ್ವರೂಪ ಬದಲಾವಣೆಯಾಗಿದೆ.

ಛೇರ್ಮನ್ :– 40 ನಿಮಿಷ ಆಯಿತು, ಇನ್ನೂ ಕೆಲವು ಜನ ಮಾತನಾಡು ವವರಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ಹಾಗಾಗಿ ಇವತ್ತು ಒಂದು ಕಡೆ ಖಾಸಗೀಕರಣವಾಗಿ ಉಳ್ಳವರಿಗೆ ಉನ್ನತ ಶಿಕ್ಷಣ, ಬಡವರಿಗೆ ಉನ್ನತ ಶಿಕ್ಷಣ ಇಲ್ಲ. ಈ ಉನ್ನತ ಶಿಕ್ಷಣದಲ್ಲಿ ಏನಾಗಿದೆ, ಟೆಕ್ನಿಕಲ್ ಎಜ್ಯುಕೇಷನ್ ಏನು, ನಾನ್ ಟೆಕ್ನಿಕಲ್ ಎಜ್ಯುಕೇಷನ್ ಇದೆ. ಟೆಕ್ನಿಕಲ್ ಎಜ್ಯುಕೇಷನ್, ನಾನ್ ಟೆಕ್ನಿಕಲ್ ಎಜ್ಯುಕೇಷನ್‌ನಲ್ಲಿ ಈವತ್ತು ಎಷ್ಟು ವೈಡ್ ಗ್ಯಾಪ್ ಕ್ರಿಯೇಟ್ ಆಗಿದೆ ಎಂದರೆ ನಾನ್ ಟೆಕ್ನಿಕಲ್ ಎಜ್ಯುಕೇಷನ್ ಮಾಡತಕ್ಕಂಥದ್ದೇ ಟೋಟಲಿ ಯೂಸ್‌ಲೆಸ್. ಅಪ್ರಯೋಜನ ಎಂದು ಹೇಳತಕ್ಕಂತಹ ಅಭಿಪ್ರಾಯ ಬಂದಿದೆ. ಒಂದನ್ನು ಮಾತ್ರ ಸರ್ಕಾರ ತಿಳಿಯಬೇಕು. This non-technical education is the foundation for the technical education technical education commencing from the primary education up to the research stage, it is a non-technical education. ಸಂಶೋಧನೆ ಮಾಡತಕ್ಕಂಥದ್ದು ಈ ದೇಶದಲ್ಲಿ ಇಲ್ಲದೆ ಹೋದರೆ ಹೊಸ ಹೊಸ ವಿಷಯಗಳನ್ನು

ವಿಜ್ಞಾನಿಗಳು ಸಂಶೋಧನೆ ಮಾಡಬೇಕೆಂದರೆ ಹೊಸ ಹೊಸ ವಿಷಯಗಳು ಸಂಶೋಧನೆ ಆಗಿ ಅದು ಸಮಾಜಕ್ಕೆ ಪ್ರಯೋಜನವಾಗಬೇಕಾದರೆ, non-technical education should have a priority. But, what is the unfortunate thing to-day? This non-technical education to-day has been side-tracked by the technical education. ಇವತ್ತು ಟೆಕ್ನಿಕಲ್ ಎಜ್ಯುಕೇಷನ್ ಇರತಕ್ಕಂತಹ ಗ್ಲ್ಯಾಮರ್ ಆಗಲಿ, ಟೆಕ್ನಿಕಲ್ ಎಜ್ಯುಕೇಷನ್ ಬಗ್ಗೆ ಇರತಕ್ಕಂತಹ ವ್ಯಾಮೋಹ ನ್ಯಾನ್ ಟೆಕ್ನಿಕಲ್ ಎಜ್ಯುಕೇಷನ್ ಇಲ್ಲ. ಹಿಂದಿನ ಯು.ಜಿ.ಸಿ. ಛೇರ್ಮನ್ ಒಬ್ಬರು, ರಾಮರೆಡ್ಡಿ ಅಂತ, ಅವತ್ತು ಅವರು ಹೇಳಿದ್ದು 1991 ನೇ ಇಸವಿಯಲ್ಲಿ ಸಂಶೋಧನೆಗಳಾಗಿ ವಿದ್ಯಾರ್ಥಿಗಳು ರಿಜಿಸ್ಟರ್ ಮಾಡತಕ್ಕಂಥದ್ದರಲ್ಲಿ 72 ಪರ್ಸೆಂಟ್ ಕಡಿಮೆಯಾಗಿದೆ ಎಂದು ಹೇಳಿದ್ದೀರಿ ಸಂಶೋಧನಾ ವಿಭಾಗಕ್ಕೆ ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥಮಿಟಿಕ್ಸ್, ಮತ್ತು ಸೋಷಿಯಲ್ ಸೈನ್ಸ್ ಇದರ ಬಗ್ಗೆ ಸಂಶೋಧನೆ ಮಾಡತಕ್ಕಂಥದ್ದು, ಆ ಸಂಶೋಧನೆ ಮಾಡತಕ್ಕಂತಹ ವಿದ್ಯಾರ್ಥಿಗಳ ಸಂಖ್ಯೆ ಇವತ್ತು ಗಂಭೀರವಾಗಿ ಕಡಿಮೆಯಾಗಿದೆ. It has seriously eroded. Non-technical education is not lucrative to-day in India. Only technical education is lucrative. ಆದಕ್ಕೋಸ್ಕರ ನಾನ್ ಟೆಕ್ನಿಕಲ್ ಎಜ್ಯುಕೇಷನ್ ಸೈಡ್ ಟ್ರ್ಯಾಕ್ ಆಗುತ್ತದೆ. ಇದರ ಅಪಾಯ ಏನು ಗೊತ್ತೇ? ನಾನ್ ಟೆಕ್ನಿಕಲ್ ಎಜ್ಯುಕೇಷನ್‌ನ್ನು ಯಾವ ಸರ್ಕಾರ ಅದು ನೆಗ್ಲೆಕ್ಟ್ ಮಾಡುತ್ತದೆ ಆ ದೇಶ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವೇ ಇಲ್ಲ. ಆ ನಾನ್ ಟೆಕ್ನಿಕಲ್ ಎಜ್ಯುಕೇಷನ್‌ನಲ್ಲಿ ಇವೊತ್ತು ಹಲವಾರು ಅವ್ಯವಹಾರಗಳು ನಡೆಯುತ್ತಿವೆ. ಟೆಕ್ನಿಕಲ್ ಎಜ್ಯುಕೇಷನ್‌ನಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿವೆ. ಸಮಯವಿಲ್ಲದ ಕಾರಣ ನಾನು ಆ ಎಲ್ಲಾ ವಿವರಗಳಿಗೆ ಹೋಗುವುದಿಲ್ಲ. ನಾನು ಮೊನ್ನೆ ಇದೇ ಸದನದಲ್ಲಿ ಮಾರ್ಕ್ಸ್ ಕಾರ್ಡ್ ಹಗರಣದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಮಾರ್ಕ್ಸ್ ಕಾರ್ಡ್ ಹಗರಣದ ಬಗ್ಗೆ ನಾನು ಪ್ರಸ್ತಾಪ ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರೆ, ಇದೇ ತಿಂಗಳು 9 ನೇ ತಾರೀಖು ಬೆಂಗಳೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರವರು ಸ್ವತಃ ಪೊಲೀಸ್ ಸ್ಟೇಷನ್‌ಗೆ ಹೋಗಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಮಾರ್ಕ್ಸ್ ಕಾರ್ಡ್ ಹಗರಣ ನಡೆಯುತ್ತಿದೆ ಆದರ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಬೇಕೆಂದು ಹೇಳಿದ್ದಾರೆಂದು ನಾನು ಹೇಳಿದರೆ, ರಿಯಲ್ ಕಲ್‌ಪ್ರಿಟ್ಸ್‌ನ್ನು ಬಿಟ್ಟು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಮೂರು ಜನ ಲೆಕ್ಚರರ್ಸ್‌ನ್ನು ಸಸ್ಪೆಂಡ್ ಮಾಡಿದ್ದಾರೆ. ಇವರ ಕಾನ್ಸೆಪ್ಟ್ ಹೇಗೆ ಎಂದರೆ unfortunately, I am forced to say that they are not in a position to understand who is this Bangalore university Registrar and who is involved. ಮಾನ್ಯ ಸಿಂಧ್ಯಾರವರು ಗೃಹಮಂತ್ರಿಗಳಿದ್ದಾಗ ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರಾದ ಶ್ರೀ ಗೋವಿಂದೇಗೌಡರಿಗೆ ಅವರಿಗೆ ಪಿ.ಯು ಬೋರ್ಡಿನಲ್ಲಿ ಮಾರ್ಕ್ಸ್ ಕಾರ್ಡ್ ಸ್ಕ್ಯಾಂಡಲ್ ಆಗುತ್ತಿದೆ, ಇದನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕೆಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರ ಬರೆದು ಆರೇಳು ತಿಂಗಳಾದರೂ ಕೂಡ ಇದುವರೆಗೆ ಸರ್ಕಾರ ಆದರ ಬಗ್ಗೆ ಆಚ್ಷೆ ಮಾಡಿಲ್ಲ. ಇದೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ ಶಿಕ್ಷಣದ ಬಗ್ಗೆ ಸರ್ಕಾರಕ್ಕೆ ಇರತಕ್ಕಂಥ ತಾತ್ಸಾರ ಒಂದು ಕಥೆಯಾದರೆ,

ಇಡೀ ಶಿಕ್ಷಣ ವ್ಯವಸ್ಥೆ ಇವೊತ್ತು ಸಮಾಜದ ಆವಶ್ಯಕತೆಗನುಗುಣವಾಗಿ ರೂಪಿತವಾಗಿಲ್ಲ. ಮಾನ್ಯ ಅಧ್ಯಕ್ಷರೇ, ಹಿಂದೆ ನೀವು ಪಠ್ಯಪುಸ್ತಕಗಳನ್ನು ಓದಿರಬಹುದು. ಒಂದನೇ ಕ್ಲಾಸಿನ ಹುಡುಗ ಏನು ಓದುತ್ತಿದ್ದ ಎಂದರೆ ಇವನು ಈಶ, ಇವನು ಗಣಪ, ಇವನು ಈಶನ ಮಗ, ಈತ ಚಮ್ಮಾರ, ಇವನ ಕೆಲಸ ಚಪ್ಪಲಿ ಹೊಲಿಯುವುದು, ಇವನು ಯಾವಾಗಲೂ ಊರ ಹೊರಗಡೆ ವಾಸ ಮಾಡುತ್ತಾನೆ. ಎಂದು ಓದುತ್ತಿದ್ದೇವು. ಅದನ್ನು ಈಗ ಬದಲಾವಣೆ ಮಾಡಿದ್ದೇವೆಂದು ಹೇಳಿದ್ದಾರೆ ಈಗ ಮಾಡಿರತಕ್ಕಂಥ ಬದಲಾವಣೆ ಏನು ಎಂದರೆ ಮೊದಲನೆ ಪಾಠ- ಝಣ, ಝಣ, ಝಣ, what message you are giving to a kid? ಹಿಂದೆ ಮೌಢ್ಯತೆಯನ್ನು, ಜಾತೀಯತೆಯನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದರು, ಇವೊತ್ತು ದುಡ್ಡು; ಮೊದಲನೇ ಪಾಠ ಝಣ, ಝಣ, ಝಣ, can't you understand how their (children) brains will become poison? ಆ ಸಣ್ಣ ಮಕ್ಕಳ ಮೆದುಳನ್ನು ಪ್ರಾರಂಭದಲ್ಲೇ ಪಾಯಿಸನ್ ಮಾಡಿದರೆ, how they will become the property of this country?. How they will become helathy brains of this society? ಅಲ್ಲಿಂದ ಪ್ರಾರಂಭವಾಗುತ್ತದೆ ನಿಮ್ಮ ಶಿಕ್ಷಣದ ವ್ಯವಸ್ಥೆಯ ಅಧಃಪತನ. ಮೌಢ್ಯತೆ, ಜಾತೀಯತೆ, ಹಣದ ಪ್ರಭಾವದ ಪ್ರಾರಂಭದಿಂದ ಮಕ್ಕಳಿಗೆ ಹೇಳುಕೊಡತಕ್ಕಂಥ ನಿಮ್ಮ ಶಿಕ್ಷಣದ ವ್ಯವಸ್ಥೆ ಇಡೀ ದೇಶವನ್ನು ಸುಡುತ್ತಿದೆ. ಇವೊತ್ತು ಆಗಸ್ಟ್ ಹದಿನೈದನೇ ತಾರೀಖು ಬಂದರೆ ಸ್ವಾತಂತ್ರ್ಯ ಬಂದು ನಲವತ್ತೆಂಟನೇ ವರ್ಷ ಪೂರ್ತಿಯಾಗಿ, ನಲವತ್ತೊಂಭತ್ತನೇ ವರ್ಷಕ್ಕೆ ನಾವು ಕಾಲಿಡುತ್ತಿದ್ದೇವೆ. ಇವೊತ್ತು ನಮ್ಮ ದೇಶದ ವಿದ್ಯಾರ್ಥಿಗಳಿಗೆ ಆ ಸ್ವಾತಂತ್ರ್ಯ ಸಂಗ್ರಾಮದ ಭವ್ಯ ಪರಂಪರೆಯ ಇತಿಹಾಸದ ಎ, ಬಿ, ಸಿ, ಡಿ, ಗೊತ್ತಿಲ್ಲ. ಇನ್ನೂ ಕೆಲವು ದಿವಸ ಗಳಾದರೆ ಗಾಂಧೀ ಯಾರೂ ಎಂದು ಕೇಳತಕ್ಕಂಥ ಪರಿಸ್ಥಿತಿ ಇದೆ, ನಮ್ಮ ದೇಶದ ಭವ್ಯ ಪರಂಪರೆಯನ್ನು, ಆ ಬ್ರಿಟಿಷ್ ಸಾಮಾಜ್ಯಶಾಹಿಗಳ ವಿರುದ್ಧ ಹೋರಾಟ ಮಾಡಿ ಪ್ರಾಣಗಳನ್ನು ಬಲಿ ಕೊಟ್ಟ ಆ ಭವ್ಯ ಇತಿಹಾಸ, ಇತಿಹಾಸದ ಆಧಾರದ ಮೇಲೆ ನಿಂತಿರತಕ್ಕಂಥ ನಮ್ಮ ದೇಶ. ಇದರ ಬಗ್ಗೆ ಯಾವ ವಿದ್ಯಾರ್ಥಿಗಳಿಗೂ ಇವೊತ್ತು ಪ್ರಾಮಾಣಿಕವಾದ ಕಾಳಜಿ ಇಲ್ಲ. ಯಾರಿಗೆ ಬೇಕಾಗಿದೆ ಈ ದೇಶ. ನೀವು ಯಾವುದೇ ಒಂದು ವಿದ್ಯಾರ್ಥಿಗೆ ಮಾತನಾಡಿದರೆ ವಿದ್ಯಾಭ್ಯಾಸದ ಬಗ್ಗೆ ಮಾತನಾಡುವುದಿಲ್ಲ, ದೇಶದ ಬಗ್ಗೆ ಮಾತನಾಡುವುದಿಲ್ಲ, ಸಮಾಜದ ಬಗ್ಗೆ ಮಾತನಾಡುವುದಿಲ್ಲ, ಅವನು ಮಾತನಾಡುವುದೆಲ್ಲಾ ನಾನು ಹೇಗೆ ದುಡ್ಡು ಸಂಪಾದನೆ ಮಾಡಬೇಕು, ನಾನು ಹೇಗೆ ಆಸ್ತಿಯನ್ನು ಮಾಡಬೇಕು, ಈ ರೀತಿಯ ಒಂದು ಟ್ರೆಂಡ್ ಡೆವಲಪ್ ಆಗಿದೆ. The whole education has become a commodity. The commodity can be sold in the market and they are selling in the market. ಅದು ಎಂಥ ಕಮಾಡಿಟಿ, ಆ ಡೀ-ಜನರೇಟೆಡ್ ಕಮಾಡಿಟಿ.... ಆ ರಾಟನ್ ಕಮಾಡಟಿಯನ್ನು ಇವೊತ್ತು ಮಾರ್ಕೆಟ್ಟಿನಲ್ಲಿಟ್ಟು ನೀವು ಹೇಗೆ ಈ ದೇಶವನ್ನು ಕಟ್ಟುತ್ತೀರಿ? ವಿದ್ಯಾಭ್ಯಾಸ

ಈ ದೇಶದ ಮೆದುಳು ಮತ್ತು ಸಂಪತ್ತು ಆ ವಿದ್ಯಾಭ್ಯಾಸ ಇಲ್ಲದೆ ಯಾವುದೇ ದೇಶ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಅಂಥ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಹೇಗೆ ಇವೊತ್ತು ಆರೋಗ್ಯಕರವಾದ ದೇಶವನ್ನು ಕಟ್ಟಲು ಸಾಧ್ಯವಾಗುತ್ತದೆ? ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ, ಇಡೀ ಶಿಕ್ಷಣದ ಬಗ್ಗೆ ನಮಗೆಲ್ಲರಿಗೂ ಮತ್ತು ಸರ್ಕಾರದವರಿಗೆ ಇರತಕ್ಕಂಥ ಆ ಧೋರಣೆ ಬದಲಾಗಬೇಕು. ಇವೊತ್ತು ಸಮಾಜದ ವಾಸ್ತವಿಕ ಪರಿಸ್ಥಿತಿ ಏನಿದೆ? ವಾಸ್ತವಾಂಶ ಏನು ಇದೆ ಅದನ್ನು ಮಕ್ಕಳು ತಿಳಿದುಕೊಳ್ಳಬೇಕು. ನಮ್ಮ ಇತಿಹಾಸ ನಮ್ಮ ಪರಂಪರೆ ನಮ್ಮ ದೇಶದ ನಾಗರೀಕತೆ, ನಮ್ಮ ದೇಶದ ಸಂಸ್ಕೃತಿ, ನಮ್ಮ ದೇಶದ ಭವ್ಯ ಪರಂಪರೆ, ಆ ಸ್ವಾತಂತ್ರ್ಯ ಸಂಗ್ರಾಮದ ಭವ್ಯ ಇತಿಹಾಸ ಮಕ್ಕಳಿಗೆ ಹೇಳಿಕೊಡದೇ ಹೋದರೆ ಈ ದೇಶದ ಬಗ್ಗೆ ಅವರಿಗೆ ಕಾಳಜಿ ಇರಲಿಕ್ಕೆ ಸಾಧ್ಯವಿಲ್ಲ. ಆ ರೀತಿಯಾದ ಪಠ್ಯಪುಸ್ತಕಗಳನ್ನು ಇವೊತ್ತು ತರುತ್ತಾ ಇಲ್ಲ. prescribed books ಆ ಪಠ್ಯಪುಸ್ತಕಗಳನ್ನು ಇಟ್ಟಿರತಕ್ಕಂಥದ್ದು ಓದಿದರೆ ದೇಶದ ಬಗ್ಗೆ ಭಕ್ತಿ ಬರುವ ಬದಲು, ಈ ದೇಶದ ಬಗ್ಗೆ ತಾತ್ಸಾರ ಈ ದೇಶದ ಬಗ್ಗೆ ಜಿಗುಪ್ಸೆ, ಈ ದೇಶದ ಬಗ್ಗೆ ಅಸಡ್ಡೆ ಇದೆಲ್ಲವೂ ಬರುವುದಕ್ಕೆ ಸಾಧ್ಯತೆ ಇದೆ. ನಮ್ಮ ರಾಜ್ಯ, ನಮ್ಮ ದೇಶದ ಇತಿಹಾಸವನ್ನು ತಪ್ಪು ಗ್ರಹಿಕೆ ಬರುವ ರೀತಿಯಲ್ಲಿ ಇವೊತ್ತು ಪುಸ್ತಕಗಳನ್ನು ಓದುತ್ತಿದ್ದಾರೆ. ವೈಜ್ಞಾನಿಕ ದೃಷ್ಟಿಯಲ್ಲಿ ಮಾನವ ಸಮಾಜದ ಇತಿಹಾಸವನ್ನು ಅಭ್ಯಾಸ ಮಾಡತಕ್ಕಂಥ ಒಂದು ವಾತಾವರಣ ಇಲ್ಲ— ಆ ರೀತಿಯಾದಂಥ ಟೆಕ್ಸ್ಟ್‌ಬುಕ್ಸ್ ಇಲ್ಲ ಇವೊತ್ತು. ಆ ಇತಿಹಾಸದ ಟೆಕ್ಸ್ಟ್‌ಬುಕ್ಸ್‌ಗಳನ್ನು ನೋಡಬೇಕು. ಈ ಇತಿಹಾಸದ ಟೆಕ್ಸ್ಟ್‌ಬುಕ್ಸ್ ಪ್ರೆಸ್ಕ್ರೈಬ್ ಮಾಡತಕ್ಕಂಥ ಸಂದರ್ಭದಲ್ಲಿ ಯಾವ ಯಾವ ವಿಷಯ ಇವೊತ್ತು ನಮ್ಮ ಮಕ್ಕಳನ್ನು ಸರಿ ದಾರಿಗೆ ತೆಗೆದುಕೊಂಡು ಹೋಗುತ್ತದೆ ಯಾವ ವಿಷಯ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲವೆಂದು ಇವೊತ್ತು ಆಲೋಚನೆ ಮಾಡುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಇತಿಹಾಸದ ಬಗ್ಗೆ ಒಂದು ವಿವಾದ ಹುಟ್ಟಿದೆ. ಎರಡನೆಯ ಪಿ.ಯು.ಸಿ.ಯಲ್ಲಿ ಕರ್ನಾಟಕದ ಇತಿಹಾಸವನ್ನು ಇಡಬೇಕೆಂದು ಒಂದು ವಾದ. ಭಾರತದ ಇತಿಹಾಸ ಇಡಬೇಕೆಂದು ಇನ್ನೊಂದು ವಾದ. ಇವೊತ್ತು ಸರ್ಕಾರ ಏನು ಮಾಡಬೇಕು ಇವರಿಬ್ಬರನ್ನೂ ತೃಪ್ತಿಪಡಿಸಬೇಕು. ಕರ್ನಾಟಕದ ಇತಿಹಾಸ ಬೇಕು ಎನ್ನುವವರಿಗೂ ತೃಪ್ತಿ ಪಡಿಸಬೇಕು, ಭಾರತದ ಇತಿಹಾಸ ಬೇಕು ಎನ್ನುವವರಿಗೂ ತೃಪ್ತಿಪಡಿಸಬೇಕು. ಆದರೆ ವಾಸ್ತವಾಂಶ ಏನು ಇದೆ. ಕರ್ನಾಟಕದ ಇತಿಹಾಸವನ್ನು ಅಭ್ಯಾಸ ಮಾಡುವುದರ ಬಗ್ಗೆ ಯಾರಿಗೂ ವಿರೋಧ ಇಲ್ಲ. ಆದರೆ ನೀವು ಮಾಡಿರತಕ್ಕಂಥ ವ್ಯವಸ್ಥೆ ಹೇಗಿದೆ ಎಂದರೆ ಫಸ್ಟ್ ಪಿ.ಯು.ಸಿ.ಯಲ್ಲಿ ವರ್ಲ್ಡ್ ಹಿಸ್ಟ್ರಿ, ಎರಡನೇ ಪಿ.ಯು.ಸಿ.ಯಲ್ಲಿ ಕರ್ನಾಟಕದ ಇತಿಹಾಸ. ಇದು ಎಂಥ ವಿಪರ್ಯಾಸ. ಕರ್ನಾಟಕದ ಇತಿಹಾಸ, ಭಾರತದ ಇತಿಹಾಸದ ಒಂದು ಅವಿಭಾಜ್ಯ ಅಂಗ. ಭಾರತದ ಇತಿಹಾಸವೇ ಓದುವುದು ಬೇಡ ಎಂದು ವಾದ ಪ್ರಾರಂಭ ಆಗಿಬಿಟ್ಟರೆ ನಾವು ಎಲ್ಲಿರಬೇಕು? ದೇಶದಲ್ಲಿರಬೇಕೋ ಎಲ್ಲಿರಬೇಕು? ಕರ್ನಾಟಕದ ಇತಿಹಾಸ ಬೇಡ ಎಂದು ಅವರ ವಾದ ಇಲ್ಲ. ಕರ್ನಾಟಕದ ಇತಿಹಾಸ, ಕರ್ನಾಟಕದ ಪರಂಪರೆ ಎಲ್ಲಾ ವಿಷಯಗಳು ನಮ್ಮ ವಿದ್ಯಾರ್ಥಿಗಳಿಗೆ ಗೊತ್ತಾಗಬೇಕು. ಆದರೆ ಅದೇ ಸಂದರ್ಭದಲ್ಲಿ ಭಾರತದ ಇತಿಹಾಸ ಅದು ಬಹಳ ಮುಖ್ಯ.

ಭಾರತದ ಇತಿಹಾಸ ಕೂಡ ಜಾಸ್ತಿ ಮಾಡಬೇಕು. ನೀವು ಇಡೀ ಜಗತ್ತಿನ ಇತಿಹಾಸವನ್ನು ಮೊದಲನೆ ಪಿ.ಯು.ಸಿ.ನಲ್ಲಿಟ್ಟುಬಿಟ್ಟು, ಎರಡನೇ ವರ್ಷದ ಪಿ.ಯು.ಸಿ.ಗೆ ಬರುವಾಗ ಕರ್ನಾಟಕದ ಇತಿಹಾಸ ಇಟ್ಟರೆ ಇದು ವಿದ್ಯಾರ್ಥಿಗಳಿಗೆ ತಪ್ಪು ದಾರಿಗೆ ಎಳೆದುಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಇಡೀ ವಿದ್ಯಾಭ್ಯಾಸದ ವ್ಯವಸ್ಥೆಯನ್ನೇ ಆಮೂಲಾಗ್ರವಾಗಿ ಬದಲಾವಣೆ ಮಾಡತಕ್ಕಂಥ ಚಿಂತನೆ ಈ ಸರ್ಕಾರ ಮಾಡಬೇಕು. ಇಲ್ಲದಿದ್ದರೆ ನಿಮಗೆ ಈ ದೇಶದ ಜನತೆ ಕ್ಷಮಿಸುವುದಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ **ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) :-** ಮಾನ್ಯ ಅಧ್ಯಕ್ಷರೇ, ಈ ಅವಕಾಶದಲ್ಲಿ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ, ಹೌಸಿಂಗ್ ಬೋರ್ಡ್ ಬಗ್ಗೆ, ಪೋಲಿಸ್ ಇಲಾಖೆಯ ಬಗ್ಗೆ ಬೇಡಿಕೆಗಳ ಮೇಲೆ ಮಾತನಾಡುತ್ತಿದ್ದೇನೆ. Sir, Although I have so far passed 11/2 years as MLA, I don't see any good result from this Government. Today roti, kapada and makhan are three important things required for human beings. Even after 48 years of independence, 50% of the population is below the poverty line. Whether it is State Government or Central Government responsible, it is not important. But as a human being I have to bring to the notice of the House. Sir, shelterless people are lying in the platform. We see in newspapers that tall talks are made about providing houses. Promises are made, but nothing is done. Yet, lot of publicity is given in newspapers that so many houses were constructed and distributed to the poor. In the annual report of the Housing Department for the year 1995-96, they have given statistics. In reality not even 50% of the budgeted amount is spent. They have very clearly said that the State's population is 5 crore, whereas the total number of siteless and houseless people is mentioned as 19.34 lakhs. In Kolar District, which has a population of more than 10 lakhs, the statistics given is 1,09,569 people are houseless. Can I believe this? If you believe this, I do not mind, but it is false. The statistics furnished here is just an approximate figure. I don't think that the Government has taken correct steps to cover the poor people in the State. For example, Ambedkar Yojana, Indira Awaz Yojana, Ashraya Scheme: There are so many names, but not even one house for a poor man. Crores of money you have spent, lakhs of amount you are distributing to the people, fine. But what is the amount that is lapsed, you never give in the report, why it is lapsed, what is the reason, which officer

has done this mistake, so far I have not received any report from the Government. Then how can I certify that this Government is taking keen interest in the poor people? An example, I can say there is a news report which clearly says that Municipal Commissioner was transferred, what for? Other report says that the Deputy Commissioner is set to crush corruption in K.G.F. These are all paper examples. But so far I have not received any communication from the Government. In 1993 they have allotted 450 houses to K.G.F. At that time I was not a Member of this Assembly. Till today these houses have not been distributed to the poorest people. I have brought it to the notice of the Deputy Commissioner. He said, ನಾನು ಏನು ಮಾಡುವುದಕ್ಕಾಗುವುದಿಲ್ಲ. ತಪ್ಪಾಗಿಬಿಟ್ಟಿದೆ, ಬೇರೆಯವರ ಸೈಟಿನಲ್ಲಿ ಮನೆ ಕಟ್ಟಿಬಿಟ್ಟಿದ್ದಾರೆ, ಮನೆ ಕಟ್ಟಿರುವವರು ವಾಸಮಾಡುವುದಕ್ಕಾಗುವುದಿಲ್ಲ. ಅವರು ಕೆಲಸ ಮಾಡುತ್ತಿದ್ದಾರೆ ಎಂದು. when I brought this matter to the notice of the concerned Minister, he says he would look into this matter. ಸ್ವಾಮಿ, ನಾನು ಕೊಟ್ಟ ಅಪ್ಲಿಕೇಷನ್ ಮೇಲೆ ಏನು ಆ್ಯಕ್ಷನ್ ತೆಗೆದುಕೊಂಡಿದ್ದೀರಿ. ನೋಡೋಣ ಸ್ವಾಮಿ ಏನು ಮಾಡುತ್ತೀರಿ ಎಂದರೆ ಮಾಡೋಣ ಎನ್ನುತ್ತಾರೆ. ಅವರು ಯಾವಗಲೂ ಎರಡು ಉತ್ತರ ಇಟ್ಟು ಕೊಂಡಿರುತ್ತಾರೆ, ಅದು ನೋಡೋಣ ಮತ್ತು ಮಾಡೋಣ. ಯಾವಾಗ ನೋಡುತ್ತಾರೆ, ಯಾವಾಗ ಮಾಡುತ್ತಾರೆ ಅದು ನನಗೆ ಇಂದಿಗೂ ಗೊತ್ತಾಗಿಲ್ಲ. Being a scheduled caste man, it is my duty to fight for my community. It is my privilege. ಅಂಬೇಡ್ಕರ್ ಯೋಜನೆ ಸಿಟಿಯಲ್ಲಿ ಇರುವವರಿಗೆ ಬರುವುದಿಲ್ಲ, ಬರೀ ರೂರಲ್‌ನಲ್ಲಿರುವವರಿಗೆ ಬರುತ್ತದೆ. Do you mean to say that Scheduled caste people living in the cities are rich compared to rural Schedule Caste people? What is the policy the Government that is adopting for allotment of those houses?. ಹಳ್ಳಿ ಕಡೆ ಇರುವವರಿಗೆ ಇಂದಿರಾ ಆವಾಜ್ ಯೋಜನೆ ಬರುತ್ತದೆ, ಸಿಟಿ ಕಡೆ ಬರುವುದಿಲ್ಲ ಎಂದರೆ ಅರ್ಥವೇನು? My constituency is K.G.F. That is why I am bringing it to your notice. I cannot give examples of other areas. I am staying there and that is why it is easy for me to give example of the K.G.F. My house is only eight feet. It is controlled by the Central Government. There are no bath room, no toilet, no kitchen and 12 to 14 members stay there. It is 49 years since we achieved Independence. We have seen so many Governments. They are talking that they are giving more importance to the Schedule Caste and Schedule Tribe people. I feel ashamed when I look into my Constituency. Can you not provide atleast ten

thousand houses? Can you not question that particular officer why he has not implemented in time? To get all these things done, I have to run up and down and the final result is zero. When I am bringing this matter to the notice of this House, the concerned officer should become scared. But in this case, it is not so. ನಮ್ಮ ಹೆಸರು ಏನಾದರೂ ಬಂದುಬಿಟ್ಟರೆ, ನಮ್ಮ ಬಗ್ಗೆ ಏನಾದರೂ ಮಾತನಾಡಿಬಿಟ್ಟರೆ, ಸರ್ಕಾರ ಎಲ್ಲಿ ಇಮ್ಮಿಡಿಯೇಟ್ ಆಗಿ ನಮ್ಮ ಮೇಲೆ ಆ್ಯಕ್ಷನ್ ತೆಗೆದುಕೊಂಡು ಬಿಡುತ್ತಾರೋ. ನಾವು ಏನು ಮಾಡುವುದಕ್ಕಾಗುತ್ತದೆ ಎನ್ನುವ ಭಯವೇ ಇಲ್ಲ. ಯಾರು ಅದು ಭಾಷಣಮಾಡಿದ್ದು, ಕೆ.ಜಿ.ಎಫ್ ಶಾಸಕರು ತಾನೇ, ನೋಡೋಣ ಬಿಡಿ ಎನ್ನುತ್ತಾರೆ. They will take upper hand. Whenever I bring the matter to the notice of the concerned Minister, regarding the injustice done, they should take proper measures and action against the particular officers whether he is IAS, IPS or KAS, because every human being is a human being. They should be punished but so far that has not been done. Since 1993 onwards they have not allotted any house to my K.G.F. The highest Schedule Caste people are located only in a particular place, that is Kolar Gold Fields. What action that this Karnataka Government has taken to improve the economic conditions of my people. So far nothing. Why this injustice and step motherly treatment being shown to the people of my Constituency? When you are providing houses in rural areas, you are not providing houses in city areas. Why this step motherly attitude? You should provide them houses to all the Schedule Caste and Schedule Tribe people are, irrespective of their place of staying whether rural or urban area. There should not be any discrimination and imbalance in this regard. If it is there, it means, Government has failed to do its duty towards downtrodden people. ಇದರ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ, ಡಿ.ಸಿ.ಯವರ ಗಮನಕ್ಕೆ ತಂದಿದ್ದೇನೆ, ಮೊನ್ನೆ ಕೆ.ಡಿ.ಪಿ ಸಭೆಯಲ್ಲಿ ಇದರ ಬಗ್ಗೆ ಮಾತನಾಡಿದ್ದೇನೆ. ಈ ಆಶ್ರಯ ಯೋಜನೆಯ ಮನೆಗಳನ್ನು ಇನ್ನೂ ವಿತರಣೆ ಮಾಡಿಲ್ಲ. ಏತಕ್ಕಾಗಿ ಮಾಡಿಲ್ಲ? ಅನ್ಯಾಯ ಆಗಿದೆ: 120 ಮನೆಗಳು ಬೋಗಸ್ ರೀತಿಯಲ್ಲಿ ಆಗಿವೆ. ಇದರ ಬಗ್ಗೆ ನಾನು ಸರ್ಕಾರಕ್ಕೆ ತಿಳಿಸಿದ್ದೇನೆ. But the Government has not so far scrutinised. The Headquarters Assistant says has not sent it to the Government. The Assistant Commissioner says that it is sent to the Government immediately when I brought

it to the notice of the Chief Secretary, Zilla Panchayat, Kolar. Among these two officers whom should I believe? Then the Assistant Commissioner told me that he has sent it to the Government. I do not know whether the Government is wake up or sleeping; So, government should take more care. It should conduct an enquiry by COD. So many enquiries are going on regarding Housing Board Ashraya scheme, but they are still pending. They should be useful to the people. If they are not useful to the people, how many times I should bring to the notice of the Government? So far no action has been taken why? I feel that I will not get justice. ಸದನದಲ್ಲಿ ಮಾತನಾಡಿಬಿಟ್ಟರೆ ಏನಾದರೂ ಆಗುತ್ತದೆ ಎಂದರೆ I do not have that feeling now. A member should have a feeling that the matters raised in the House are going to be considered. A member should get that feeling. But I am not getting that feeling. ಇಲ್ಲಿ ಎಷ್ಟು ಭಾಷಣ ಮಾಡಿದರೂ ಏನು ಪ್ರಯೋಜನ ಆಗುತ್ತದೆ ಸ್ವಾಮಿ. Where should an MLA go and work? They have said so many houses per annum, but not even ten percent of them have been completed. During 1994-95 there is no report given regarding how many houses they have built and distributed to the poorest people. Even if report is there, I would say it is not correct. I don't mind challenging it in this House; They have not distributed any single house in my Constituency. Why such injustice is being done and why the Government is silent? Sir, I am bringing this to your notice. You are the father for the poorest people. When I bringing it to your notice, why no action has been taken? The Schedule caste people are still sleeping on the platform. If there is any public issue, first it will hit the schedule Caste people. Where we can go? We cannot go any where. We have to die here only. Even if you give poison and made us to die we don't mind. But we do not expect this type of injustice from this Government. There is a limit for it. For the past 45 to 50 years, the Schedule Caste and Schedule Tribe people are struggling for a small site which they are not getting.

3.40

ಎಲ್ಲಿ ಸಿಟಿ ಒಳಗಡೆ ಹರಿಜನರಿಗೆ ಬಿ.ಡಿ.ಎ. ಸೈಟ್ ಕೊಟ್ಟಿದ್ದಾರೆ ತೋರಿಸಿ. Only that drainage site, marketing dust bin site. ಹರಿಜನಗಳು ಸಿಟಿ ಒಳಗಡೆ ವಾಸ ಮಾಡಬಾರದಾ? Don't they need to sleep inside the City? They put huts and live in an area and when the area develops, they burn the slums. ಅವರಿಗೆ ಹೇಳುವುದು ನಾವು ನಿಮಗೆಲ್ಲಾ ಮನೆ ಕೊಡುತ್ತೇವೆ ಎಂದು. ಎಲ್ಲಿ ಕೊಟ್ಟಿದ್ದೀರಿ?

(ಈ ಹಂತದಲ್ಲಿ ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ರವರು ಪೀಠವನ್ನಲಂಕರಿಸಿದರು

ಶ್ರೀ. ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೇ, ಸಿಟಿಯಲ್ಲಿ ಸೈಟ್ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುವುದೇನೆಂದರೆ ರಾಜೇಂದ್ರನ್‌ರವರು ಬೆಂಗಳೂರು ಸಿಟಿಯಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಯಾರಿಗೂ ಮನೆ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಆಶ್ರಯ ಸ್ಕೀಮ್‌ನಲ್ಲಿ 280 ಮನೆಗಳನ್ನು ಕೊಟ್ಟಿದ್ದು ರೀಸೆಂಟ್ ಆಗಿ ಆಕ್ಯುಪೈ ಮಾಡಿಕೊಂಡಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ :- ಅದೆಲ್ಲಾ ಎಂ.ಜಿ. ರೋಡ್, ಬ್ರಿಗೇಡ್ ರೋಡ್ ಕಡೆ ಕೊಟ್ಟಿದ್ದಾರೆ.

ಶ್ರೀ ಎನ್. ರಾಜಣ್ಣ :- ಇಲ್ಲ, ರೀಹ್ಯಾಬಿಲಿಟೇಟ್ ಮಾಡಿದ್ದೀರಿ. ಕೊಳಚೆ ನಿವಾಸಿಗಳು 99 ಪರ್ಸೆಂಟ್ ಹರಿಜನ. ಜಯಚಾಮರಾಜನಗರದಲ್ಲಿ ಬೇಕಾದರೆ ಹೋಗಿ ನೋಡಿಕೊಂಡು ಬರಬಹುದು

SRI. RAJENDRAN:- It is not a very big thing to say this by the Hon'ble Member. Then he my be anti-scheduled caste man, I am not bothered about it. I am asking the Government through you Sir, how many scheduled caste people are residing in the houses/flats constructed in the heart of the city? My constituency, i.e.. K.G.F has a city Corporation. Let the Government say how many houses have been provided there to the schedule caste people? Two lakh Scheduled caste people are living there. I am charging the Government that even if they have provided atleast 2000 houses, I am prepared to resign my post. That much pain I have. Just because he is living in the city, he is not worried about my scheduled caste people. But my scheduled caste people voted for me. My community people are starving for food and most of them are houseless and siteless. You are providing Rs. 25,000/- to construct

a house and they are demanding Rs.5,000/- and the condition is that they should have their own site. They are not able to put just Rs.1,000/- in the band and where is the question of owing a site or providing Rs.5,000/-. Give some relaxation to my community people. Let the Government come forward, to construct good houses and provide them to the poor SC/ST community people. The Government should be very cautious in this and if somebody misuse their power, if it is my community people or some other community people, the Government should initiate stern action against them; arrest that particular Officers and conduct a good demonstration in front of the public and punish them. As our Hon'ble Speaker said such Officers should be handicapped and brought to the stage. But till today injustice is being done to my people. I have brought this to the notice of the Government, to the notice of the Deputy Commissioner of Kolar and also to the notice of the District Minister, but so far no action has been taken Why?. Are they favouring those Officers, I do not know. I request the Government to take this matter very seriously. There is lot of injustice done to my people in K.G.F. The property of the poorest people of my community is taken by one individual and enjoying; the Commissioner is cooperating, everybody is just cooperating and released the entire bill amount, but the houses have not been released to my community people. Therefore, the Government should respect their words and I am requesting a COD or CBI enquiry into this matter.

With regard to Education Department, I wish to bring a few words to notice of the Government. What is the contribution of the State Government in this field? The entire contribution for higher education whether it is Pre-University or degree comes from Central Government. The Government of India provides all the shelter. What is the contribution of the State Government? It is nil. For SC/ST students, scholarship, sports fee and other fee is given by the Government of India, What is the State's contribution? The State Government says that more up-liftment is given to SC/ST students in the field of education. That upliftment is given to my

people? If the State Government has provided this, let them explain as to where they have given shelter to SC/ST students? I wanted to know this. If this is the case, let them come forward and provide a bicycle to the SC/ST students to attend their educational institution whether it is Junior college, High School or Degree College. In the village side, these students are not getting transport facilities and the Government is not afford to provide them transportation. The contribution from the State Government's side is nil. Bicycle is very essential for the students now a days since the cost of petrol or diesel is going up day by day. So, the Government should come forward and provide bicycle to the students of SC/ST community.

Regarding Hospital administration, in my Constituency, there is one doctor working in the Maternity Hospital for the last 13 years. I have brought this to the notice of the Government but so far no action has been taken by them. I don't know why? Being the local MLA when I bring to the notice of the government to change that doctor and if the same person continues and no action taken by Government, then they act like feudal lords and they will not do justice to the poorest people. The Government should think over this. What type of administration we are having a man is allowed to continue as president of the Medical council for 25 years. Even in Technical Education Department, Officers are allowed to continue 20 years. Our administration should be keen and look into all these aspects. Even when we question it, if the Government is not bothered, what is the point in raising this issue on the floor of the House? If the Administration is not keen and perfect, the MLA or MP or the public representatives cannot serve the real poorest people in this country.

Regarding working of the Police Department, an incident recently occured in Bangarpet Taluk; I brought it to the notice of the Government. It is the atrocity of the Police Department. The administration of the Police Department is very very poor in this

Government. In the last session also, I brought it to the notice of the Hon'ble Speaker. There are so many atrocities in Kolar District; there are so many atrocities in other parts of the State. I can quote the example of my constituency, K.G.F and you can take it as a special area. A constable become a Head Constable on promotion; A Head Constable becomes A.S.I and the A.S.I becomes a S.I. See the administration. ಕಾನ್ಸ್ಟೇಬಲ್ ಚೇಂಜ್ ಮಾಡುವುದಕ್ಕೆ ಆಗುವುದಿಲ್ಲ. ಆದು ಸ್ಪೆಷಲ್ ಏರಿಯಾ. ಆ ಸ್ಪೆಷಲ್ ಏರಿಯಾ ಬಿಟ್ಟರೆ ನಾವು ಬೇರೆ ಜಾಗಕ್ಕೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಆಗುವುದಿಲ್ಲ.

What about the Sub-Inspector? Can't you transfer the Sub-Inspector? For this I have to beg with the Government. I feel shy because for how many times I have to beg with the Government for these things. I am not defending the Police Department. I am not a parasite but I want justice. I cannot run always behind a police Officer. ಸ್ವಾಮಿ ದಯವಿಟ್ಟು ನಮ್ಮನ್ನು ಸ್ವಲ್ಪ ನೋಡಿಕೊಳ್ಳಿ ಎಂದು. I want justice, but you are not running the administration properly where can I stand then ; your officers have no transfer in this KGF. What is the reason? Why can't you come forward to just inform me. The Police Officers continuously staying in that area. What is the reason? He will be the lord in that particular area. The people in the area will never bother about MLA. They will say my Sub-Inspector will take care everything. Even a murderer will be safeguard. That is the position in KGF. I request the Hon'ble Minister to give special attention to this place. My very very sincere request is to improve the Police Administration in KGF. Why I am bringing this to you is, recently I have been evidence paper also. This Administration arrested three members. ಏತಕ್ಕೆ ಅರೆಸ್ಟ್ ಮಾಡಿದ್ದಾರೆ ಎಂದರೆ ಬೋಗಸ್ ಸಿಗ್ನೇಚರ್ ಮಾಡಿದ್ದರು.

MR. SPEAKER :- Things are good in Vemagal. You should tell the Minister to improve KGF also.

SRI. S. RAJENDRAN :- I brought it to the Kolar District incharge Minister also when he had come to KGF to participate in

a meeting he has notice that there is a big violence. The Superintendent of police postponed the meeting. The Minister was supposed to celebrate the 106 Anniversary of Babasaheb Ambedkar. But the Superintendent of Police says that he cannot control and requested to postpone the meeting. Don't I feel ashamed? It is not a shame to me? I respected his words. But I don't mind losing my life because it is a celebration of Dr. Babasahed Ambedkar. I elected his name. Can't I feel it? I obliged because of my Minister's request to postpone. He said ಇನ್ನೊಂದು ಸಲ ನಾವು ಬರುತ್ತೇವೆ. I expected my Minister will just call the Superintendent of Police and will enquire about the compelling reasons to postpone the meeting but nothing has been done. I kept quiet. The same officer is still there as Superintendent of Police. How many times I brought this to the District Incharge Minister? **ನಾವೇನು ಅಷ್ಟು ಅನ್ಯಾಯ ಮಾಡಿದ್ದೇವೆ, ಏನಷ್ಟು ಪಾಪ ಮಾಡಿದ್ದೇವೆ? ನಾವು ಪರಿಶಿಷ್ಟ ಜಾತಿಯವರು ಹೇಳುವುದನ್ನು ಈ ಸರ್ಕಾರ ಮಾಡುವುದಿಲ್ಲ ಎಂದರೆ ಹೇಗೆ?.**

I am not an MLA recommending to you to transfer a particular officer or retain him and I am the last person to do so in my district. You can check it up with all the departments. Very rarely I use to give the recommendation letter and that too of genuine cases. Otherwise I will not interfere with the administration. When I am maintaining my status like this, why the Government is doing injustice to me, and to my scheduled caste community? The police arrested three members..

MR. SPEAKER :- You are asking all these questions to Mr. Byregowda.

SRI. S. RAJENDRAN :- I hope my District Incharge Minister will take note of all these things.

MR. SPEAKER :- He is the Government in Kolar.

SRI S. RAJENDRAN :- After the election he said election is over. Hope he will fulfill it. If he is not fulfilling that..

MR. SPEAKER :- You are justified

SRI S. RAJENDRAN :- I have to come to your door to seek justice.

MR. SPEAKER :- What to do, I am also at some body else's door..

SRI S. RAJENDRAN :- Otherwise before the closure of the Session..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇವರು ಸಿನ್ಸಿಯರ್ಲಿ ಸಪೋರ್ಟ ಮಾಡುತ್ತಿದ್ದಾರೆ ; ಆತ ಡಿಸಿಡೆಂಟ್ ಆಕ್ಟಿವಿಟೀಸ್ ಮಾಡುವವನಲ್ಲ. ಏನು ಅಲ್ಲ, ಪಾಪ ಹೊರಗಡೆ ಇದ್ದು ಸಪೋರ್ಟ್ ಮಾಡುವವನಿಗೆ ಈ ತರಹ ತೊಂದರೆ ; ಒಳಗಡೆ ಇದ್ದು ಡಿಸಿಡೆಂಟ್ ಆಕ್ಟಿವಿಟೀಸ್ ಮಾಡತಕ್ಕಂಥವನಿಗೆ ಎಲ್ಲಾ ಸಪೋರ್ಟ್ ನಿಮ್ಮದು. ಪಾಪ ನಿಮ್ಮ ಜೊತೆಯಲ್ಲೇ ಇರುವವನಿಗೆ ನೀವು ಸಹಾಯ ಮಾಡುವುದಕ್ಕೆ ಆಗುವುದಿಲ್ಲವೆ?.

ಶ್ರೀ ಎಸ್. ರಾಜೇಂದ್ರನ್ :- ನಾವು ಅಬ್ಜೆಕ್ಟ್ ಮಾಡಿದ್ದೇವೆ ಸ್ವಾಮಿ ; ಆ ಜೊತೆಗಿಂತ ಈ ಜೊತೆಗೆ ಬಂದುಬಿಡಬೇಕೆಂದು ನಿರ್ಧಾರ ಮಾಡಿದ್ದೇವೆ.

ಶ್ರೀ ಹೆಚ್. ಡಿ. ಬಸವರಾಜು :- ಆ ಕಡೆ ಆಗಲಿಲ್ಲ ಅಂದಮೇಲೆ ಈ ಕಡೆ ಬರಲಿಕ್ಕೆ ಯೋಚನೆ ಮಾಡುತ್ತಿದ್ದಾರೆ.

SRI S. RAJENDRAN :- Yes, If you go to a shop and the particular item is not available, naturally we will go to the other shop..

MR. SPEAKER :- This is what is called as commonsense. It is available only for few people. I compliment you. Go ahead. You are not a hypcorite.

ಶ್ರೀ ಹೆಚ್. ಡಿ. ಬಸವರಾಜು :- ಇಲ್ಲಿ ಬಂದರೆ ಯಾವರೀತಿ ಜಸ್ಟೀಸ್ ಸಿಗುತ್ತದೆ ಎಂದು ಈಗಲಾದರೂ ಅರ್ಥ ಆಯಿತಲ್ಲಾ.

ಅಧ್ಯಕ್ಷರು :- ಜಸ್ಟೀಸ್ ಅಲ್ಲಾ ರೀ, ಅವರು ಹೇಳಲಿಲ್ಲವೇ ; ಆ ಅಂಗಡಿಗೆ ಹೋಗಿದ್ದೆ, ಅಲ್ಲಿ ಇಲ್ಲ, ಈ ಅಂಗಡಿಗೆ ಬಂದೆ ಅಂತ ಹೇಳಿ. ಈ ಅಂಗಡಿಯಲ್ಲಿ ಇದೆ ಎಂದು ಆಯಿತು.

ಶ್ರೀ ಎಲ್ ಆರ್. ಶಿವರಾಮೇಗೌಡ :- ನೀವಿನ್ನು ಹೊಸಬರು ಈ

ಅಂಗಡಿಯವನೂ ಲಾಸ್ ಆಗಿದ್ದರಿಂದ ನಾವು ಆ ಅಂಗಡಿಗೆ ಹೋಗಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೆ, ಕೈಯಲ್ಲಿ ಕಾಸೂ ಇಲ್ಲದೆ ಏನಾದರೂ ಸಾಮಾನು ಕೊಡು ಎಂದರೆ ಅಂಗಡಿಯವನು ಕೊಡುತ್ತಾರೆಯೇ? ಅವರಿಗೆ ಏನೂ ಲಾಸ್ ಆಗಿಲ್ಲ; ಪ್ರಾಫಿಟ್‌ನಲ್ಲೇ ಹೋಗುತ್ತಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಅಲ್ಲ ಈ ಸಾರಿ ನೀವು ಬಹಳ ಪ್ರಾಫಿಟ್ ಮಾಡಿದ್ದೀರಿ.

ಶ್ರೀ ಎಸ್. ರಾಜೇಂದ್ರನ್ :- ಅಧ್ಯಕ್ಷರೆ, ಏನೂ ಕಾರಣ ಇಲ್ಲ; ಸುಮ್ಮನೆ ಆ ರೀತಿ ಹೇಳಿದ್ದು. ನಾವಇ ಯಾವಾಗಲೂ ಸರ್ಕಾರದ ಜೊತೆಯಲ್ಲೇ ಇರುತ್ತೇವೆ. ಪಾಪ ಒಳ್ಳೆಯದು ಮಾಡುತ್ತಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಸನ್ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ತೀರ್ಮಾನ ಆಗಬೇಕು. ನಾನೂ ಸಹ ಸದಸ್ಯ. ಈಗಾ ಕನ್‌ಫ್ಯೂಷನ್ ಕ್ರೀಯೇಟ್ ಮಾಡುವುದು ಬೇಡ. ಸಪೋರ್ಟ್ ಇದೆ ಇಲ್ಲ ಎಂದು ತೀರ್ಮಾನ ಆಗಲಿ; ನನಗೆ ಸಪೋರ್ಟ್ ಜಾಸ್ತಿ ಇದ್ದಾರೆ.

ಶ್ರೀ ಎಸ್. ರಾಜೇಂದ್ರನ್ :- ಅಧ್ಯಕ್ಷರೆ, ಸಪೋರ್ಟ್ ಇದೆಯೋ ಇಲ್ಲವೋ ಎನ್ನುವುದು ಬೇಡ, ನಾನು ಯಾವಾಗಲೂ ಸರ್ಕಾರಕ್ಕೇ ಸಪೋರ್ಟ್ ಮಾಡುವುದು.

ಶ್ರೀ ಹೆಚ್. ಡಿ. ಬಸವರಾಜು :- ಅಧ್ಯಕ್ಷರೆ, ಸರ್ಕಾರಕ್ಕೆ ಇಷ್ಟರಮಟ್ಟಿಗೆ ಅವರು ನೀರು ಇಳಿಸಿದ ಮೇಲೆಯೂ ಕೂಡ ಅದಕ್ಕೆ ಸಪೋರ್ಟ್ ಇದ್ದೇವೆ ಎಂದು ಅಂದರೆ ಸರ್ಕಾರ ಯಾವ ರೀತಿ ಪರಿಗಣಿಸುತ್ತದೋ ಅದನ್ನು ನೀವೇ ನಿರ್ಧಾರ ಮಾಡಿ.

SRI. S. RAJENDRAN :- That shows loyalty. Whether Government is doing it to me or not, I will be with this Government ; I will support this Government. I am just saying my feelings. I have to support the Government. Otherwise, how can I just survive? It is an easy formula. On other way, openly I supported to them in the last elections also ; My Hon'ble Minister knows that. Openly I supported this Government, I expected that they will do something to develop the KGF. So, I hope again my incharge District Minister will take note of it and will initiate action to develop KGF. **ಅಧ್ಯಕ್ಷರೆ, ಈಗ ಒಂದು ಅನ್ಯಾಯ ನಡೆದಿದೆ ಎಂದು ನಿಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತೇವೆ. ಅಡ್ಮಿನಿಸ್ಟ್ರೇಷನ್ ಯಾವ ತರಹ ಇದೆ;** Police have arrested these three fellows

and conducted enquiry and they agreed that they have done bogus signature and two of them are employees of this Municipality. They have given all bogus certificates like birth certificate from the Municipality. The Commissioner has not signed. The Death Certificate was not signed by the Commissioner but by these people it is not only recently, previously also they have done the signature of the Commissioner. I brought this to the notice of the Deputy Commissioner but no action was taken. I don't know why. They just very boldly signing Commissioner's signatures on the khatha and other certificates ಆ ಕಮಿಷನರ್ ಮಾಡಿರುವುದು ಇದು; ನಮ್ಮದೇ ಲ್ಯಾಂಡ್. This creates law and order. When the law and order question comes, the people come to the MLA ಏನು ಶಾಸಕನಿದ್ದಾನೋ ಇವನೇನು ನಮಗೆ ನ್ಯಾಯವನ್ನು ಒದಗಿಸಿಕೊಡುತ್ತಾನೆ ಎಂದು ಹೇಳುತ್ತಾರೆ. The same Commissioner filed a case in the Police station saying that it was not his signature. After that only they scrutinised ಈಗ ಪೆಟ್ಟಿಗೆ ಅಂಗಡಿಗೆಲ್ಲಾ ಎನ್.ಓ.ಸಿ. ಕೊಟ್ಟಿದ್ದಾರೆ; ಎಲೆಕ್ಟ್ರಿಸಿಟಿಗೆ ಎನ್.ಓ.ಸಿ. ಕೊಟ್ಟಿದ್ದಾರೆ. The Municipality have no right to give LOC for petty shops. If they given they have to collect rent from them. But they are not collecting rent. What action the Government has taken in this regard? Such a huge mass malpractice is going on and the entire public and watching but the Government is silent. Therefore, the Government should come forward. You should wake up. You should take it very seriously and punish that you are just seeing and laughing and people are laughing at us. They are under the impression that we have a new MLA who would control all malpractices and all that; but this is being continued. Therefore, I am bringing this to the notice of your Government because your administration is not running properly. I am sorry to use this word. I have plenty of evidence to prove it. Regarding B.Ed college I went to the Principal Secretary to Government, Education Department-I Either I or II or III whatever it may be, se my feelings. ಸಾರ್ ಬಿ.ಎಡ್. ಕಾಲೇಜ್ ಇದೆ, ನಮ್ಮ ಮುಖ್ಯಮಂತ್ರಿಯವರು ಒಂದು ನೋಟ್ ಮಾಡಿಕೊಟ್ಟಿದ್ದಾರೆ ಆದರ ಬಗ್ಗೆ ಏನಾಗಿದೆ, ತಾವು ಅವೊತ್ತು ಸದನದಲ್ಲಿ ಹೇಳಿದ್ದಿರಿ; My respectful Chief Minister. He has also ordered for verification. The concerned Officer, i.e. The Secretary says that he did not know anything. Then

what for he is sitting on that seat? This is the way a Secretary to Government is answering to me? Then whom have I to approach Sir?

When I met the Secretary and told him that the concerned Minister has sent a note and the case worker wanted me to contact him, he says that it was a cabinet decision and he cannot do anything. This is how the Secretary answers to an MLA! Then think about the common man. Is it possible for a common man to get any information from him? This is how the administration is being carried on. The Secretary says that he did not know anything,. Then, what for car, bungalow, PA and Typists are provided to him? In my case, I don't have anybody. I myself have to write and give it to the concerned Secretary. But he blindly says he did not know anything. This is how few IAS Officers answer to the MLAs. We expect that they are doing something good but not this kind of reply.

MR. SPEAKER :- Not realising our qualifications, you must tell them about our qualifications also when you meet them

SRI. S. RAJENDRAN :- Whether we are qualified or not, they should know how to behave with the MLAs and the public. You are sitting on top and you should see down. Yesterday's Ministers are to-day MLAs and to-day MLAs are tomorrow Ministers and then Prime Minister. They should know that. I am bringing to the notice of the Government how the Administrators are neglecting the legislature. If I bring such kind of incident to the notice of the concerned Minister, the concerned Minister should not convince me to safeguard that Officer and the Education Minister says, "This is a Cabinet decision and therefore what can he do" Whether the Cabinet has taken a decision to provide a BEd., College for one single person? What is the reason for ignoring my

College? You have shifted my College from KGF and you are not able to provide shelter to me. Can I come to the conclusion that because my area is belongs SC Caste populated area the Government is neglecting my area? The administration should not have such type of attitude. I am now bringing to your kind notice. I request you kindly to send a note and take action whenever any MLA approach you and bring certain things to your notice. Tomorrow, I may bring a false information to you but you can send a note to me and tell me not to bring this type of false information. You have got that right. Rajendran will never give false information. I will give only authentic information. The Government is keeping quiet and it only shows that they are ignorant. They should change that attitude. The Government should come forward to meet the genuine needs or demands and if you do it, it is well and fine and my community will stand by you and we feel that the Government is doing something good for the SCs and STs people and backward communities also.

With these words, I thank the Chair for giving me this opportunity to speak and conclude.

+ **ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :-** ಮಾನ್ಯ ಅಧ್ಯಕ್ಷರೆ, ಇವತ್ತು ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿರುವುದಕ್ಕಾಗಿ ಪ್ರಾರಂಭದಲ್ಲಿ ನನ್ನ ವಂದನೆಯನ್ನು ಸಲ್ಲಿಸುತ್ತಾ, ಹೊಸದಾಗಿ ಇಲ್ಲಿ ಆಯ್ಕೆಯಾಗಿ ಬಂದು ಈ ರೀತಿಯಾಗಿ ವಿಷಯವಾಗಿ ಮಾತನಾಡುತ್ತಿರುವಂತಹ ಹಿನ್ನಲೆಯಲ್ಲಿ ಏನಾದರೂ ಲೋಪದೋಷಗಳಾದರೂ ಆದರೆ ಅದಕ್ಕೆ ತಮ್ಮ ಒಂದು ಮಾರ್ಗದರ್ಶನಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈಗ ಒಂದೆರಡು ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಬಯಸುತ್ತೇನೆ ಬೇಡಿಕೆಯ ಸಂಖ್ಯೆ 47 ರಲ್ಲಿ ವಿದ್ಯುಚ್ಛಕ್ತಿ ಯೋಜನೆಗಳು ಎಂದು ಇದೆ. ನಮ್ಮ ಉತ್ತರ ಕನ್ನಡ ಜಿಲ್ಲೆ ಇಡೀ ರಾಜ್ಯಕ್ಕೆ ಇವತ್ತಿನ ದಿವಸಕ್ಕೆ ಸುಮಾರು 910 ಮೆ.ವ್ಯಾ. ಕೊಡುತ್ತಾ ಇದೆ. ಇನ್ನು ಅನೇಕ ಯೋಜನೆಗಳನ್ನು ಸರ್ಕಾರ ಈಗಾಗಲೇ ಕಾರ್ಯರೂಪಕ್ಕೆ ತರುತ್ತಿರುವುದರಿಂದಾಗಿ ಇನ್ನು ಸುಮಾರು 510 ಮೆ.ವ್ಯಾ ವಿದ್ಯುತ್ ನಮ್ಮ ರಾಜ್ಯಕ್ಕೆ ದೊರಕುವುದಿದೆ. ಇಂತಹ ಒಂದು ಸಂದರ್ಭದಲ್ಲೂ ಸಹ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಡೀ ರಾಜ್ಯಕ್ಕೋಸ್ಕರ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕಾಗಿ ಸರ್ಕಾರ ಯೋಜನೆ ಮಾಡುತ್ತಿದೆ ಎನ್ನುವ ಉತ್ತರವನ್ನು ಇವತ್ತು ನಾನು ಕೇಳಿದಂತಹ ಪ್ರಶ್ನೆಗೆ ಅದನ್ನು ಉತ್ತರ ರೂಪದಲ್ಲಿ ಕೊಟ್ಟಿದೆ. ಅದರಲ್ಲಿ ಕಾಳೀನದಿ ಎರಡನೆಯದು ಇರಬಹುದು, ಅಘನಾಶಿನಿ ಇದೆ, ಬೆಣ್ಣೆತೊರೆ ಇದೆ, ಬೆಡ್ತಿ ಇದೆ,

ಈ ರೀತಿ ಅನೇಕ ಯೋಜನೆಗಳನ್ನು ಮತ್ತೆ ಇದನ್ನು ಜಾರಿಗೆ ತಂದು ರಾಜ್ಯಕ್ಕೆ ವಿದ್ಯುತ್ತನ್ನು ಪೂರೈಸಬೇಕೆಂಬ ಅಪೇಕ್ಷೆಯನ್ನು ಸರ್ಕಾರ ವ್ಯಕ್ತಪಡಿಸಿರುವಂಥಾದ್ದು ಈಗ ನಮ್ಮ ಮುಂದೆ ಇದೆ. ನಾನು ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಕಷ್ಟವನ್ನು ಹೇಳಿಕೊಳ್ಳಲು ಬಯಸುತ್ತೇನೆ. ಈಗಾಗಲೇ ಸೂಪ ಡ್ಯಾಮ್, ನಾಗಝರಿ, ಕದ್ರ, ಕೊಡಸಳ್ಳಿ, ಶರಾವತಿ ಇತ್ಯಾದಿ ಅನೇಕ ಡ್ಯಾಮ್‌ಗಳನ್ನು ಕಟ್ಟಿರುವುದರಿಂದ ಸಾಕಷ್ಟು ಪ್ರದೇಶಗಳು ಮುಳುಗಡೆಯಾಗಿದೆ. ಅವರಿಗೆ ಯೋಗ್ಯವಾದಂತಹ ಪುನರ್‌ವಸತಿ ಸೌಕರ್ಯ ದೊರೆಯಲಿಲ್ಲ. ವಿಶ್ವಬ್ಯಾಂಕ್ ನಾರ್ಮ್ಸ್ ಅನೇಕ ರೀತಿಯಲ್ಲಿದೆ. ಅದನ್ನು ಮುಳುಗಡೆ ಯಾಗಿರುವಾಗ ವಿಶ್ವಬ್ಯಾಂಕ್ ನಾರ್ಮ್ಸ್‌ಗಳೆಲ್ಲವನ್ನು ಹೇಳಿದರೂ ಅದನ್ನು ಜಾರಿಗೆ ತರುವಂತಹ ಸಂದರ್ಭದಲ್ಲಿ ಅವು ಯಾವುದನ್ನು ಜಾರಿಗೆ ತರದೇ ಇರುವುದನ್ನು ನಾವು ನೋಡುತ್ತಿದ್ದೇವೆ. ಪರಿಹಾರ ಸಹ ಯೋಗ್ಯವಾದ ರೀತಿಯಲ್ಲಿ ಸಿಗದೆ, ಅವರು ಆ ಉಪಯೋಗದಿಂದ ವಂಚಿತರಾಗುವಂತಹ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಆದರೆ ನಾನು ಇಲ್ಲಿ ಮೊಟ್ಟಮೊದಲನೆಯದಾಗಿ ಪ್ರಸ್ತಾಪ ಮಾಡಬೇಕೆಂದು ಬಯಸುತ್ತಿರು ವಂಥಾದ್ದು ಬೃಹತ್ ಜಲ ವಿದ್ಯುತ್ ಯೋಜನೆಯ ಬಗ್ಗೆ ಸರ್ಕಾರದ ಯೋಚನೆ ಏನು ಇದೆ, ಅದನ್ನು ಇವತ್ತು ತಕ್ಷಣ ಕೈಬಿಟ್ಟು ಸಣ್ಣ, ಮಿನಿ ಹೈಡಲ್ ಪ್ರಾಜೆಕ್ಟ್ ಬಗ್ಗೆ, ರನ್ ಆಫ್ ರಿವರ್ ಸ್ಕೀಮ್‌ಗಳ ಬಗ್ಗೆ ಸರ್ಕಾರ ಈ ರೀತಿಯಾಗಿ ಯೋಚನೆ ಮಾಡಬೇಕು. ಈ ರೀತಿ ಬೃಹತ್ ಜಲ ವಿದ್ಯುತ್ ಯೋಜನೆಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ತೆಗೆದುಕೊಂಡರೆ ಅದು ನಿಶ್ಚಿತವಾಗಿ ತಡೆದುಕೊಳ್ಳುವಂತಹ ಶಕ್ತಿ ಇಲ್ಲ. ನೈಸರ್ಗಿಕವಾಗಿ ಮತ್ತು ಅಲ್ಲಿನ ಜನತೆಯಲ್ಲಿ ಈ ರೀತಿಯಾದಂಥ ಬೃಹತ್ ಯೋಜನೆಯನ್ನು ಸಹಿಸಿಕೊಳ್ಳುವಂತಹ ವ್ಯವಧಾನವಿಲ್ಲ. ಪರಿಸರ ಹೇಗೆ ಹಾಳಾಗುತ್ತಿದೆ ಮತ್ತು ಸಂಸ್ಕೃತಿ ಹೇಗೆ ಹಾಳಾಗುತ್ತಿದೆ ಎಂಬ ಬಗ್ಗೆ ವಿಶ್ಲೇಷಣೆಯ ವಿವರಣೆಗೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. ನಿಜ, ನಮಗೆ ವಿದ್ಯುತ್ ಬೇಕು ಮತ್ತು ಅದರ ಬೇಡಿಕೆಯೂ ಇದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದಹಾಗೆ ಇವತ್ತು ನಾವು ಆದಿಮಾನವರ ಹಾಗೆ ಬಾಳುವುದಕ್ಕೆ ಆಗುವುದಿಲ್ಲ. ಆದರೆ ನಾನು ಇವೆಲ್ಲವನ್ನೂ ಪ್ರಸ್ತಾಪ ಮಾಡಿ, ಮುಂದೆ ನಾನು ಹೇಳುವುದಕ್ಕೆ ಬಯಸುತ್ತಿರವುದೇನೆಂದರೆ ಸರ್ಕಾರ ಇಷ್ಟು ವರ್ಷಗಳಾದರೂ ನಾನ್ ಕನ್ವೆನ್‌ಷನಲ್ ಎನರ್ಜಿಬೋರ್ಡ್ ಅನ್ನು ಏಕೆ ಸ್ಥಾಪಿಸುತ್ತಿಲ್ಲ? ಪರ್ಯಾಯ ವಾದಂತಹ ವಿದ್ಯುತ್ ಮೂಲಗಳನ್ನು ನಾವು ಹುಡುಕಬೇಕೆಂಬ ಕೂಗನ್ನು ಎಲ್ಲಾ ಕಡೆಗಳಲ್ಲಿ ಕೇಳುತ್ತಾ ಇದ್ದೇವೆ. ಇವತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಮೇಲೆ ಅನೇಕ ಬಾರಿ ಒತ್ತಡವನ್ನು ತಂದಿದೆ. ನಾನ್ ಕನ್ವೆನ್‌ಷನಲ್ ಎನರ್ಜಿ ಬೋರ್ಡ್ ಆಗಬೇಕೆಂದು, ಇವತ್ತಿನ ಮಾನ್ಯ ಮುಖ್ಯಮಂತ್ರಿಯವರು ಹಿಂದೆ ಉಪಮು ಖ್ಯಮಂತ್ರಿಯವರಾಗಿದ್ದಂತಹ ಸಂದರ್ಭದಲ್ಲಿ ಅವರೇ ಈ ಖಾತೆಯನ್ನು ನೋಡಿಕೊಳ್ಳು ತ್ತಿದ್ದಂತಹ ಸಂದರ್ಭದಲ್ಲಿ ಸಹ ಇನ್ನು ಕೆಲವೇ ದಿವಸಗಳಲ್ಲಿ ನಾನ್ ಕನ್ವೆನ್‌ಷನಲ್ ಎನರ್ಜಿ ಬೋರ್ಡ್‌ಅನ್ನು ಮಾಡುತ್ತೇವೆನ್ನುವ ಮಾತನ್ನು ಹೇಳಿದರು. ಆದರೆ ನಾನ್ ಕನ್ವೆನ್‌ಷನಲ್ ಎನರ್ಜಿ ಬೋರ್ಡನ್ನು ಏಕೆ ಇವತ್ತಿನವರೆಗೂ ಸ್ಥಾಪಿತವಾಗುತ್ತಿಲ್ಲ? ಇವತ್ತು ಬೇರೆ ಪರ್ಯಾಯ ಇಂಧನದ ಮೂಲಗಳನ್ನು, ವಿದ್ಯುತ್ ಪರ್ಯಾಯ ಮೂಲಗಳನ್ನು

ಹುಡುವುದಕ್ಕೆ ಇವತ್ತು ಕರ್ನಾಟಕ ಪವರ್ ಕಾರ್ಪೋರೇಷನ್‌ನಲ್ಲಿ ಅಥವಾ ಕೆ.ಇ.ಬಿ.ಯಲ್ಲಿ ಈ ರೀತಿ ಹರಿದು ಹಂಚಿಹೋಗಿರುವ ಸ್ಥಿತಿಯಲ್ಲಿ ಯಾರಿಗೂ ಸಹ ಈ ನಾನ್ ಕನ್ವೆನ್‌ಷನಲ್ ಎನರ್ಜಿ ಬೋರ್ಡ್‌ನ್ನು ಸ್ಥಾಪಿಸುವುದಕ್ಕೆ ಮತ್ತು ನಾನ್ ಕನ್ವೆನ್‌ಷನಲ್ ಸೋರ್ಸ್‌ಸ್‌ಅನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ಸರ್ಕಾರ ವಿದ್ಯುತ್‌ನ ವಿಷಯ ಬಂದಾಗಲೆಲ್ಲಾ ಸೌರ ಶಕ್ತಿಯಿಂದ ಆಗುತ್ತದೆಯೇ; ಇತ್ಯಾದಿಗಳಿಂದ ಆಗುತ್ತದೆಯೇ, ಇದು ವಿದೇಶಗಳಲ್ಲಿಯೂ ಆಗಲಿಲ್ಲ, ಜಗತ್ತಿನಲ್ಲಿ ಎಲ್ಲೂ ಆಗಲಿಲ್ಲವೆನ್ನುವ ಮಾತನ್ನು ಹೇಳುತ್ತಾ, ನಾವು ಇಲ್ಲಿ ಈ ಬೋರ್ಡ್ ಅನ್ನು, ಸ್ಥಾಪಿಸುವಂತಹ ವಿಷಯದಲ್ಲಿ ನಾವು ನಿರ್ಲಕ್ಷ್ಯವನ್ನು ಕಾಣುತ್ತಿದ್ದೇವೆ. ಹಾಗಾಗಿ ಸರ್ಕಾರ ಬೃಹತ್ ಜಲ ವಿದ್ಯುತ್ ಯೋಜನೆಗಳನ್ನು ಜಾರಿಗೆ ತರುವಂಥದ್ದಕ್ಕೆ ಪೂರ್ವಭಾವಿಯಾಗಿ ತತ್‌ಕ್ಷಣದಲ್ಲಿ ನಾನ್ ಕನ್ವೆನ್‌ಷನಲ್ ಎನರ್ಜಿ ಬೋರ್ಡ್ ಅನ್ನು ಸ್ಥಾಪಿಸಬೇಕು. ನಾನ್ ಕನ್ವೆನ್‌ಷನಲ್ ಎನರ್ಜಿ ಬೋರ್ಡ್‌ನಿಂದ ನಾವು ಬದಲಿ ವಿದ್ಯುತ್ ಮೂಲಗಳನ್ನು ಕಂಡುಹಿಡಿಯಬೇಕು. ಅದಕ್ಕೆ ಬೇಕಾದಂತಹ ಆಗ್ರಹವನ್ನು ಕೊಡಬೇಕು. ನಾವು ಬೇಕಾದಂತಹ ಸಕ್ಕರೆ ಕಾರ್ಖಾನೆಗಳ ಮೂಲಕ ಮತ್ತು ಇತ್ಯಾದಿ ಅನೇಕ ಮೂಲಗಳಿಂದ ನಾವು ವಿದ್ಯುತ್ತನ್ನು ಉತ್ಪಾದಿಸುವಂತಹ ವಿಷಯದ ಬಗ್ಗೆ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹವಾದ ಕ್ರಮವಾದರೂ ಅಲ್ಲಿ ನಾನ್ ಕನ್ವೆನ್‌ಷನಲ್ ಎನರ್ಜಿ ಬೋರ್ಡ್ ಅನ್ನು ಸ್ಥಾಪಿಸಿದರೆ ಅದಕ್ಕೆ ಪರ್ಯಾಯ ಇಂಧನ ಮೂಲಗಳಿಗೆ ಎಷ್ಟು ಆಗ್ರಹ ಬರಲು ಸಾಧ್ಯವಿದೆಯೋ ಅದು ಅಷ್ಟು ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಶಾಸಕರ ಭವನದಲ್ಲಿ ಉಳಿದಾಗ ಇದು ಎಲ್ಲಾ ಶಾಸಕರ ಅನುಭವಕ್ಕೆ ಬಂದಿದೆ. ಎಲ್ಲಾ ರೂಂಗಳಲ್ಲೂ ಒಂದೊಂದು ನಲ್ಲಿಯನ್ನು ಹಾಕಿದ್ದಾರೆ. ಇಲ್ಲಿ ಸೌರಶಕ್ತಿಯಿಂದ ಬಿಸಿ ನೀರು ಬರುತ್ತದೆಂದು ಹಾಕಿದ್ದಾರೆ. ನಾನು ಈ ಒಂದೂವರೆ ವರ್ಷದಲ್ಲಿ ಒಂದೂ ದಿವಸವು ಬಿಸಿ ನೀರನ್ನು ಬಂದಿರುವುದು ನೋಡೇ ಇಲ್ಲ. ನಾನು ಕಳೆದ ವಿಷಯ ಸಮಿತಿಯಲ್ಲೂ ಈ ವಿಷಯವನ್ನು ಕೇಳಿದೆ. ಇದು ಏತಕ್ಕೆ ಇದೆ, ಏನು ಆಗಿದೆ ಎಂಬ ಬಗ್ಗೆ ಕೇಳಿದ್ದೇನೆ. ಇವತ್ತಿನವರೆಗೂ ಅದನ್ನು ರಿಪೇರಿ ಮಾಡಿ ಅದರಿಂದ ಬಿಸಿನೀರನ್ನು ಕೊಡುವಂತಹ ವ್ಯವಸ್ಥೆ ಆಗಿಲ್ಲ. ಅಂದರೆ ಇದರ ಮೂಲಕ ಬದಲಿ ಇಂಧನ ಮೂಲಗಳನ್ನು ಹುಡುಕುವುದಕ್ಕೆ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿರುವಂಥಾದ್ದು ಸ್ಪಷ್ಟವಾಗಿ ನಮಗೆ ಕಾಣುತ್ತಿದೆ. ಹಾಗಾಗಿ ಉತ್ತರ ಕನ್ನಡಜಿಲ್ಲೆಯಲ್ಲಿ ಇವತ್ತು ಬೃಹತ್ ಜಲ ವಿದ್ಯುತ್‌ಯಿಂದ ಜನರನ್ನು ಅನಾಥರನ್ನಾಗಿ ಮಾಡುವಂತಹ ಯೋಜನೆಗಳನ್ನು ಸರ್ಕಾರ ಕಾರ್ಯರೂಪಕ್ಕೆ ತರದೇ ಈ ರೀತಿ ಬದಲಿ ಇಂಧನ ಮೂಲಗಳ ಬಗ್ಗೆ ನಾನ್ ಕನ್ವೆನ್ ಷನಲ್ ಎನರ್ಜಿ ಬೋರ್ಡ್ ಅನ್ನು ಸ್ಥಾಪಿಸಬೇಕು. ಇದು ಕೇಂದ್ರ ಸರ್ಕಾರದ ಬೇಡಿಕೆಯೂ ಆಗಿದೆ. ನಮ್ಮ ರಾಜ್ಯದಲ್ಲಿ ಏನು ಆಗಬೇಕೆನ್ನುವಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

4-10 ಪಿ.ಎಂ.

ಅಧ್ಯಕ್ಷರೇ, ಇನ್ನೊಂದು ಬಹಳ ಗಂಭೀರವಾಗಿ ನಾವು ನಮ್ಮ ಆಡಳಿತ ಯಂತ್ರ ಹೇಗೆ

ಕೆಲಸ ಮಾಡುತ್ತಿದೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿದೆ ಎಂದರೆ, ಎಲ್ಲಿ ವಿದ್ಯುತ್ ಖರ್ಚಾಗುತ್ತೋ ಅಲ್ಲಿ ಉತ್ಪಾದನೆಯನ್ನು ಮಾಡದೇ ಇರುವಂಥಾದ್ದು. ಬೆಂಗಳೂರಿನಲ್ಲೊ, ಮೈಸೂರಿನಲ್ಲೊ ವಿದ್ಯುತ್ ಹೆಚ್ಚು ಖರ್ಚು ಆಗುತ್ತಿದೆ. ಆದರೆ ಉತ್ಪಾದನೆಯನ್ನು ಮಾಡುವುದು ಮಂಗಳೂರಿನಲ್ಲಿನ ಕೊಜೆಂಟ್ರಿಕ್ಸ್ ಮೂಲಕವೋ, ಕಾರವಾರದ ಕೈಗಾಡಿ ಮೂಲಕವೋ, ಇನ್ನೆಲ್ಲೋ. ಅಂದರೆ, ಅಲ್ಲಿಂದ ಟ್ರಾನ್ಸ್‌ಮಿಷನ್ ಲಾಸ್ ಇತ್ಯಾದಿ ಕಾರಣಗಳಿಂದ ನಾವು ಅನೇಕ ವಿದ್ಯುತ್‌ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದೇವೆ, ನಾವು ಉತ್ಪಾದನೆ ಮಾಡುತ್ತಿರುವ ವಿದ್ಯುತ್ ಅನ್ನೂ ಸಹ ಕಳೆದುಕೊಳ್ಳುತ್ತಿದ್ದೇವೆ. ಇವತ್ತು ವಿದ್ಯುತ್ ಉತ್ಪಾದಿಸುವಂಥ ಸ್ಥಳದಲ್ಲೇ ಅದರ ಖರ್ಚಾಗುವುದರ ಬಗ್ಗೆ ಯೋಜನೆಗಳ ಕೊರತೆ ಕಾಣುತ್ತಿದೆ. ಏತಕ್ಕೆ ಕೈಗಾ ಇವತ್ತು ಅಲ್ಲಿದೆ? ಕೈಗಾ ಇರುವಂಥದ್ದು ನೈಸರ್ಗಿಕವಾಗಿ ಅಥವಾ ವೈಜ್ಞಾನಿಕವಾಗಿ ಅದು ಯೋಗ್ಯವಾದಂಥ ಸ್ಥಳವೆಂದಲ್ಲ. ಅದು ರಾಜಕೀಯ ಉದ್ದೇಶಕ್ಕೋಸ್ಕರವಾಗಿ ಕೈಗಾ ಯೋಜನೆ ಇವತ್ತು ಅಲ್ಲಿ ಸ್ಥಾಪನೆಯಾಗಿದೆ. ಅಲ್ಲಿ ಕೈಗಾವನ್ನು ಸ್ಥಾಪಿಸುವುದು ಅವೈಜ್ಞಾನಿಕ ಎಂದು ಅನೇಕ ತಜ್ಞರ ವರದಿ ಇದೆ. ಆದರೂ ಕೂಡ ರಾಜ್ಯ ಸರ್ಕಾರದ ಒಪ್ಪಿಗೆಯ ಮೇರೆಗೆ ಕೇಂದ್ರ ಸರ್ಕಾರ ಕೈಗಾವನ್ನು ಸ್ಥಾಪಿಸಲು ಮುಂದಾಗಿದೆ. ಅಂದರೆ, ಅಲ್ಲಿ ಇವತ್ತು ಪರಿಸರದ ಅಸಮತೋಲನವಾಗುವುದು ನಿಶ್ಚಿತವಿದೆ. ಹಾಗಾಗಿ "ಡೂಂ" ಕುಸಿದು ಬಿತ್ತು; ತಜ್ಞರ ವರದಿಗಳು ಬಂದಿಲ್ಲ. ಇವತ್ತು ನಾವು ಇಷ್ಟು ಸಹಜವಾಗಿ ಕೇಳುತ್ತಿದ್ದೇವೆ, ವಿದ್ಯುತ್ ಲೈನ್ ಅನ್ನು ಬದಲು ಮಾಡಿ, ಇವತ್ತು ಕಾಡಿನ ಮಧ್ಯೆ ಮರಗಳನ್ನು ಕಡಿದು ವಿದ್ಯುತ್ ಲೈನ್‌ಗಳನ್ನು ಏನು ಹಾಕುತ್ತಿದ್ದಾರೆ, ಅದರ ಬದಲಾಗಿ ಪರ್ಯಾಯವಾಗಿ ವಿದ್ಯುತ್ ಲೈನನ್ನು ಹಾಕುವುದಕ್ಕೆ ನಾವು ಸ್ಥಳಗಳನ್ನು, ಜಾಗವನ್ನು ತೋರಿಸಿದರೆ ಅದಕ್ಕೆ ಸರ್ಕಾರ ಯೋಚನೆಯನ್ನೂ ಮಾಡುವಂಥ ಸೌಜನ್ಯವನ್ನು ತೋರಿಸಿಲ್ಲ. ಆಲ್ಟರ್‌ನೇಟಿವ್ ವಿದ್ಯುತ್ ಲೈನ್‌ಗಳನ್ನು ಹಾಕುವುದರ ಬಗ್ಗೆ ನಾವು ಸಲಹೆಯನ್ನು ಕೊಟ್ಟರೆ, ಅದನ್ನು ಪರಿಶೀಲಿಸುತ್ತೇವೆ ಎನ್ನುವ ಸೌಜನ್ಯದ ಮಾತೂ ಸಹ ಸರ್ಕಾರಕ್ಕಿಲ್ಲವೆಂದರೆ, ಅಲ್ಲಿ ಪರಿಸರವನ್ನು ಅರಣ್ಯವನ್ನು ನಾಶಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶವೆನ್ನುವುದು ಸ್ಪಷ್ಟವಲ್ಲವೇ? ಏಕೆ ಸರ್ಕಾರ ಬದಲಿ ವಿದ್ಯುತ್ ಲೈನ್ ಮಾರ್ಗದ ಬಗ್ಗೆ ಯೋಚನೆಯನ್ನು ಮಾಡಬಾರದು? ಅನೇಕ ವಿಜ್ಞಾನಿಗಳು ಹೇಳಿದ್ದಾರೆ, ಅದರ ಬಗ್ಗೆ ಅನೇಕ ತಂತ್ರಜ್ಞಾನಿಗಳು ಸಲಹೆಯನ್ನು ಕೊಟ್ಟಿದ್ದಾರೆ. ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್‌ನಲ್ಲಿರುವಂಥ ವ್ಯಕ್ತಿಗಳು ಸಲಹೆ ಕೊಟ್ಟಿದ್ದಾರೆ. ಯಾವುದೋ ಹಳ್ಳಿಯಲ್ಲಿರುವಂಥ ಅಥವಾ ಇನ್ಯಾವುದೋ ಸಣ್ಣ ಪಟ್ಟಣದಲ್ಲಿರುವ ನಮ್ಮಂಥವರು ಹೇಳಿರುವುದಲ್ಲ. ವಿಜ್ಞಾನಿಗಳು, ತಜ್ಞರು, ಅದರ ಬಗ್ಗೆ ಅಧ್ಯಯನ ಮಾಡಿರುವಂಥವರು ಅಲ್ಲಿಯ ಅರಣ್ಯವನ್ನು ನಾಶ ಮಾಡಿ, ಪರಿಸರದ ಅಸಮತೋಲನ ವನ್ನು ಮಾಡಿ ಅಲ್ಲಿ ವಿದ್ಯುತ್ ಲೈನ್‌ಅನ್ನು ಹಾಕಬೇಡಿ, ನೀವು ಹಾಕುವುದಿದ್ದರೆ ಪರ್ಯಾಯವಾದಂಥ ಮಾರ್ಗವಿದೆ, ಅದರ ಬಗ್ಗೆ ಯೋಚನೆ ಮಾಡಿ ಎಂದು ಹೇಳುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿಲ್ಲ, ಯೋಚನೆ ಮಾಡುವುದಿಲ್ಲ. ಪ್ರತಿಯೊಂದರಲ್ಲೂ ಸಹ ಈ ದೂರದೃಷ್ಟಿಕೋನದ ಅಭಾವವನ್ನು ನಾವು ಪ್ರತಿಕ್ಷಣದಲ್ಲಿಯೂ ಕಾಣುತ್ತಿದ್ದೇವೆ. ಹಾಗಾಗಿ, ಅಲ್ಲಿಯ ವಾತಾವರಣವನ್ನು ಹಾಳು ಮಾಡುತ್ತಿರುವುದನ್ನು ನೋಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೊಜೆಂಟ್ರಿಕ್ಸ್

ವಿರುದ್ಧ ಬಗ್ಗೆ, ಹೋರಾಡಿದ ಹಾಗೆ ಉಳಿದ ರಾಜ್ಯದಲ್ಲೂ ಸಹ ಇವತ್ತು ಅದರ ವಿರುದ್ಧದ ಧ್ವನಿ ಎತ್ತಿದೆ; ಅದರಿಂದ ಆಗುತ್ತಿರುವಂಥ ದುಷ್ಪರಿಣಾಮಗಳ ಬಗ್ಗೆ ನಾವು ಮಾತುಗಳನ್ನು ಕೇಳುತ್ತಿದ್ದೇವೆ. ಇದರ ಬಗ್ಗೆಯೂ ಕೂಡ ವೈಜ್ಞಾನಿಕವಾದ ವರದಿ, ಸಲ್ಲಿಕೆಗಳು ಇದ್ದರೂ ಕೂಡ, ನಾವು ಅದನ್ನು ಪ್ರಾಮಾಣಿಕವಾಗಿ ಯೋಚನೆಯನ್ನು ಮಾಡದೆ, ಇವತ್ತು ಪ್ರಾಮಾಣಿಕರಾದ ಯಲ್ಲಪ್ಪ ರೆಡ್ಡಿಯಂಥ ಅಧಿಕಾರಿಗಳನ್ನು ಮನೆಗೆ ಕಳುಹಿಸುವಂಥ ರಾಜಕಾರಣವನ್ನು ನಾವು ಮಾಡುತ್ತೇವೆ. ಈ ಕ್ಷುಲ್ಲಕ ಅಧಿಕಾರದ ಆಸೆಯ ಹಾಗೂ ಸಮಯ ಸಾಧಕತನದ ಆಡಳಿತವನ್ನು ನಾವು ಕಾಣುತ್ತಿದ್ದೇವೆಯೇ ಹೊರತು, ಆ ದೂರದೃಷ್ಟಿತ್ವದ ಕೊರತೆ ಇಲ್ಲಿಯೂ ಕಾಣುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ ಎಲ್ಲಿ ವಿದ್ಯುತ್ ಉತ್ಪಾದನೆಗಿಂತ ವಿದ್ಯುತ್ ಖರ್ಚು ಆಗುತ್ತದೋ ಅದನ್ನು ಹೆಚ್ಚು ಅಧ್ಯಯನ ಮಾಡಿ, ಅಲ್ಲಿ ವಿದ್ಯುತ್ ಅನ್ನು ಉತ್ಪಾದಿಸುವುದಕ್ಕೆ ಹೆಚ್ಚಿನ ಆಗ್ರಹ ಬೇಕು ಎನ್ನುವುದು ನಮ್ಮ ಬೇಡಿಕೆಯಾಗಿದೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ಜೋಗದಲ್ಲಿ ಕೆಇಬಿಯವರೇ ವಿದ್ಯುತ್‌ಅನ್ನು ಉತ್ಪಾದನೆ ಮಾಡುವಂಥ ಒಂದು ಘಟಕವಿದೆ; ಅದು ಬಹಳ ಮೊದಲಿನಿಂದಲೂ ಇರುವಂಥದ್ದು. ಕೆಪಿಸಿಯವರು ಬಹುಶಃ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿ ಅಲ್ಲಿ ಕೆಇಬಿಯವರು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆ. ಆದರೆ ಇವತ್ತು ಅಲ್ಲಿ ಎಷ್ಟು ಜನನೌಕರರು ಇದ್ದಾರೋ ಅವರಿಗೆ ಪಗಾರ ವನ್ನೂ ಕೊಡುವುದಕ್ಕಾಗದಷ್ಟು ಮಾತ್ರ ಅಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಇವತ್ತು ಅದನ್ನು ಕೆಪಿಸಿಗೆ ಹಸ್ತಾಂತರ ಮಾಡಬೇಕು. ಅಲ್ಲಿರುವಂಥ ಹಳೆಯ ಯಂತ್ರ ಗಳೇ ನಿವೆಯೋ ಅದನ್ನು ಬದಲು ಮಾಡಿ. ಅಲ್ಲಿ ಇರುವಂಥ ನೀರಿಗೆ ಇನ್ನು ಹೆಚ್ಚು ವಿದ್ಯುತ್ ಉತ್ಪಾದನೆ ಶಕ್ತಿ ಇದೆ ; ಅದಕ್ಕೆ ಬೇಕಾಗಿರುವ ಯಂತ್ರಗಳನ್ನು ಅಳವಡಿಸ ಬೇಕಾಗಿದೆ. ಆದರೆ ಈ ಸಂಗತಿಗಳ ಬಗ್ಗೆ ಅಲ್ಲಿ ಕಾಳಜಿ ಇಲ್ಲ, ಅಲ್ಲಿ ಕೆಇಬಿಯ ಕೆಲವಾರು ನೌಕರರಿಗೆ ತೊಂದರೆಯಾಗುತ್ತದೆಂದು ಸರ್ಕಾರ ಇವತ್ತು ನಷ್ಟವನ್ನು ಅನು ಭವಿಸುತ್ತಿದೆ, ಅದರ ಮೂಲಕ ಜನತೆಗೆ ಆ ನಷ್ಟವನ್ನು ಇವತ್ತು ಕೊಡುತ್ತಿದೆ. ಹಾಗಾಗಿ ತಕ್ಷಣ ಅಲ್ಲಿ ಕೆಇಬಿಯಿಂದ ಜೋಗದಲ್ಲಿ ವಿದ್ಯುತ್ ಉತ್ಪಾದನೆ ಮಾಡುವಂಥ ಆ ಘಟಕವನ್ನು ಸಹ ಕೆಪಿಸಿಗೆ ಹಸ್ತಾಂತರ ಮಾಡಬೇಕಾದಂಥ ಅವಶ್ಯಕತೆ ಇದೆ. ಹೀಗೆ ಅನೇಕ ರೀತಿಯಲ್ಲಿ ಈ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಾಗ ನಾವು, ವಿದ್ಯುತ್ ಕಳವು ಎಲ್ಲಿ ಆಗುತ್ತಿದೆ ಅದನ್ನು ತಡೆಯುವುದಕ್ಕೆ ಟ್ರಾನ್ಸ್‌ಮಿಷನ್ ಲಾಸ್ ಎಲ್ಲಿ ಆಗುತ್ತಿದೆ, ಸರಬರಾಜಿನಲ್ಲಾಗುತ್ತಿರುವ ಈ ಹಾನಿಯ ಬಗ್ಗೆ, ಈ ರೀತಿಯ ಬಗ್ಗೆ ಕೂಲಂಕುಷವಾಗಿ ಯೋಚನೆಯನ್ನು ಮಾಡಿ ವಿದ್ಯುತ್ ಯೋಜನೆಗಳನ್ನು ಜಾರಿಗೆ ತರ ಬೇಕೆನ್ನುವಂಥದಿದ್ದೆ. ಅಧ್ಯಕ್ಷರೇ, ಈ ಮೂಲಕ ನಿಮ್ಮಲ್ಲಿ ಈ ವಿಷಯದ ಬಗ್ಗೆ ಹೇಳುವುದೇನೆಂದರೆ, ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ಯಾವುದೇ ರೀತಿಯ ಬೃಹತ್ ಜಲವಿದ್ಯುತ್ ಯೋಜನೆಗಳು ಬರುವುದಕ್ಕೆ ಸರ್ಕಾರ ಯೋಚನೆಯನ್ನು ಮಾಡಬಾರದು. ಮಿನಿ ಹೈಡ್ರಾಲಿಕ್ ಸ್ಕೀಂನಂಥ ಅಥವಾ ರನ್ ಆಫ್ ದಿ ರಿವರ್‌ನಂಥ ಸ್ಕೀಂನಂಥ

ಅನೇಕ ಸುಧಾರಣೆಗಳು ಬಂದಿರುವಂಥದ್ದಿದೆ. ಅಂಥ ಸಂದರ್ಭದಲ್ಲಿ ಈ ಸಂಗತಿಗಳ ಬಗ್ಗೆ ಯೋಚನೆಯನ್ನು ಮಾಡಬಾರದು. ಉತ್ತರ ಕನ್ನಡ ಜಿಲ್ಲೆಯ ಜನ ಈ ಬೃಹತ್ ಜಲವಿದ್ಯುತ್ ಯೋಜನೆಗಳು ಬಂದರೆ, ಅದನ್ನು ಸಹಿಸುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ಶಿಕ್ಷಣ ಇಲಾಖೆ ಕುರಿತಂತೆ ಒಂದೆರೆಡು ಮಾತುಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವತ್ತು ಇಲ್ಲಿ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ವಾರ್ಷಿಕ ವರದಿ ಇದೆ. ಇನ್ನು ನಿರ್ವಹಣ ಮುಂಗಡ ಪತ್ರವೂ ಸಹ ಇಲ್ಲಿದೆ. ಆದರೆ ನಾನು ಇದೆಲ್ಲದರ ಅಂಕಿಸಂಖ್ಯೆಗಳಿಗೆ ಏತಕ್ಕೆ ಹೋಗಬೇಕೆನ್ನುವ ಯೋಚನೆಯನ್ನು ನಾನು ಕುಳಿತಲ್ಲೇ ಮಾಡುತ್ತಿದ್ದೆ. ಏಕೆಂದರೆ ಇಲ್ಲಿರುವಂಥ ವಿದ್ಯಾರ್ಥಿಗಳ ಸಂಖ್ಯೆ, ನಾನು ಈ ಡ್ರಾಪ್‌ಔಟ್ ಸಂಖ್ಯೆಯನ್ನು ನೋಡಿದಾಗ ಶಿಕ್ಷಣ ಇಲಾಖೆಗೆ ಅಥವಾ ಸರ್ಕಾರಕ್ಕೆ ಶಿಕ್ಷಣ ಇಲಾಖೆಯ ಬಗ್ಗೆ ಎಷ್ಟು ಗಂಭೀರವಾದ ಚಿಂತನೆ ಇದೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಇವತ್ತು ಒಂದನೇ ತರಗತಿಯಿಂದ ನಾಲ್ಕನೇ ತರಗತಿಯತನಕ 53.54 ಲಕ್ಷ ಮಕ್ಕಳು ಓದುತ್ತಿದ್ದರೆ ಐದನೆ ತರಗತಿಯಿಂದ ಏಳನೇ ತರಗತಿಯ ತನಕ 26. 13 ಲಕ್ಷ ವಿದ್ಯಾರ್ಥಿಗಳು ಓದುತ್ತಾರೆ ಮತ್ತು ಎಂಟನೇ ತರಗತಿಯಿಂದ ಹತ್ತನೇ ತರಗತಿಯತನಕ 14.67 ಲಕ್ಷ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅಂದರೆ ಶೇಕಡ 50 ಕ್ಕಿಂತ ಹೆಚ್ಚು ಪ್ರತಿ ಹಂತಹಂತದಲ್ಲೂ ನಾವು ಡ್ರಾಪ್ ಔಟ್ ಅನ್ನು ಕಾಣುತ್ತಿದ್ದರೆ, ನಾವು ಈ ಶಿಕ್ಷಣ ವ್ಯವಸ್ಥೆಯ ಬಗ್ಗೆ ಎಷ್ಟು ಗಂಭೀರವಾದ ಚಿಂತನೆಯನ್ನು ಮಾಡಿದ್ದೇವೆ? ನಾವು ಈ ಪುಸ್ತಕದಲ್ಲೇ ಈ, ಸಂವಿಧಾನದ ಬದ್ಧವಾಗಿ 14 ವರ್ಷದ ಮಕ್ಕಳಿಗೆ ಉಚಿತವಾದಂಥ ಶಿಕ್ಷಣವನ್ನು ಕೊಡಬೇಕಾಗಿದೆ, ಇತ್ಯಾದಿ, ಇತ್ಯಾದಿಗಳನ್ನು ಬರೆಯುತ್ತೇವೆ. ಆದರೆ ಈ ಡ್ರಾಪ್ ಔಟ್‌ಅನ್ನು ಕಡಿಮೆ ಮಾಡಿ, ಮಕ್ಕಳು ಬಾಲ ಕಾರ್ಮಿಕರಾಗಿ ಏನು ಹೋಗುತ್ತಿದ್ದಾರೋ ಅದನ್ನು ತಡೆಗಟ್ಟಿ, ಅವರಿಗೆ ಈ ಶಿಕ್ಷಣದ ಸೌಲಭ್ಯವನ್ನು ಕೊಡುವುದರ ಬಗ್ಗೆ ಈ ಸರ್ಕಾರಕ್ಕೆ ಕಾಳಜಿಯಿಲ್ಲವೆನ್ನುವುದು ಈ ಅಂಕಿಸಂಖ್ಯೆಗಳನ್ನು ನೋಡಿದಾಗಲೇ ಗೊತ್ತಾಗುತ್ತದೆ. ಶೇಕಡ 90 ಕ್ಕಿಂತ ಹೆಚ್ಚು ಭಾಗ ಹಣವನ್ನು ಶಿಕ್ಷಣ ಇಲಾಖೆಯಲ್ಲಿ ಪಗಾರವನ್ನು ಕೊಡುವುದಕ್ಕೆ ಕೊಡುತ್ತಿದ್ದೇವೆ. ಆದರೆ ಇವತ್ತು ನಮ್ಮ ಶಾಲೆಗಳ ಸ್ಥಿತಿ ಹೇಗಿದೆ? ನಾನು ಪ್ರತಿ ವರ್ಷದ ಅನೇಕ ಹಿಂದಿನ ಡಿಬೇಟ್‌ಅನ್ನು ತೆಗೆದು ನೋಡುತ್ತಿದ್ದೆ. ಯಾವ ವರ್ಷ ನೋಡಿದರೂ ಪ್ರಶ್ನೆಗಳು ಯಾವುದು ಅಥವಾ ಸದನದಲ್ಲಿ ಮಾತನಾಡುವುದು ಯಾವುದು ಶಾಲಾ ಕಟ್ಟಡ ಹಾಳಾಗಿದೆ, ಅಧ್ಯಾಪಕರಿಲ್ಲ, ಪಠ್ಯಪುಸ್ತಕ ಸರಿಯಾಗಿ ಸಿಗುವುದಿಲ್ಲ, ಮೌಲ್ಯಮಾಪನದಲ್ಲಿ ದೋಷವಿದೆ, ವಿದ್ಯಾರ್ಥಿಗಳಿಗೆ ಪುಸ್ತಕದ ಹೊರೆಯಾಗಿದೆ, ವಿದ್ಯಾರ್ಥಿಗಳೇ ಇನ್ನು ಮುಂದೆ ಸಮಾಜಕ್ಕೆ ಹೊರೆಯಾಗಿದ್ದಾರೇನೋ ಎನ್ನುವ ಮಾತುಗಳನ್ನು ಇವತ್ತು ಸದನದಲ್ಲಿ ಆಡಿರುವುದನ್ನು ನೋಡುತ್ತಿದ್ದೇವೆ. ಅಂದರೆ ಸರ್ಕಾರಕ್ಕೆ ಪ್ರಾಥಮಿಕವಾಗಿ, ಈ ಪ್ರಾಥಮಿಕ ಶಿಕ್ಷಣದ ಬಗ್ಗೆ ನಾವು ಕನಿಷ್ಟ ಯಾವ ಯಾವ ಸೌಕರ್ಯಗಳನ್ನು ಕೊಡಬೇಕು ಎನ್ನುವುದರ ಬಗ್ಗೆ ಕಾಳಜಿಯಿಲ್ಲ. ಕಟ್ಟಡಗಳು ಇವತ್ತು ಬಿಟ್ಟು ಹೋಗುತ್ತಿವೆ. ನಾವು ವರ್ಷಕ್ಕೆ ರಸ್ತೆಗಳನ್ನು ನಿರ್ವಹಣೆ ಮಾಡುವುದಕ್ಕಾಗಲಿ ಅಥವಾ ಬೇರೆ ಬೇರೆ ನಿರ್ವಹಣೆಯ ವೆಚ್ಚಗಳೆಂದು ನಾವು ಅನೇಕ ಲೆಕ್ಕಶೀರ್ಷಿಕೆಗಳಲ್ಲಿ ತೋರಿಸುತ್ತೇವೆ. ಆದರೆ ಶಾಲಾ ಕಟ್ಟಡವನ್ನು ರಿಪೇರಿ ಮಾಡುವುದಕ್ಕೋಸ್ಕರ ಪ್ರತಿ ವರ್ಷ ಆಯ ವ್ಯಯದಲ್ಲಿ ಏತಕ್ಕೆ ಹೆಚ್ಚಿನ ಹಣವನ್ನು ನಾವು ತೆಗೆದು ಇಡಬಾರದು? ಇವತ್ತು ಶಾಲಾಕಟ್ಟಡಗಳು ಎಷ್ಟೆಷ್ಟು ಹಳೆಯದಿವೆ ಅದು ಇವತ್ತು ಬಿದ್ದು ಹೋಗುತ್ತಿದೆ.

ಹೋಗುತ್ತಿದೆ. ಅದಕ್ಕೆ ಪ್ರತಿ ವರ್ಷವೂ ಶಾಲೆಯ ಕಟ್ಟಡಗಳ ದುರಸ್ತಿಗೋಸ್ಕರವಾಗಿಯೇ ಇಂತಿಷ್ಟು ಹಣವನ್ನು ತೆಗೆದು ಇಡಬೇಕಾಗಿದೆ. ಮತ್ತು ಅಲ್ಲಿಯ ಸ್ಥಳೀಯ ಆಡಳಿತ ಸಮಿತಿ ಏನಿರುತ್ತದೆ, ಅದಕ್ಕೆ ಈ ಶಾಲೆಯ ಒಂದು ನಿರ್ವಹಣೆ ಮಾಡುವುದರ ಬಗ್ಗೆ, ಶಾಲೆಯ ನಿರ್ವಹಣೆಯನ್ನು ಮಾಡುವುದರ ಬಗ್ಗೆ ವಿಶೇಷವಾದಂಥ ಒಂದು ಅಧಿಕಾರವನ್ನು ಮತ್ತು ಆ ಒಂದು ಜವಾಬ್ದಾರಿಯನ್ನು ಅವರಿಗೆ ಕಲ್ಪಿಸಿಕೊಡಬೇಕಾದ ಅವಶ್ಯಕತೆಯಿದೆ. ಹಾಗೆ ಆದಾಗ ಮಾತ್ರ ಈ ಶಿಕ್ಷಣ ಇನ್ನಷ್ಟು ವ್ಯಾಪಕವಾಗಿ ಮತ್ತು ಆ ಒಂದು ಅರ್ಹ ವಿದ್ಯಾರ್ಥಿಗಳಿಗೆ ಸಿಗುವುದಕ್ಕೆ ಸಾಧ್ಯವಾಗುತ್ತದೆ. ನಾನು ಆಡಳಿತ ಬದಲಾವಣೆಯಿಂದ ಶಿಕ್ಷಣದಲ್ಲಿ ಬದಲಾವಣೆಯಾಗುತ್ತದೆಯೇ ಏನ್ನುವ ಒಂದು ಮಾತನ್ನು ಪ್ರಶ್ನೆಯ ರೂಪದಲ್ಲಿ ಸರ್ಕಾರಕ್ಕೆ ನಾನು ಕಳೆದ ಆರು ತಿಂಗಳ ಹಿಂದೆ ಕೇಳಿದ್ದೆ. ಏಕೆಂದರೆ ಇವತ್ತು ಎ.ಇ.ಓ.ಗಳ ಮೇಲೆ ಒಂದು ಬಿ.ಇ.ಓ. ಎನ್ನುವಂಥ ಹುದ್ದೆ ಇದೆ. ಅದೇ ರೀತಿ ನಾನು ಈ ನಿರ್ವಹಣ ಮುಂಗಡ ಪತ್ರದಲ್ಲೂ ನೋಡುತ್ತಿದ್ದೆ. ಇಲ್ಲಿ ಒಟ್ಟು ಎಷ್ಟು ಇಲಾಖೆಗಳಿವೆ, ಈ ಶಿಕ್ಷಣ ಇಲಾಖೆಯಲ್ಲಿರುವಂಥ ಅಧಿಕಾರಿಗಳ ಹುದ್ದೆಗಳೆಷ್ಟು, ಇವರುಗಳಿಗಾಗಬಹುದಾದ ಖರ್ಚುಗಳು ಎಷ್ಟು ಎನ್ನುವುದನ್ನು ನೋಡುತ್ತಾ ಇದ್ದೆ. ನಮ್ಮ ಆಡಳಿತ ವ್ಯವಸ್ಥೆ ಹೇಗಾಗಿದೆ ಎಂದರೆ, ನಮ್ಮ ಜನತೆಗೆ ತಲುಪುವುದಕ್ಕಿಂತ ಹೆಚ್ಚಾಗಿ, ಜನತೆಗೆ ತಲುಪಿಸುವಂಥ ಈ ವ್ಯವಸ್ಥೆಗೇ ನಾವು ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಿಜವಾಗಿ ಯಾವುದೇ ಯೋಜನೆಗಳನ್ನು ನೋಡಿದರು ಅದು ಯಾವ ಫಲಾನುಭವಿಗಳಿಗೆ ಸಿಗಬೇಕೋ ಅವರಿಗೆ ಸಿಗುತ್ತಾ ಇಲ್ಲ. ಅದರಲ್ಲಿ ಅದನ್ನು ಸಿಗುವಂತೆ ಮಾಡುವ ಅಧಿಕಾರಿಗಳ ವರ್ಗವಿದೆಯಲ್ಲಾ ಅದನ್ನು ತಲುಪಿಸುವುದಕ್ಕೆ ಬೇಕಾದಂಥ ವ್ಯವಸ್ಥೆ ಇದೆಯಲ್ಲ ಆ ಅಧಿಕಾರಿವರ್ಗಕ್ಕೆ ಹೆಚ್ಚಿನ ಹಣ ಖರ್ಚಾಗುತ್ತಿದೆ. ಇದಕ್ಕೆ ನಾವು ಒಂದು ಪರ್ಯಾಯವಾದಂಥ, ಮೂಲಭೂತವಾದಂಥ ಯೋಚನೆಯನ್ನು ಮಾಡಬೇಕಾದಂಥ ಅಗತ್ಯತೆಯಿಲ್ಲವಾ? ಇವತ್ತು ಒಬ್ಬ ಎಇಓ ಇದ್ದಾರೇ, ಅವರ ಮೇಲೆ ಬಿಇಓ ಎಂದು ಮಾಡಿದರು, ಅವರ ಕೆಲಸವೇನು? ಅವರ ಮೇಲೆ ಎಕ್ಸಿಕ್ಯೂಟಿವ್ ಆಫೀಸರ್ ಎಂದು ಹಾಕಿದರು. ಅಂದರೆ ಈ ರೀತಿಯ ಆಡಳಿತಾತ್ಮಕ ಬದಲಾವಣೆಗಳಿಂದ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ ಅಥವಾ ಅದರಲ್ಲಿರುವಂಥ ಶಕ್ತಿಯನ್ನು ತುಂಬುವುದಕ್ಕೆ ನಮಗೆ ಸಾಧ್ಯವಿಲ್ಲವೆನ್ನುವುದು ನಮಗೆ ಮನವರಿಕೆ ಇದೆ. ಹಾಗಾಗಿ ಸರ್ಕಾರ ಕೇವಲ ಸೂಪರ್ ಅಫಿಷಿಯಲ್ ಚೇಂಜ್‌ಅನ್ನು ಮಾಡದೇ ಅದರಲ್ಲಿ ಮೂಲಭೂತವಾದಂಥ ಒಂದು ಶಕ್ತಿಯನ್ನು ತುಂಬುವಂಥ ಕೆಲಸವಾಗಬೇಕು. ಆ ಕೆಲಸ ಹೇಗಾಗಬೇಕೆನ್ನುವುದರ ಬಗ್ಗೆ ನಾನು ಮತ್ತೆ ಪ್ರಸ್ತಾಪ ಮಾಡುವುದಿಲ್ಲ. ಅದು ಕೊಠಾರಿ ಕಮಿಷನ್ ವರದಿ ಇರಬಹುದು, ನರಸಿಂಹಯ್ಯ ಕಮಿಟಿ ವರದಿ ಇರಬಹುದು, ನವನೀತ ಕಮಿಟಿ, ಯಶ್‌ಪಾಲ್ ಕಮಿಟಿ ವರದಿ ಅಥವಾ ಹೊಸ ಶೈಕ್ಷಣಿಕ ನೀತಿ ಇದೆಲ್ಲದರಲ್ಲೂ ಹೇಳಿದೆ. ನಮ್ಮ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಂಥಾದ್ದಕ್ಕೆ ಹೇಗೆ ಅವಶ್ಯಕತೆ ಇದೆ ಎನ್ನುವುದನ್ನು ಆ ಎಲ್ಲಾ ಸಮಿತಿಗಳಲ್ಲಿ ಎಕ್ಸ್‌ಪರ್ಟ್‌ಗಳು ಹೇಳಿದ್ದಾರೆ. ಆದರೆ ನಾವು ಅವನ್ನು ಜಾರಿಗೆ ತರುವುದರ ಬಗ್ಗೆ ಕಾಳಜಿಯನ್ನು ಕೊಟ್ಟಿವೇ? ಗಮನವನ್ನು ವಹಿಸಿದೆವೇ? ಇಲ್ಲ. ಈ ಎಲ್ಲಾ ಸಮಿತಿಗಳ ವರದಿಗಳು ಇವತ್ತು ಧೂಳು ತಿನ್ನುತ್ತಿವೆ. ಯಾರು ಈ ಸಮಿತಿಗಳನ್ನು ಅಧ್ಯಯನ

ಮಾಡಿ ಇದನ್ನು ಅನುಷ್ಠಾನಕ್ಕೆ ತರಬೇಕು ಎಂದು ಅಧಿಕಾರಿಗಳಿಗೆ ಕಾಳಜಿ ಇಲ್ಲ, ಸರ್ಕಾರವನ್ನು ನಡೆಸುತ್ತಿರುವಂಥ ಮಂತ್ರಿಗಳಿಗೆ ಕಾಳಜಿ ಇಲ್ಲದೇ ಇರುವುದನ್ನು ನೋಡಿದ್ದೇವೆ. ಅದರ ಅರ್ಥ ನನಗೆ ಗೋವಿಂದೇಗೌಡರ ಬಗ್ಗೆಯಾಗಲೀ ಅಥವಾ ಇನ್ನಾವುದೇ ಮಂತ್ರಿಗಳ ಬಗ್ಗೆಯಾಗಲೀ ಗೌರವ ಕಡಿಮೆ ಇದೆ ಎಂದು ಅಲ್ಲ. ನಿಶ್ಚಿತವಾಗಿ ಅವರ ಬಗ್ಗೆ ಒಂದು ಒಳ್ಳೆಯ ಗೌರವದಿಂದ ಈ ಮಾತುಗಳನ್ನು ನಾನು ಹೇಳುತ್ತಿದ್ದೇನೆ. ಆದರೆ ಇವತ್ತು ಆ ವರದಿಗಳೆಲ್ಲಾ ಏಕೆ ಧೂಳು ತಿನ್ನುವಂಥ ಸ್ಥಿತಿ ಬಂದಿದೆ. ಅವರು ತಜ್ಞರು ಎಂದು ಏಕೆ ಅವರು ತಮ್ಮ ಸಮಯವನ್ನು, ಬುದ್ಧಿಯನ್ನು ಖರ್ಚು ಮಾಡಿ ಅವರು ಆ ವರದಿಯನ್ನು ಕೊಟ್ಟರು ಬೇರೆ ಬೇರೆಯವರ ಸಲಹೆ ಮಾರ್ಗದರ್ಶನವನ್ನು ಪಡೆದು, ಅದನ್ನು ನಿಜವಾಗಿ ಅಳವಡಿಸಬೇಕು ಎಂದು ಅಲ್ಲವೇ? ಆದರೆ ಅದನ್ನು ಅಳವಡಿಸುವಂಥ ಪ್ರಾಮಾಣಿಕತೆ ಕಿಂಚಿತ್ತಾದರೂ ಸರ್ಕಾರಕ್ಕೆ ಇಲ್ಲದೇ ಇರುವುದನ್ನು ನಾವು ಪ್ರತಿ ಹಂತದಲ್ಲಿ ಕಾಣುತ್ತಿದ್ದೇವೆ. ಅಂದರೆ ಈ ಎಲ್ಲಾ ವರದಿಗಳು ಇವತ್ತು ಧೂಳು ತಿನ್ನುತ್ತಿವೆ. ಇನ್ನೂ ಎಷ್ಟು ವರದಿಗಳಿವೆ ಎಂದು ನಾನು ಹೇಳುತ್ತಾ ಹೋದರೆ ಬಹುಶಃ ಅದೇ ಗಂಟೆಗಟ್ಟಳೆ ಆಗಬಹುದು. ನಮಗೆ ಗೊತ್ತಿದೆ, ಗುರುಪ್ರಸಾದ್ ಸಮಿತಿಯು ಎಸ್ ಸಿ/ ಎಸ್ ಟಿ ಹಾಸ್ಟಲ್‌ಗಳ ಸುಧಾರಣೆ ಬಗ್ಗೆ ಎಷ್ಟು ಒಂದು ಒಳ್ಳೆಯ ವರದಿಯನ್ನು ಕೊಟ್ಟಿದೆ. ಆದರೆ ಗುರುಪ್ರಸಾದ್ ಸಮಿತಿಯ ವರದಿ ಏನಾಯಿತು? ಇನ್ನೂ ಪರಿಶೀಲನೆ ಹಂತದಲ್ಲಿದೆ. ಇನ್ನೂ ಯೋಚನೆ ಮಾಡುತ್ತೇವೆ, ಹಣಕಾಸಿನ ಅಭಾವ ಇದೆ, ಈ ರೀತಿಯ ಮಾತುಗಳನ್ನು ಹೇಳುತ್ತಾ ಈ ಎಲ್ಲಾ ವರದಿಗಳೂ ಮೂಲೆ ಗುಂಪಾಗಿವೆ. ಆ ಮೂಲಕ ಆ ತಜ್ಞರಿಗೆ ನಾವು ಅಗೌರವವನ್ನು ತೋರಿಸುತ್ತಿದ್ದೇವೆ ಎಂದು ಹೇಳಿದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಇವತ್ತು ಅವರು ಕೊಟ್ಟಂಥ ತಜ್ಞರ ವರದಿಗಳನ್ನು ನಾವು ನಿರ್ಲಕ್ಷ್ಯ ಮಾಡುವುದರ ಮೂಲಕ ಆ ತಜ್ಞಗಾರಿಕೆಗೆ, ಆ ತಜ್ಞತೆಗೆ ಅವಮಾನವನ್ನು ಮಾಡುತ್ತಿದ್ದೇವೆ. ಅಂದರೆ ಇನ್ನು ಮುಂದೆ ಬರುವಂಥ ದಿನಗಳಲ್ಲಿ ತಜ್ಞರ ಸಮಿತಿ ಎಂದು ನಾವು ಮಾಡಲು ಹೋದರೆ ಆ ತಜ್ಞರು ಹೇಳಬಹುದು, ಬೇಡಪ್ಪಾ, ಆ ಎಲ್ಲಾ ವರದಿಗಳೂ ಧೂಳು ತಿನ್ನುತ್ತಿವೆಲ್ಲಾ, ನನ್ನ ವರದಿಯೂ ಅದೇ ರೀತಿ ಆಗಬಹುದು, ನಾನು ಕೊಡುವುದಿಲ್ಲ ಎಂದು ಹೇಳುವಂಥ ಸ್ಥಿತಿಗೆ ಬರಬಹುದು. ಸರ್ಕಾರ ಈ ರೀತಿ ನಿರ್ಲಕ್ಷ್ಯ ಮಾಡುವುದರಿಂದ ಅದರ ದೂರಗಾಮಿ ಪರಿಣಾಮ ಏನು ಎನ್ನುವುದರ ಬಗ್ಗೆ ಸಹ ಯೋಚನೆ ಮಾಡುವಂಥಾದ್ದು ಇದೆ. ಇನ್ನು ನಾನು ಸಿಲಬಸ್ ಬಗ್ಗೆ ಹೇಳುವುದಾದರೆ ಬಹಳ ನೋವಾಗುತ್ತದೆ. ಏಕೆಂದರೆ ನಾವು ಇದೇ ಶಿಕ್ಷಣ ವ್ಯವಸ್ಥೆಯಲ್ಲಿ, ಇದೇ ಸಿಲಬಸ್‌ನಲ್ಲಿ ಓದಿ ಬಂದಂಥವರು. ಸ್ವಾಮಿ ವಿವೇಕಾನಂದರು ಏನು ಹೇಳಿದರು, ಯಾವ ವಿದ್ಯಾರ್ಥಿ ಯಲ್ಲಿರುವಂಥ, ಅಥವಾ ವ್ಯಕ್ತಿಯಲ್ಲಿರುವಂಥ ವ್ಯಕ್ತಿತ್ವವನ್ನು ರೂಪ ಮಾಡುತ್ತೋ ಅದು ನಿಜವಾದಂಥ ಶಿಕ್ಷಣ ಎಂದು ಹೇಳಿದರು. ಆದರೆ ಇವತ್ತು ಏನಾಗಿದೆ? ಶಿಕ್ಷಣ ಒಂದು ವ್ಯಾಪಾ ರೀಕರಣ ಆಗಿರುವುದನ್ನು ನೋಡುತ್ತೇನೆ. ಇವತ್ತು ಎಲ್.ಕೆ.ಜಿ./ಯು.ಕೆ.ಜಿ.ಗೆ ಡೊನೇಷನ್ ಕೊಡಬೇಕು. ಅಧ್ಯಕ್ಷರೇ, ನೀವು ಮೊನ್ನೆ ಹೇಳಿದಿರಿ, ಮದುವೆ ಆಗುವುದಕ್ಕಿಂತ ಮೊದಲು ಛತ್ರವನ್ನು ಹುಡುಕುತ್ತಾರೆ ಎಂದು ಆದರೆ ಇವತ್ತು ಹಾಗೆ ಇಲ್ಲ. ಮದುವೆ ಆಗುವುದಕ್ಕಿಂತ ಮೊದಲು ಹುಡುಗರನ್ನು ಎಲ್.ಕೆ.ಜಿ.ಗೆ ಎಲ್ಲಿ ಸೇರಿಸಬೇಕು ಎಂದು

ಹುಡುಕುವಂಥ ಪರಿಸ್ಥಿತಿ ಬಂದಿದೆ ಇವತ್ತು. ಅಂದರೆ ಎಲ್.ಕೆ.ಜಿ.ಗೆ, ಯು.ಕೆ.ಜಿ.ಗೆ ಸೇರಿಸುವಾಗ ಸಹ ಇಷ್ಟು ಮೊದಲೇ ಚಿಂತನೆ ಮಾಡಿ ಅದಕ್ಕೆ ಬೇಕಾಗಿರುವಂಥ ಹಣವನ್ನು ಒಟ್ಟು ಮಾಡಿಕೊಳ್ಳಬೇಕಾದಂಥ ದುಸ್ಥಿತಿ ಬಂದು ಒದಗಿದೆ. ಇಂಜನಿಯರಿಂಗ್, ಮೆಡಿಕಲ್ ಬಗ್ಗೆ ನಾನು ಹೇಳುವುದಿಲ್ಲ. 15-20 ಲಕ್ಷ ರೂಪಾಯಿ ಕೊಟ್ಟು ಒಬ್ಬ ಬಡ ವಿದ್ಯಾರ್ಥಿ ಅವನಿಗೆ ಆ ಪ್ರತಿಭೆ ಇದ್ದರೂ ಸಹ ಅವನು ಇವತ್ತು ಹೇಗೆ ಮೂಲೆ ಗುಂಪು ಆಗುತ್ತಿದ್ದಾನೆ ಎನ್ನುವುದು ಅಲ್ಲ. ಇವತ್ತು ಈ ಪ್ರಾಥಮಿಕ ಶಿಕ್ಷಣವೇ ವ್ಯಾಪಾರೀಕರಣವಾಗಿದೆ. ಇನ್ನು ಎಲ್ಲಿ ನಾವು ವ್ಯಕ್ತಿಯಲ್ಲಿ ಇರುವಂಥ ವ್ಯಕ್ತಿತ್ವವನ್ನು ರೂಪುಗೊಳಿಸುವಂಥ ಶಿಕ್ಷಣವನ್ನು ಜಾರಿಗೆ ತರುವುದು? ಇವತ್ತು ಈ ಪ್ರಾಥಮಿಕ ಶಿಕ್ಷಣವೇ ವ್ಯಾಪಾರೀಕರಣವಾಗಿದೆ. ಇನ್ನು ಎಲ್ಲಿ ನಾವು ವ್ಯಕ್ತಿಯಲ್ಲಿ ಇರುವಂಥ ವ್ಯಕ್ತಿತ್ವವನ್ನು ರೂಪುಗೊಳಿಸುವಂಥ ಶಿಕ್ಷಣವನ್ನು ಜಾರಿಗೆ ತರುವುದು? ಇವತ್ತು ನಮ್ಮ ಇತಿಹಾಸದ ಬಗ್ಗೆ ನಮಗೆ ಎಷ್ಟು ಅರಿವು ಇದೆ. ನಾನು ಕಳೆದ ನಾಲ್ಕಾರು ವರ್ಷಗಳ ಹಿಂದೆ ವೀರ ಸಾವರ್‌ಕರ್‌ರವರ ಜನ್ಮ ಶತಾಬ್ದಿಯನ್ನು ಮಾಡಬೇಕು ಎಂದು ಕಾಲೇಜು ಗಳಿಗೆ ನಾನು ಓಡಾಡುತ್ತಿದ್ದೆ. ಎಲ್ಲಾ ಕಾಲೇಜುಗಳಲ್ಲೂ ವೀರ ಸಾವರ್‌ಕರ್‌ರವರ ಜನ್ಮ ಶತಮಾನೋತ್ಸವವನ್ನು ನಾವು ಮಾಡಬೇಕು ಎಂದು. ನನಗೆ ಬಹಳ ನೋವಾಗುತ್ತದೆ, ಈ ಮಾತನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳುವುದಕ್ಕೆ. ಒಂದು ಕಾಲೇಜಿಗೆ ನಾನು ಹೋಗಿ ಭೇಟಿ ಮಾಡಿ ವೀರ್ ಸಾವರ್‌ಕರ್‌ರವರ ಕಾರ್ಯಕ್ರಮ ಆಗಬೇಕು ಎಂದರೆ, ಅವರೂ ಬರುತ್ತಾರಲ್ಲಾ ಕಾರ್ಯಕ್ರಮಕ್ಕೆ ಎಂದು ಕೇಳಿದರು. ಅಂದರೆ ನಮ್ಮ ಪರಿಸ್ಥಿತಿ ಎಲ್ಲಿ ಹೋಗಿ ತಲುಪಿದೆ ಎಂದು. ವೀರ ಸಾವರ್‌ಕರ್ ಯಾರು? ಅವರ ಜನ್ಮ ಶತಮಾನೋತ್ಸವವನ್ನು ಮಾಡುವುದಿದ್ದರೆ, ಅವರೂ ಬರುತ್ತಾರಲ್ಲಾ ಎಂದು ಕೇಳುವಂಥ ಸ್ಥಿತಿ ಒಂದು ಕಾಲೇಜಿನಲ್ಲಿ ಇದೆ ಎಂದಾದರೆ ಇತಿಹಾಸದ ಬಗ್ಗೆ ಅಥವಾ ಈ ದೇಶದ ರಾಷ್ಟ್ರೀಯ ಪುರುಷರ ಬಗ್ಗೆ ನಮ್ಮ ಶಿಕ್ಷಣದಲ್ಲಿ ನಮಗೆ ಎಷ್ಟು ಮಾಹಿತಿ ಸಿಕ್ಕಿದೆ ಎನ್ನುವಂಥಾದ್ದು ಅರಿವಾಗುತ್ತದೆ. ಇವತ್ತು ನನಗೆ ಬೀಚಿಯ ಮಂಕುತಿಮ್ಮನ ಒಂದು ಜೋಕು ನೆನಪಾಗುತ್ತದೆ. ಬೀಚಿ ನಮಗೆಲ್ಲಾ ಗೊತ್ತಿರುವಂಥ ವ್ಯಕ್ತಿ. ಅವರು ತಿಮ್ಮನ ಹೆಸರಿನಲ್ಲಿ ಬರೆಯುತ್ತಿರುವಂಥ ಒಂದು ಜೋಕಿನಲ್ಲಿ ಹೇಳುತ್ತಾರೆ. ನನಗೆ ಈ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾತನಾಡುವಾಗಲೆಲ್ಲಾ ಅದು ನೆನಪಾಗುತ್ತದೆ. ತಿಮ್ಮ ನಾಲ್ಕನೇ ಈಯತ್ತೆ ಓದುತ್ತಿರುವಾಗ ಅವನ ಹೆಡ್ ಮಾಸ್ಟರ್ ಕೇಳಿದರಂತೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಯಾವಾಗ ಬಂತು ಎಂದು. ತಿಮ್ಮನಿಗೆ ಬಹಳ ಸಂತೋಷ ಆಯಿತು. ಅವನು ಎದ್ದು ನಿಂತು ಹೇಳಿದ, 1947ನೇ ಇಸವಿ ಆಗಸ್ಟ್ 14 ರ ಮಧ್ಯರಾತ್ರಿ 12 ಗಂಟೆಗೆ ನಮಗೆ ಸ್ವಾತಂತ್ರ್ಯ ಸಿಕ್ಕಿತು ಎಂದು. ಹೆಡ್ ಮಾಸ್ಟರ್‌ಗೆ ಖುಷಿಯಾಗಿ ಬಿಟ್ಟಿತು, ನಮ್ಮ ತಿಮ್ಮ ಯಾವಾಗ ಇಷ್ಟು ಬುದ್ಧಿವಂತನಾದ ಎಂದು. ಯಾರಿಂದ ನಮಗೆ ಸ್ವಾತಂತ್ರ್ಯ ಬಂದು ಎಂದು ಕೇಳಿದರು, ಸರ್ ನಮಗೆ ಬ್ರಿಟಿಷರಿಂದ ಸ್ವಾತಂತ್ರ್ಯ ಬಂತು, ಮುಂದೆ ಕೇಳಿದರಂತೆ, 1951 ನೇ ಇಸವಿಯಲ್ಲಿ ಏನಾಯಿತು ಎಂದು. ದೇಶಕ್ಕೆ ಸ್ವಾತಂತ್ರ್ಯ ಬಂದು ನಾಲ್ಕು ವರ್ಷವಾಯಿತು ಎಂದು ಹೇಳಿದನಂತೆ ಇವತ್ತು ನಮ್ಮ ಪರಿಸ್ಥಿತಿ ಇಷ್ಟೇ ಆಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಎಷ್ಟು ವರ್ಷವಾಯಿತು ಎಂದು ಕೇಳಿದರೆ, ಸ್ವಾತಂತ್ರ್ಯ ಬಂದನಂತರ ಏನಾಯಿತು ಅಥವಾ 1996 ರಲ್ಲಿ ಏನಾಗುತ್ತಿದೆ ಎಂದು ಕೇಳಿದರೆ ವರ್ಷವನ್ನು ಲೆಕ್ಕ ಹಾಕುತ್ತೇವೆಯೇ ಹೊರತು ನಮಗೆ ನಿಜವಾಗಿ

ಸ್ವಾತಂತ್ರ್ಯದ ಒಂದು ಮಹತ್ವ ತಿಳಿಯದೇ ಇರುವಂಥ ಸ್ಥಿತಿಯಲ್ಲಿ ನಾವು ಇವತ್ತು ಇದ್ದೇವೆ. ನಾವು ವರ್ಷವನ್ನು ಹೇಳುತ್ತೇವೆ, ಆದರೆ ಸ್ವಾತಂತ್ರ್ಯ ನಂತರದ ಭಾರತದಲ್ಲಿ ಏನಾಗಿದೆ? ಆ ಸ್ವಾತಂತ್ರ್ಯಕ್ಕೋಸ್ಕರವಾಗಿ ಹೋರಾಟ ಮಾಡಿರುವಂಥ ವ್ಯಕ್ತಿಗಳಿಂದ ನಾವು ಯಾವ ಪ್ರೇರಣೆಯನ್ನು ಪಡೆದಿದ್ದೇವೆ? ನಮ್ಮ ಶಿಕ್ಷಣದಲ್ಲಿ ಈ ರೀತಿಯ ಒಂದು ನೈತಿಕ ಶಿಕ್ಷಣವನ್ನು ಅಥವಾ ಐತಿಹಾಸಿಕ ಶಿಕ್ಷಣವನ್ನು ಅಥವಾ ಒಂದು ಆದರ್ಶವನ್ನು ಸ್ಥಾಪಿಸಬೇಕಾದಂಥ ಶಿಕ್ಷಣವನ್ನು ಯಾವ ಒಂದು ಸಿಲಬಸ್‌ನಲ್ಲಿ ಅಳವಡಿಸಿದೆ. ಅದರಲ್ಲೂ ಒಂದು ಸಣ್ಣ ಮನೋಭಾವವನ್ನು ನಾವು ಕಾಣುತ್ತಿದ್ದೇವೆ. ಗಣಪತಿ ಬಗ್ಗೆ ಒಂದು ಪಾಠ ಇದ್ದರೆ ಮತ್ತೊಂದು ಈಶ್ವರನ ಅಥವಾ ಅಲ್ಲಾನ ಬಗ್ಗೆ ಇರಲೇಬೇಕು. ನಾನು ಹೇಳುತ್ತಾ ಇರುವಂಥಾದ್ದು ಎಂದರೆ ಹಿಂದೂ ಧರ್ಮದ ಬಗ್ಗೆ ಒಂದು ಇದ್ದರೆ ಮುಸ್ಲಿಮರ ಬಗ್ಗೆ ಒಂದು ಇರಲೇಬೇಕು, ಕ್ರಿಶ್ಚಿಯನ್ನರ ಬಗ್ಗೆ ಒಂದು ಇರಲೇಬೇಕು ಎನ್ನುವಂಥ ಒಂದು ರಾಜಕಾರಣದ ಛಾಯೆಯನ್ನು ನಾವು ಇವತ್ತು ಕಾಣುತ್ತಿದ್ದೇವೆ. ಇವತ್ತು ನಮ್ಮ ಮೂಲಭೂತವಾದಂಥ ಶಿಕ್ಷಣದ ಮೌಲ್ಯಗಳನ್ನು ಏನು ವಿದ್ಯಾರ್ಥಿಗಳಲ್ಲಿ ಸ್ಥಾಪಿಸಬೇಕು ಅದು ಆಗುತ್ತಿಲ್ಲ. ನಾವು ಎಲ್ಲವನ್ನೂ ಕೊಡೋಣ. ಆದರೆ ವ್ಯಕ್ತಿಯಲ್ಲಿ ವ್ಯಕ್ತಿತ್ವವನ್ನು ನಿರ್ಮಾಣ ಮಾಡುವಂಥ ಮೂಲಭೂತವಾಗಿ ಅವರಿಗೆ ಆ ಒಂದು ಶಕ್ತಿಯನ್ನು ಕೊಟ್ಟು ಆದರ್ಶವನ್ನು, ತತ್ವ ಸಿದ್ಧಾಂತವನ್ನು ಅವರಲ್ಲಿ ಮೈಗೂಡಿಸಿಕೊಳ್ಳುವಂಥ ಒಂದು ಶಿಕ್ಷಣವನ್ನು ಕೊಡಬೇಕಾದ ಅವಶ್ಯಕತೆ ಇದೆ. ಇವತ್ತು ಸ್ವಾಭಿಮಾನಿ ಶೂನ್ಯ ವಾದಂಥ ಸಮಾಜವನ್ನು ನಾವು ಏಕೆ ಕಾಣುತ್ತಿದ್ದೇವೆ? ಇವತ್ತು ನಮ್ಮ ಸುತ್ತಮುತ್ತಲೂ ನಾವು ನೋಡುತ್ತಿರುವಂಥ ಪರಿಸ್ಥಿತಿ ಏನಿದೆ? ಎಲ್ಲಿ ನೋಡಿದರಲ್ಲಿ ಆದರ್ಶಗಳ ಅಧಃಪತನ ಆಗಿರುವಂಥಾದ್ದು, ಮೌಲ್ಯಗಳ ಅಧಃಪತನ ಆಗಿರುವಂಥಾದ್ದನ್ನು ನೋಡು ತ್ತಿದ್ದೇವೆ. ಏಕೆ ಹೀಗಾಗಿದೆ? ಮೂಲಭೂತವಾಗಿ ಈ ಶಿಕ್ಷಣವನ್ನು ನಾವು ಕೊಡುತ್ತಿ ರುವಂಥ ಕಾರಣಗಳಿಂದ. ಲಾರ್ಡ್ ಮೆಕಾಲೆ ಯಾವುದೋ ವರ್ಷದಲ್ಲಿ, 1835 ನೇ ಇಸವಿಯಲ್ಲಿ ಈ ಶಿಕ್ಷಣ ಪದ್ಧತಿ ಇಲ್ಲಿ ಇರಲಿ, ಗುಲಾಮರಾಗಿ ನಾವು ಬದುಕುವಂಥ ವ್ಯವಸ್ಥೆ ಮುಂದುವರೆಯಲಿ ಎಂದರೆ, ಅದೇ ಶಿಕ್ಷಣ ವ್ಯವಸ್ಥೆಯನ್ನು ನಾವು ಇವತ್ತಿಗೂ ಮುಂದುವರಿಸಿಕೊಂಡು ಹೋಗುತ್ತಿದ್ದೇವಲ್ಲ! ಆದರೆ ಭಾರತದ ಮಣ್ಣಿನಗುಣಕ್ಕೆ ಅನುಗುಣ ವಾದಂಥ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವುದಕ್ಕೆ ನಾವು ವಿಫಲರಾಗಿದ್ದೇವೆ. ಅಂಥ ಒಂದು ಸಿಲಬಸ್‌ಅನ್ನು ಕೊಡುವುದಕ್ಕೆ ಸಹ ನಮ್ಮ ಸರ್ಕಾರ ವಿಫಲವಾಗಿರುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಇವತ್ತು ಅನೇಕರಿಗೆ ಈ ದೇಶದ ಸ್ವಾತಂತ್ರ್ಯಕ್ಕೋಸ್ಕರವಾಗಿ ಹೋರಾಟ ಮಾಡಿರುವಂಥ ವ್ಯಕ್ತಿಗಳ ಬಗ್ಗೆ ಗೊತ್ತಿಲ್ಲ ಎನ್ನುವ ಸ್ಥಿತಿಗೆ ಹೋದರೆ ನಾಳಿನ ನಮ್ಮ ಸಮಾಜ ಹೇಗೆ ರೂಪಿತವಾಗಬಹುದು? ಈ ಸಿಲಬಸ್‌ಅನ್ನು ಕೊಡ ಬೇಕಾಗುತ್ತದೆ. ಅದರ ಬಗ್ಗೆ ಚಿಂತನೆ ಆಗಬೇಡವೇ? ತಜ್ಞರು ಕೊಟ್ಟಿರುವಂಥ ವರದಿ ಗಳನ್ನು ನಾವು ಜಾರಿಗೆ ತರುವುದು ಬೇಡವೇ? ನಾನು ಕೇವಲ ಅಂಕಿಸಂಖ್ಯೆಗಳನ್ನು ಹಿಡಿದುಕೊಂಡು ಹೇಳುವುದಕ್ಕೆ ಬಯಸುವುದಿಲ್ಲ. ಅದು ನಿಜ. ಇವತ್ತು ಎಲ್ಲಾ ಹಂತದಲ್ಲಿ ಕೊರತೆ ಇದೆ. ಇನ್ನೂ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕಾದಂಥ ಅವಶ್ಯಕತೆ ಇದೆ. ಆದರೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೋ, ಅಷ್ಟೇ ಹಣದಿಂದಾದರೂ ಆ ಒಂದು ಶಕ್ತಿಯನ್ನು ತುಂಬಬೇಕಿತ್ತು ಅಲ್ಲವೇ?

ಅಧ್ಯಕ್ಷರು :- ನೀವು ಏನು ವಿಷಯ ಪ್ರಸ್ತಾಪ ಮಾಡುತ್ತಿದ್ದೀರಿ, ಅದನ್ನು ಪ್ರತ್ಯೇಕಿಸಿ ನಾವು ಮಾತನಾಡುವುದಕ್ಕೆ ಆಗುವುದಿಲ್ಲ. ನಮ್ಮಲ್ಲಿರತಕ್ಕಂಥ ಸಾಂಸ್ಕೃತಿಕ ನೀತಿ ಏನಿದೆ ದೇಶದಲ್ಲಿ, ಅದು ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಆಗಬಹುದು ಅಥವಾ ಬೇರೆ ಟಿ.ವಿ. ಕಾರ್ಯಕ್ರಮಗಳಿಗೆ ಸಂಬಂಧಿಸಿದ್ದೇ ಆಗಲೀ, ಇವುಗಳ ಜೊತೆ ಜೊತೆಗೇ ಇದನ್ನೂ ಮನಸ್ಸಿನಲ್ಲಿ ಇಟ್ಟುಕೊಂಡು ಚರ್ಚೆ ಮಾಡಬೇಕು. ನಾವು ಇತಿಹಾಸ, ಇನ್ನೊಂದು ಮತ್ತೊಂದು ಎಂದೆಲ್ಲಾ ಒಳ್ಳೆಯ ಶಿಕ್ಷಣದ ಗುಣಮಟ್ಟವನ್ನು ನಾವು ಇಟ್ಟುಕೊಂಡರೂ ಕೂಡ ಮಗು ಮನೆಬಿಟ್ಟು ಹೊರಗೆ ಹೋದ ತಕ್ಷಣ ಬೀದಿಯಲ್ಲಿ ನೋಡತಕ್ಕಂಥಾದೆಲ್ಲಾ ಹೊಲಸೇ ಆದರೆ ಅದರ ಮಾನಸ್ಸಿನ ಮೇಲೆ ಪರಿಣಾಮ ಏನಾಗುತ್ತದೆ ಹೇಳಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :- ಇದೂ ಸರ್ಕಾರದ ಒಂದು ನೀತಿಯ ಅಂಗವಾಗೇ ಆಗುತ್ತಿರುವಂಥಾದ್ದು.

ಅಧ್ಯಕ್ಷರು :- ಆ ಕಡೆಗೂ ಒಂದು ರೌಂಡ್ ಹೋಗಿ ಬನ್ನಿ ಎಂದು ನಾನು ನಿಮಗೆ ಹೇಳುತ್ತಿದ್ದೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :- ನಿಶ್ಚಿತವಾಗಿ ಇದೂ ಸಹ ಸರ್ಕಾರದ ನೀತಿಯ ಒಂದು ಭಾಗವಾಗೇ ಆಗುತ್ತಿರುವಂಥಾದ್ದು. ಇವತ್ತು ನಾವು ವಿದೇಶೀ ಮಾಧ್ಯಮಗಳನ್ನು ಅನುಸರಿಸಿಕೊಂಡು ಆ ಒಂದು..

ಅಧ್ಯಕ್ಷರು :- ನಮ್ಮ ಮಕ್ಕಳಿಗೆಲ್ಲಾ ಮೈಕಲ್ ಜಾಕ್ಸನ್ ಪರಿಚಯ ಇದೆ. ಆದರೆ ಭಗತ್‌ಸಿಂಗ್ ಹೆಸರು ಗೊತ್ತಿಲ್ಲ. ಇದು ನಮ್ಮ ದುರ್ದೈವ್.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :- ನಾನು ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೆ, ಅಧ್ಯಕ್ಷರೇ, ವೀರ ಸಾವರ್‌ಕರ್‌ರವರು ಬರುತ್ತಾರಲ್ಲಾ ಕಾರ್ಯಕ್ರಮಕ್ಕೆ ಎಂದು ಹೇಳುವಂಥ ಸ್ಥಿತಿಯಲ್ಲಿ ನಾವಿದ್ದೇವೆ ಎಂದರೆ, ನಾವು ನಮ್ಮ ಮಹಾಪುರುಷರ ಬಗ್ಗೆ ಅದೆಷ್ಟು ವಿಷಯವನ್ನು ನಾವು ತಿಳಿದುಕೊಂಡಿದ್ದೇವೆ ಎನ್ನುವಂಥ ನೋವು ನಮಗೆ ಆಗುತ್ತಿದೆ. ನಿಜ, ಇವತ್ತು ಇಡೀ ವ್ಯವಸ್ಥೆಯ ಒಂದು ವಿಷ ವರ್ತುಲದಲ್ಲಿ ನಾವು ಸಿಕ್ಕಿ ಹಾಕಿಕೊಂಡಿದ್ದೇವೆ. ಆದರೆ ಇದನ್ನು ನಾವು ಬಿಡಿಸಿಕೊಳ್ಳುವಂಥ ಒಂದು ಪ್ರಯತ್ನ ವನ್ನು ಕರ್ನಾಟಕ ರಾಜ್ಯದಿಂದ, ನಮ್ಮಿಂದ ಆಯಿತು ಎನ್ನುವಂಥಾದ್ದಕ್ಕೆ ಸರ್ಕಾರದಲ್ಲಿರು ವಂಥ ಮಂತ್ರಿಗಳಾಗಲೀ ಅಥವಾ ವ್ಯಕ್ತಿಗಳಾಗಲೀ ಏಕೆ ಮುಂದಾಗುವುದಿಲ್ಲ? ನಮ್ಮಿಂದ ಆಯಿತು, ಬದಲಾವಣೆಯ ಹರಿಕಾರ ನಾನಾಗಿದ್ದೇನೆ ಎನ್ನುವಂಥ ಒಂದು ಶಕ್ತಿಯ ಒಂದು ಚಿಂತನೆಯ ಮಾತನ್ನು ಏಕೆ ಹೇಳುವುದಕ್ಕೆ ಒಬ್ಬರೂ ತಯಾರಿಲ್ಲ. ಅಂದರೆ ನಾವು ಈ ಒಂದು ವಿಷವರ್ತುಲದಲ್ಲಿ ಸುತ್ತುತ್ತಿದ್ದೇವೆಯೇ ಹೊರತು ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸುವುದಕ್ಕೆ ಪ್ರಾಮಾಣಿಕವಾಗಿ ಅಥವಾ ಆ ಒಂದು ಆದರ್ಶವನ್ನು ಸ್ಥಾಪಿಸುವುದಕ್ಕೆ ಬೇಕಾಗಿರುವ ಆಡಳಿತ ವ್ಯವಸ್ಥೆಯಲ್ಲಿ ಆ ದೋಷವನ್ನು

ನಾವು ಕಾಣುತ್ತಿದ್ದೇವೆ. ಇವತ್ತು ವಿದೇಶಿ ಮಾಧ್ಯಮಗಳು ಇರಲಿ. ಆ ಮಾಧ್ಯಮಗಳಿಂದ ಆಗುತ್ತಿರುವಂಥ ದುಷ್ಪರಿಣಾಮಗಳು ಅನೇಕ ಇವೆ. ನಾನು ಆ ಎಲ್ಲಾ ವಿವರಗಳಿಗೆ ಹೋಗುವುದಿಲ್ಲ. ಇವತ್ತು ನಾವು ಕಾಲೇಜಿನಲ್ಲಿ ಅಥವಾ ಹೈಸ್ಕೂಲಿನಲ್ಲೂ ಸಹ ಶಿಕ್ಷಣದ ಮೂಲವನ್ನು, ಆ ಶಿಕ್ಷಣದ ವ್ಯವಸ್ಥೆಯನ್ನು ನೋಡಿದರೆ, ಇವತ್ತು ಅನೇಕ ವಿದ್ಯಾರ್ಥಿಗಳಿಗೆ ಈ ಶಿಕ್ಷಣವನ್ನು ಪಡೆಯುವುದಕ್ಕಿಂತಲೂ ಹೆಚ್ಚಾಗಿ ರಸ್ತೆಯಲ್ಲಿ ಸುತ್ತಾಡುವುದೇ ಹೆಚ್ಚು ಚೆಂದ ಕಾಣುತ್ತಿದೆ. ಈ ಶಿಕ್ಷಣದಿಂದ ನಾವು ಕಲಿಯುವಂಥಾದ್ದು ಏನೂ ಇಲ್ಲ ಎಂದು ಆಗಿಬಿಟ್ಟಿದೆ. ಆ ಪರಿಸ್ಥಿತಿಗೆ ನಾವು ಹೋಗಿ ತಲುಪಿದ್ದೇವೆ. ಇವತ್ತು ಡ್ರಾಪ್ ಔಟ್ ಸಂಖ್ಯೆ ಹೆಚ್ಚಾಗಲು ಈ ರೀತಿಯ ಸಿಲಬಸ್ ಇಲ್ಲ ಎನ್ನುವ ಕೊರತೆ, ಇದರ ಜೊತೆಜೊತೆಯಲ್ಲಿ ನಾವು ನಮ್ಮ ಆಡಳಿತ ವ್ಯವಸ್ಥೆಯನ್ನು ಹೇಗೆ ರೂಪಿಸಿಕೊಂಡದ್ದೇವೆ ಎಂದರೆ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭಾ ಪಲಾಯನ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಬ್ರೈನ್‌ಡ್ರೈನ್ ಆಗುತ್ತಿರುವಂಥಾದ್ದನ್ನು ನೋಡುತ್ತಿದ್ದೇವೆ. ಪ್ರತಿಭಾ ಪಲಾಯನವಾಗುತ್ತಿದೆ. ಒಂದು ಕಡೆಯಲ್ಲಿ ಶಿಕ್ಷಣವನ್ನು ಕೊಡಲಿಕ್ಕೆ ಆಗುತ್ತಿಲ್ಲ. ಇನ್ನೊಂದು ಕಡೆಯಲ್ಲಿ ಕೊಟ್ಟಿರುವಂಥ ಶಿಕ್ಷಣದಿಂದ ನಾವು ಉತ್ತಮವಾದಂಥ ವಿದ್ಯಾರ್ಥಿಗಳನ್ನು ಈ ಸಮಾಜದಲ್ಲಿ ನಾವು ಪಡೆದರೆ ಅವರನ್ನು ನಾವು ನಮ್ಮ ದೇಶಕ್ಕೆ ಅಥವಾ ನಮ್ಮ ಜನರ ಸೇವೆಗೆ ಇಟ್ಟುಕೊಳ್ಳಲು ಆಗುತ್ತಿಲ್ಲ. ಅಂದರೆ ಸರ್ಕಾರದ ನೀತಿ ಹೇಗೆ ವಿಪರ್ಯಾಸವಾಗಿ ಒಂದುಕ್ಕೊಂದು ತದ್ವಿರುದ್ಧವಾಗಿ ನಡೆಯುತ್ತಿದೆ ಎನ್ನುವುದಕ್ಕೆ ಇವೆಲ್ಲಾ ಉದಾಹರಣೆಗಳಿವೆ. ಇವತ್ತು ನಾವು ದಿನಬೆಳಗಾದರೆ ಎಷ್ಟು ಪ್ರತಿಭಾವಂತ ವಿದ್ಯಾರ್ಥಿಗಳು ಹೊರಗೆ ಹೋಗುವಂಥಾದ್ದನ್ನು ಕೇಳಿಲ್ಲ. ನನ್ನ ಜೊತೆಯಲ್ಲಿ ಓದಿದಂಥವರು ನಾನು ವಿದೇಶಕ್ಕೆ ಹೊರಟಿದ್ದೇನೆ ಎಂದು ಹೇಳುತ್ತಾರೆ. ಏಕೆ ಎಂದು ಕೇಳಿದರೆ ಇಲ್ಲಿಯ ದೇಶದ ಸ್ಥಿತಿ ಹಾಗಿದೆ ಎಂದು ಹೇಳುತ್ತಾರೆ. ಇಲ್ಲಿ ಸುಣ್ಣ ಹೊಡೆದರೂ ಇನ್‌ಕಂಟ್ಯಾಕ್ಸ್‌ನವರು ಬರುತ್ತಾರೆ. ಇಲ್ಲಿ ಅನೇಕ ರೀತಿಯ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇದರಿಂದಾಗಿ ಪ್ರತಿಭಾ ಪಲಾಯನ ಆಗುತ್ತಿರುವುದನ್ನು ಸಹ ನಾವು ನೋಡುತ್ತಿದ್ದೇವೆ. ಅಂದರೆ ಒಟ್ಟಾರೆ ಇಲ್ಲಿ ಆಡಳಿತ ವ್ಯವಸ್ಥೆ ಈ ಶಿಕ್ಷಣದ ಮೂಲಕ ಇಡೀ ಭವಿಷ್ಯದ ಸಮಾಜವನ್ನು ಹೇಗೆ ರೂಪಿಸಬೇಕೋ ಅದರ ಹೊರತಾಗಿ ಈ ಶಿಕ್ಷಣದಲ್ಲೂ ನಾವು ರಾಜಕಾರಣವನ್ನು ಮಾಡುವುದನ್ನು ಕಾಣುತ್ತಿದ್ದೇವೆ. ಇನ್ನು ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ, ಹಾಲನ್ನು ಕೊಡುವುದು, ಬಾಳೆಹಣ್ಣು ಕೊಡುವುದು, ಕೋಳಿಮೊಟ್ಟೆ ಕೊಡುವುದು, 2-3 ವರ್ಷಗಳ ಹಿಂದೆ ನಾನು ಕೆಲಸ ಮಾಡುವಂಥ ಸಂದರ್ಭದಲ್ಲಿ ನನ್ನ ಮನಸ್ಸಿಗೆ ಬಹಳ ನೋವು ಆಯಿತು. ಅದೇನೆಂದರೆ 1 ರಿಂದ 4 ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಕೇವಲ ಕೆಲವು ವಿದ್ಯಾರ್ಥಿಗಳಿಗೆ ಮಾತ್ರ ಬಾಳೆಹಣ್ಣು ಕೊಡಬಹುದೆಂದು ಒಂದು ಸರ್ಕಾರದ ಕಾಯಿದೆ ಬಂತು. ಪಾಪ ಒಂದು ವರ್ಷದಿಂದ 4 ವರ್ಷದ ವರೆಗೆ ಓದುತ್ತಿರುವಂಥ ಕೆಲವರಷ್ಟೇ ಬಾಳೆಹಣ್ಣನ್ನು ತಿನ್ನುವಂಥ ದೃಶ್ಯವನ್ನು ನೋಡಿದರೆ ಆ ವಿದ್ಯಾರ್ಥಿಗಳ ಮನಸ್ಸಿಗೆ ಎಷ್ಟು ನೋವು ಆಗಬಹುದು. ಸಮಾಜದಲ್ಲಿ ನಾವು ಒಡೆದು ಆಳುವಂಥದ್ದನ್ನು ಸರ್ಕಾರದಿಂದ ಆಫಿಷಿಯಲ್ ಆಗಿ ಮಾಡುತ್ತಿದ್ದೇವೆ. ಆ ಬಾಳೆಹಣ್ಣು ಅದಕ್ಕೆ ಜಾತಿ ಇದೆಯೇ? ಅದಕ್ಕೆ ಮೇಲು ಕೀಳು ಎನ್ನುವಂಥದ್ದು ಇದೆಯೇ? ಆ ಚಿಕ್ಕ ಮಕ್ಕಳಲ್ಲಿ ನಾವು ಅವರನ್ನು ಮೇಲು ಕೀಳು ಎನ್ನುವಂಥ ವಿಷ ಬೀಜವನ್ನು ಬಿತ್ತುವಂಥ

ಕೃತ್ಯವನ್ನು ಸರ್ಕಾರದಿಂದ ನೇರವಾಗಿ ಕಾನೂನಿನ ಮೂಲಕ ಮಾಡುತ್ತಿದ್ದೇವೆ. ಇದಕ್ಕಿಂತ ಈ ಸಮಾಜದಲ್ಲಿ ಒಡೆದು ಆಳುವಂಥ ನೀತಿ ಅಥವಾ ಶೋಷಿತ ವರ್ಗವನ್ನು ಇನ್ನಷ್ಟು ಶೋಷಣೆ ಒಳಪಡುವಂಥ ರೀತಿಯೊಳಗೆ ಮಾಡುವಂಥದಕ್ಕೆ ಇನ್ನು ಏನು ಉದಾಹರಣೆಗಳು ಬೇಕು? ಹಾಲು ಕುಡಿಯುವಾಗ, ಇನ್ನೊಬ್ಬ ಉಪ್ಪಿಟ್ಟು ತಿನ್ನುವಾಗ ಮತ್ತೊಬ್ಬನು ಅದನ್ನು ನೋಡಿಕೊಂಡು ಸುಮ್ಮನೆ ಇರಬೇಕಾದಂಥ ದೃಶ್ಯ ಇದೆಯೆಂದರೆ ಈ ಸಮಾಜದಲ್ಲಿ ಶಿಕ್ಷಣದ ಮೂಲಕ ಹೇಗೆ ಒಡೆದು ಆಳುತ್ತಿರುವ ನೀತಿಯನ್ನು ಅನುಸರಿಸಿಕೊಂಡು ಹೋಗುತ್ತಿದ್ದೇವೆ ಎನ್ನುವುದಕ್ಕೆ ಉದಾಹರಣೆಯಾಗಿದೆ.

ಅಧ್ಯಕ್ಷರು :– ಅನೇಕ ಕಡೆ ಈ ರಾಜಕೀಯ ಮಾಡುವವರು ಏನು ಮಾಡುತ್ತಾರೆಂದರೆ ಈ ರೀತಿ ವ್ಯತ್ಯಾಸ ಮಕ್ಕಳಲ್ಲಿ ಬರುತ್ತದೆಂದು ಹೇಳಿ ಅವರು ಹಂಚಿಕೆಯನ್ನೇ ಮಾಡಿರುವುದಿಲ್ಲ. ಅವರೇ ಇಟ್ಟುಕೊಂಡು ಬಿಟ್ಟಿರುತ್ತಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :– ಮಾನ್ಯ ಅಧ್ಯಕ್ಷರೆ, ಆ ಸಂಗತಿಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಅದು ಎಲ್ಲರ ಅನುಭವದಲ್ಲಿಯೂ ಇದೆ. ಆದರೆ ಕಾನೂನು ಪ್ರಕಾರವಾಗಿ ನಾವು ವ್ಯವಸ್ಥಿತವಾಗಿ ಈ ಸಮಾಜವನ್ನು ಒಡೆದು ಆಳುತ್ತೇವೆ. ನನ್ನ ಮಗನಿಗೆ ಸಮವಸ್ತ್ರ ಕೊಡಿ, ಬಾಳೆಹಣ್ಣು ಕೊಡಿ, ಒಂದು ರೂಪಾಯಿ ಕೊಡಿ, ಮಧ್ಯಾಹ್ನದ ಊಟವನ್ನು ಕೊಡಿ ಎಂದು ಯಾವ ತಂದೆತಾಯಿಗಳು ಕೇಳಿದ್ದಾರೆ? ನಾವು ಇದನ್ನೆಲ್ಲಾ ಕೊಡುವುದರ ಮೂಲಕ ಆ ತಂದೆತಾಯಿಗಳಿಗೆ ಅಗೌರವ ತೋರಿಸುತ್ತಿದ್ದೇವೆ, ಆ ಮೂಲಕ ಸಮಾಜವನ್ನು ತುಳಿಯುತ್ತಿದ್ದೇವೆ. ಈ ರೀತಿ ಮತ ಗಳಿಸುವ ರಾಜಕಾರಣದ ಘೋಷಣೆಯನ್ನು ಸರ್ಕಾರ ಮಾಡುವುದು ಬಿಟ್ಟು ಶಾಲೆಗಳಿಗೆ ಅಥವಾ ಸಿಲಬಸ್‌ಗೆ ಇರಬೇಕಾದಂಥ ಸಂಗತಿಗಳ ಬಗ್ಗೆ ಅಥವಾ ಈ ಒಂದು ಅಧ್ಯಾಪಕರ ಕೊರತೆಯನ್ನು ನೀಗಿಸುವುದರ ಬಗ್ಗೆ ಕಟ್ಟಡಗಳನ್ನು ಶಾಲೆಗಳಿಗೋಸ್ಕರ ಕಟ್ಟುವುದರ ಬಗ್ಗೆ ನಾವು ಚಿಂತನೆ ಮಾಡಬೇಕು. ಸರ್ಕಾರ ಚಿಂತನೆ ಮಾಡಬೇಕು. ಅದು ಬಿಟ್ಟು ಕೇವಲ ಬಾಳೆಹಣ್ಣು ಕೊಟ್ಟೆವ, ಅವನಿಗೆ ಅರ್ಧ ಇವನಿಗೆ ಅರ್ಧ ಕೊಟ್ಟೆವು ಇಂತಹ ಹಾಸ್ಯಾಸ್ಪದ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಬಾರದು. ಇದನ್ನು ನಾವು ಹೇಳಿದರೆ ಸರ್ಕಾರ ಗಂಭೀರವಾಗಿ ಸ್ವೀಕಾರ ಮಾಡೂತ್ತಾರೆಯೋ ಅಥವಾ ಇಲ್ಲವೋ ಎನ್ನುವಂಥಾದ್ದು ನನಗೆ ಮನವರಿಕೆಯಾಗುತ್ತಿಲ್ಲ. ಅದರ ಬಗ್ಗೆ ನನಗೆ ವಿಶ್ವಾಸವಿಲ್ಲ. ಏಕೆಂದರೆ ಎದುರುಗಡೆ ಸಾಲಿನಲ್ಲಿ ಸಿಂಧ್ಯಾರವರು ಒಬ್ಬರೇ ಇರುವವರು. ಅವರು ಸಹ ಯಾರೊ ಜೊತೆ ಮಾತುಕತೆ ಮಾಡುತ್ತಿದ್ದಾರೆ. ಇರುವ ಒಬ್ಬರೇ ಮಂತ್ರಿಗಳು ಇದನ್ನು ಗಮನಿಸದೇ ಇರುವಾಗ ಇದನ್ನು ಹೇಗೆ ಗಂಭೀರವಾಗಿ ತೆಗೆದುಕೊಳ್ಳುತ್ತಾರೆ? ಅಂದರೆ ಸರ್ಕಾರ ಶಿಕ್ಷಣ ವ್ಯವಸ್ಥೆಯ ಒಂದೇ ಒಂದು ಇಲಾಖೆಯ ಮೂಲಕವೇ ಇಡೀ ಸಮಾಜವನ್ನು ಒಡೆದು ಆಳುತ್ತದೆ. ಜೊತೆಗೆ ಸ್ವಾಭಿಮಾನಿ ಶೂನ್ಯವಾದಂಥ ಸಮಾಜವನ್ನು ನಾವು ಸೃಷ್ಟಿಮಾಡುತ್ತಿದೇವೆ. ವಿದ್ಯಾರ್ಥಿಗಳಲ್ಲಿ ಇರುವಂಥ ಪ್ರತಿಭೆಗೆ ತಕ್ಕಂತೆ ಒಂದು ಶಿಕ್ಷಣವನ್ನು ಕೊಟ್ಟು ಅವರ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾದಂಥ ರೀತಿಯೊಳಗೆ ನಮ್ಮ ಈ ಒಂದು ವ್ಯವಸ್ಥೆಯನ್ನು ರೂಪಿಸುವುದಕ್ಕೆ ಆಗುತ್ತಿಲ್ಲ ಎನ್ನುವಂಥದ್ದು ನಮ್ಮೆಲ್ಲರಿಗೂ ಸಹ ಸ್ಪಷ್ಟವಾಗಿ ತಿಳಿದಿರುವಂಥ

ಸಂಗತಿ. ಸರ್ಕಾರದ ಕಡೆಯಿಂದ ಕೊಟ್ಟ ವರದಿಯನ್ನು ಕೂಲಂಕಷವಾಗಿ ಓದಿದ್ದೇನೆ. ಇದರಲ್ಲಿ ಬರುವ ಇಲಾಖೆಗಳೆಷ್ಟು? ಇದಕ್ಕೆಲ್ಲಾ ಕೊಟ್ಟಿರುವಂಥ ಹಣಕಾಸಿನ ಬೇಡಿಕೆಗಳೆಷ್ಟು? ಆ ಬೇಡಿಕೆಗಳಲ್ಲಿ ಹಣಕಾಸಿನ ಖರ್ಚು ಹೇಗೆ ಆಗಿದೆ? ಯಾವ ಯಾವ ರೀತಿಯಲ್ಲಿದೆ? ಎಲ್ಲವನ್ನೂ ನೋಡುತ್ತಿದ್ದೇನೆ. ಆದರೆ ಮೂಲಭೂತವಾಗಿ ಎತ್ತಿರತಕ್ಕಂಥ ಸಂಗತಿಗಳ ಬಗ್ಗೆ ನೈತಿಕವಾಗಿ ಶಕ್ತಿಯನ್ನು ಗಳಿಸುವಂಥ ಶಿಕ್ಷಣವನ್ನು ಕೊಡುವುದರ ಬಗ್ಗೆ ಸರ್ಕಾರ ಮುಂದಾಗಬೇಕು. ಅಲ್ಲಿಯ ತನಕ ಎಷ್ಟೇ ಹಣಕಾಸನ್ನು ಖರ್ಚು ಮಾಡಿದ್ದಾವೆಂದು ಹೇಳಿದರೂ ಯಾವ ವ್ಯಕ್ತಿಗೂ ಸಹ ಉಪಯೋಗವಿಲ್ಲದೆ ಇರುವಂಥ ರೀತಿಯಲ್ಲಿ ಆಗುತ್ತದೆ. ಇನ್ನು ಹೆಚ್ಚಿಗೆ ಮಾತನಾಡದೆ, ಕೊನೆಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಶಿಕ್ಷಣ ಇಲಾಖೆಯಿಂದ ಇಡೀ ಸಮಾಜವನ್ನು ನಾವು ಇವತ್ತು ಒಂದು ಬೋನ್ ಕ್ಯಾನ್ಸರ್ ರೀತಿಯಾಗಿ ಮಾಡುತ್ತಿದ್ದೇವೆಂದು ಎನಿಸುತ್ತದೆ. ನನಗೆ ಅನೇಕ ಡಾಕ್ಟರ್ ಮಿತ್ರರು, ಹಿರಿಯರು, ಮಾರ್ಗದರ್ಶಕರು ಇದ್ದಾರೆ. ಅವರು ಈ ಮಾತನ್ನು ಹೇಳುತ್ತಿರುತ್ತಾರೆ. ಬೋನ್ ಕ್ಯಾನ್ಸರ್ ಎಂದರೆ ಎಲುಬನ್ನು ತಿನ್ನುತ್ತಾ ಹೋಗುತ್ತದೆ. ಎಲುಬು ಪುಡಿಪುಡಿಯಾಗಿ ಹೋಗುತ್ತದೆ. ಚರ್ಮ, ಮಾಂಸ ಮಾತ್ರ ಕೆಲವು ದಿನಗಳು ಕಣ್ಣಿಗೆ ಕಾಣುತ್ತವೆ. ಆದರೆ ಇವತ್ತು ಸಮಾಜವನ್ನು ನಾವು ಹೇಗೆ ರೂಪಿಸುತ್ತಿದ್ದೇವೆ ಎಂದರೆ ನಮ್ಮ ಸಮಾಜದಲ್ಲಿ ಈ ಶಿಕ್ಷಣ ಇಲಾಖೆಯ ಮೂಲಕ ನಮ್ಮ ಬೆನ್ನೆಲುಬನ್ನು ನಾವು ಇವತ್ತು ನಾಶ ಮಾಡುತ್ತಿದೇವೆ. ಈ ಶಿಕ್ಷಣ ವ್ಯವಸ್ಥೆಯ ಮೂಲಕ ಸಮಾಜವನ್ನು ಹಾಳುಮಾಡುತ್ತಿದ್ದೇವೆ. ಹಾಗಾಗಿ ಆ ದೃಷ್ಟಿ ನಮಗೆ ಇದ್ದರೆ ಮುಂದಿನ ಭವಿಷ್ಯ ಏನಾಗುತ್ತದೆ ಎನ್ನುವುದರ ಕಲ್ಪನೆಯನ್ನು ನಾವು ಈಗಲೇ ಮಾಡಲಿಕ್ಕೆ ಸಾಧ್ಯವಿದೆ. ಹಾಗಾಗಿ ಇವತ್ತು ಒಳ್ಳೆಯ ಶಿಕ್ಷಣವನ್ನು ಕೊಡುವುದಕ್ಕೆ ತಡವಾಗಿಲ್ಲ. ಸರ್ಕಾರಕ್ಕೆ ಜನಪರವಾದಂಥ ಸಮಾಜದ ಕಾಳಜಿ, ಭವಿಷ್ಯದ ಕಾಳಜಿಯಿದ್ದರೆ, ಈ ದೇಶದಲ್ಲಿ ಒಂದು ಉತ್ತಮವಾದಂಥ ದೃಢವಾದ ಸಮಾಜವನ್ನು ನಿರ್ಮಾಣ ಮಾಡಬೇಕು ಎನ್ನುವಂಥ ಕಿಂಚಿತ್ತಾದರೂ ಅದರ ಭಾವನೆಗಳು ಇದ್ದರೆ, ಅವರು ಈ ರಾಷ್ಟ್ರೀಯತೆಯು ಉಳಿಯುವಂತೆ ರಾಷ್ಟ್ರೀಯತೆಯು ವ್ಯಕ್ತಿ ವ್ಯಕ್ತಿಯ ರಕ್ತದಲ್ಲಿ ಕರಗತವಾಗುವಂಥ ಶಿಕ್ಷಣದ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಮುಂದಾಗಲಿ. ಈ ಸಮಾಜ ಮುಂದೆ ಒಂದು ಶಕ್ತಿಶಾಲಿ ಸಮಾಜವಾಗುವುದಕ್ಕೆ ಬೇಕಾಗಿರುವಂಥ ಪ್ರಯತ್ನವನ್ನು ನಮ್ಮ ಸರ್ಕಾರದಿಂದ ನಾವು ಮಾಡೋಣ. ಆ ದಿಕ್ಕಿನಲ್ಲಿ ಈ ಎಲ್ಲಾ ಸಂಗತಿಗಳ ಬಗ್ಗೆ ಚಿಂತನೆಯಾಗಲಿ ಎಂದು ಸರ್ಕಾರಕ್ಕೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ನಿಜವಾಗಿ ನೀವು, ವಿರೋಧ ಪಕ್ಷದ ಸದಸ್ಯರು ಮಾತನಾಡುವವರು ಎದ್ದು ಪ್ರಾರಂಭ ಮಾಡಿದ ತಕ್ಷಣವೇ ಈ ಬೇಡಿಕೆಗಳನ್ನು ಏನು ಮಂಡಿಸುತ್ತಾ ಇದ್ದಾರೆ ಇದನ್ನು ವಿರೋಧ ಮಾಡಲಿಕ್ಕೆ ನಾನು ಎದ್ದು ನಿಂತಿದ್ದೇನೆ ಎಂದು ಹೇಳಬೇಕು. ಆಡಳಿತದಲ್ಲಿ ಇರುವ ಎಲ್ಲಾ ನ್ಯೂನತೆಗಳನ್ನು ಹೇಳಿ ಆ ನಂತರ, ನಾನು ಈ ಬೇಡಿಕೆಗಳನ್ನು ವಿರೋಧಿಸುತ್ತೇನೆ ಎಂದು ಭಾಷಣ ಮಾಡಬೇಕು. ನೀವು ಹೊಸ ಸದಸ್ಯರು ಅದಕ್ಕೆ ನೀವು ಕಲಿತುಕೊಳ್ಳಿ ಎಂದು ಹೇಳುತ್ತಿದ್ದೇನೆ. Now, I request the Hon'ble Member Mr. N. Rajanna to enlighten the House by his Speech.

+ **SRI N. RAJANNA (BHARATHINAGAR) :-** Mr. Speaker, Sir, First of all I am thankful to the Chair for having given me this opportunity, I was in the Power meeting and then I got a message to come and sit in the Assembly to address on the Demands for Grants pertaining to the various departments. I am thankful to the Hon'ble Speaker who has got so much of affection towards me. Whatever I speak here is in the interest of Bangalore City and as a citizen I am going to speak. Sometimes, it may appear that I am speaking against my Government. I am a noble servant of my Party, but some of the problems in the City have reached a critical stage that I cannot hide them out and go out as M.L.A., Hence, I have to openly express few of the problems faced by the citizens of Bangalore.

Sir, the Housing problem is the major problem within the city. To say in Hindi "Khana hai, Kapada Hai, Makan nai". **ಊಟ ಇದೆ, ಬಟ್ಟೆ ಇದೆ ಆದರೆ ಮನೆ ಇಲ್ಲ.** The Middle class, poor class, lower poor class are facing many many problems. Our Government said that they are going to construct in every constituency 500 houses. They started in some of the constituencies, but the work has not begun properly. But in my constituency, we have recently alloted 300 houses to the Scheduled Caste/Scheduled Tribe slum dwellers, that is, in Murphy Town Constituency and 600 houses are still to be completed. These houses were started in the year 1992-93 itself. Mr. Speaker Sir, I have brought to the notice of the Housing Board that we want to provide housing to the poor people and downtrodden sections in Bangalore City. But the Department is not fast and it is very very slow. They have started the work in 1992-93, but still they have not completed nearly 1000 houses in Bangalore City.

4.40 ಪಿ. ಎಂ.

The Karnataka Housing Board Housing Scheme for slum dwellers in Bangalore City under Ashraya is there for economically weaker section categories with unit cost of Rs. 45,000/- for each house, inclusive of State subsidy of Rs.5000/- per unit and loan assistance of Rs.3,800/- per unit from HUDCO and beneficiary contribution of

Rs. 2,000/- per unit. The KHB has taken up only 17 schemes covering 3,672 dwelling units. The same figure is continued for the last 5 years. I do not know whether they have completed any project except in my Constituency. Out of 3,672, only 666 houses have been completed since inception of which 341 houses were completed during 1995-96. Due to this housing problem, more complaints have reached Police of neighbour disputes like encroachments of houses, encroachment of slums etc., ಉದಾಹರಣೆಗೆ ಹೇಳಬೇಕಾದರೆ, ನನ್ನ ಕ್ಷೇತ್ರದಲ್ಲಿ 26 ಕೊಳಚೆ ಪ್ರದೇಶಗಳಿವೆ. ಒಂದು ಪ್ಯಾಕೆಟ್‌ನಲ್ಲಿ 500, 600, 700, 1000 ಗುಡಿಸಲುಗಳು ಇರುತ್ತವೆ. ಇವತ್ತು 1000 ಗುಡಿಸಲುಗಳು ಇರುತ್ತವೆ ಎಂದರೆ ಮುಂದಿನ ವರ್ಷ 1200 ಗುಡಿಸಲುಗಳಾಗುತ್ತವೆ. ಇವತ್ತು ಯಾವ ಸ್ಥಿತಿಗೆ ಬಂದಿದೆ ಎಂದರೆ ಕೆಲವು ಪ್ಯಾಕೆಟ್‌ನಲ್ಲಿ in old contituencies like Shantinagar, Bharathinagar, Shivajinagar, Jayamahal ಎಲ್ಲೆಲ್ಲಿ ಇದೆ ಇಲ್ಲಿ ಎಲ್ಲಾ ಗ್ರಾಮ ಠಾಣೆಗಳು ಬಂದು ಗುಡಿಸಲುಗಳಾಗಿ ಬಿಟ್ಟಿದೆ. ಒಂದು ಮನೆ ಇರುವಂತಹ ಜಾಗದಲ್ಲಿ 20 ಮನೆಗಳು ಬಂದಿವೆ. ಒಂದು ಕುಟುಂಬ ಇರತಕ್ಕಂತಹ ದೊಡ್ಡ ಬಂಗಲೆಗಳಲ್ಲಿ ಇವತ್ತು 100 ಮನೆಗಳು ಬಂದಿವೆ. ಆದರೆ ಎವಸ್ಟೆಷಲಿ ಕೆಲವು ಪ್ಯಾಕೇಟ್‌ನಲ್ಲಿ ಇವರ ತೊಂದರೆಗಳು ಜಾಸ್ತಿಯಾಗಿ ಪೋಲೀಸ್ ಕಂಪ್ಲೇಟ್‌ಗಳು ಜಾಸ್ತಿಯಾಗುತ್ತಿವೆ. ಪೋಲೀಸ್ ಡಿಪಾರ್ಟಮೆಂಟ್ ಎನ್‌ಕ್ರೋಚ್‌ಮೆಂಟ್ ಪ್ರಾಬ್ಲಮ್‌ನಿಂದ ನಂಬರ್ ಆಫ್ ಕಂಪ್ಲೇಂಟ್ಸ್ ಜಾಸ್ತಿಯಾಗಿವೆ. ಒಂದು ಮನೆಯಲ್ಲಿ ವಯಸ್ಸಾದ ಮುದುಕರು ಇದ್ದರೆ ತಂದೆ ತಾಯಿಗಳನ್ನು ಮನೆಯಿಂದ ಹೊರಗಡೆ ಹಾಕಿ ಮನೆಯನ್ನು ವಶಪಡಿಸಿಕೊಳ್ಳುತ್ತಾರೆ. ಇನ್ನೊಂದು ಕಡೆ ಪಕ್ಕದಲ್ಲಿರುವವನು ಸ್ವಲ್ಪ ಗಟ್ಟಿಯಾಗಿದ್ದರೆ ಈ ವಯಸ್ಸಾಗಿರುವಂತವರನ್ನು ಮನೆಯಿಂದ ಆವರುಗಳನ್ನು ಹೊರಗಡೆ ಹಾಕಿ ಮನೆಯನ್ನು ವಶಪಡಿಸಿಕೊಳ್ಳುತ್ತಾರೆ. ಇನ್ನು ಮಧ್ಯಮ ವರ್ಗದವರು ಪೋಲೀಸ್‌ನವರ ಸಹಕಾರದಿಂದ ಮನೆಯವರನ್ನು ಹೊರಗಡೆ ಹಾಕಿ ಮನೆಯನ್ನು ವಶಪಡಿಸಿಕೊಳ್ಳುತ್ತಾರೆ. ಇವತ್ತು ಮನೆಗಾಗಿ ಬೆಂಗಳೂರು ಸಿಟಿಯಲ್ಲಿ ಬಹಳ ಮೇಜರ್ ತೊಂದರೆಯಾಗಿದೆ. ವಸತಿ ಸಮಸ್ಯೆಯು ತುಂಬಾ ಇದೆ ಇವತ್ತು ಒಂದು ಕುಟುಂಬದವರು ಬಂದು ನಂತರ 10 ಕುಟುಂಬಗಳಾಗುತ್ತವೆ. ಅವರು ಗಳಿಗೆ ಮನೆ ಇರುವುದಿಲ್ಲ. ಆವರುಗಳು ಎಲ್ಲಿಗೆ ಹೋಗಬೇಕು? ಇರುವಷ್ಟು ಜಾಗದಲ್ಲಿಯೇ ವಾಸ ಮಾಡಬೇಕು. ಇರುವಷ್ಟು ಜಾಗದಲ್ಲಿಯೇ ಕಾಂಪೌಂಡನ್ನು ಸೇರಿಸಿ ದೊಡ್ಡದಾಗಿ ಮಾಡಿಕೊಳ್ಳುತ್ತಾರೆ. ಹಾಗೆಯೇ ಇರುವ ಜಾಗವನ್ನೆಲ್ಲಾ ಸೇರಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಕುಟುಂಬಗಳೂ ಸಹ ಜಾಸ್ತಿಯಾಗುತ್ತಿವೆ. ಈ ಒಂದು ದುರ್ವ್ಯವಸ್ಥೆಯಿಂದ more and more complaints have reached the police. This is a major problem. How to solve this? ಇದಕ್ಕೆ ಒಂದು ಸ್ಕೀಂನ್ನು ಹಾಕಿಕೊಳ್ಳಬೇಕು. ನಮ್ಮ ಸರ್ಕಾರದವರು ಹಾಕಿಕೊಂಡಿರುವಂತಹ ಸ್ಕೀಂ ಈ 500 ಮನೆಗಳನ್ನು ಕ್ಷೇತ್ರದ ಒಳಭಾಗದಲ್ಲಿಯೇ ಕಟ್ಟಬಾರದು. ಸಿಟಿಯಿಂದ ಹೊರಗಡೆ ಮನೆಗಳನ್ನು ಕಟ್ಟಿ ಇವರುಗಳನ್ನು ಶಿಫ್ಟ್ ಮಾಡಿದರೆ ಮಾತ್ರ ಅವರಿಗೆ ಅನುಕೂಲವಾಗುತ್ತದೆ. ಕ್ಷೇತ್ರದ

ಒಳಭಾಗದಲ್ಲಿಯೇ ಮನೆಗಳನ್ನು ಕಟ್ಟುವುದು ಜನಸಂಖ್ಯೆಯ ಒತ್ತಡ - density of population is more. ಹಿಂದೆ ಇರತಕ್ಕಂತಹ ನೇರವಾದಂತಹ ರಸ್ತೆಗಳಲ್ಲಿ ಇವತ್ತು ಓಡಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ಕ್ಷೇತ್ರದ ಒಳಭಾಗದಲ್ಲಿ ಮನೆಗಳನ್ನು ಕಟ್ಟ ಬಾರದು, ಊರಿನ ಹೊರಭಾಗದಲ್ಲಿ ಮನೆಗಳನ್ನು ಕಟ್ಟಬೇಕು. ಮತ್ತು ಈ ಕೊಳಚಿ ನಿವಾಸಿಗಳನ್ನು ಅಲ್ಲಿಗೆ ಶಿಫ್ಟ್ ಮಾಡಬೇಕು.

SRI M. MALLIKARJUNA KHARGE :- You have to fire your Housing Minister. ಇದರ ಬಗ್ಗೆ ಹೌಸಿಂಗ್ ಮಿನಿಸ್ಟರ್‌ರವರಿಗೆ ಹೇಳಬೇಕು. ಅವರು ಈ ಸದನದಲ್ಲಿ ಕಾಣುತ್ತಿಲ್ಲವಲ್ಲಾ.

ಶ್ರೀ ಎನ್. ರಾಜಣ್ಣ :- ಅವರು ಸದನದಲ್ಲಿ ಇಲ್ಲವಲ್ಲಾ ಸಾರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಿಮ್ಮ ಮಾತನ್ನು ಕೇಳುವುದಕ್ಕೆ ಇಲ್ಲವಲ್ಲ!

SRI H. SHIVAPPA :- Communication is there.

ಶ್ರೀ ಎನ್. ರಾಜಣ್ಣ :- ಬೇರೆಯ ಕೆಲಸದ ಮೇಲೆ ಎಲ್ಲಿಗೋ ಹೋಗಿರ ಬಹುದು ಅಥವಾ ಅವರು ವಿಧಾನ ಪರಿಷತ್ತಿನಲ್ಲಿರಬಹುದು.

MR. SPEAKER :- You are not telling anything about things during British regime, how things were there

SRI N. RAJANNA :- I will go step by step. ಹೌಸಿಂಗ್ ಸ್ಕೀಂ ಮೇಲೆ this is the major problem we have to solve ಏಕೆಂದರೆ ಈ ಹಳೆಯ ನಗರವೆಲ್ಲಾ ಬ್ರಿಟೀಷ್‌ನವರ ಕಾಲದಲ್ಲಿ ಆಗಿರುವಂಥದ್ದು ಹಳೆಯ ಸಿಟಿಗಳಾದ ಭಾರತೀನಗರ, ಶಾಂತಿನಗರ, ಶಿವಾಜಿನಗರ, ಚಾಮರಾಜಪೇಟೆ, ಬಸವನಗುಡಿ ಇಲ್ಲಿ ಎಲ್ಲಾ ಕೆಲವು ಸಿವಿಲ್ ಏರಿಯಾ ಮತ್ತು ಸೆಂಟ್ರಲ್ ಏರಿಯಾ ಎಂದು ಎರಡು ರೀತಿಯಲ್ಲಿತ್ತು. ಆದರೆ ಇವತ್ತು ಕಂಟೋನ್‌ಮೆಂಟ್ ಏರಿಯಾದಲ್ಲಿ ಜನಸಂಖ್ಯೆ ಜಾಸ್ತಿಯಾಗಿ ಇದಕ್ಕೆಲ್ಲಾ ಮುಖ್ಯವಾದಂತಹ ಕಾರಣ ಎಂದರೆ ಜನಸಂಖ್ಯೆಯ ಹೆಚ್ಚಳ. ಇದೇ ಇವತ್ತು ಈ ಸಿಟಿಗೆ ಮುಖ್ಯವಾದಂತಹ ತೊಂದರೆಯಾಗಿದೆ. ಇವತ್ತು ತಾವುಗಳೆಲ್ಲರೂ ಬೇರೆ ಬೇರೆ ಜಿಲ್ಲೆಗಳಿಂದ ಬಂದು ಎಕ್ಸ್‌ಟೆನ್‌ಷನ್‌ನಲ್ಲಿ ಬಂದು ಸೇರಿಕೊಂಡಿದ್ದೀರಿ. ತಾವುಗಳೆಲ್ಲರೂ ಏನು ತಿಳಿದುಕೊಂಡಿದ್ದೀರಿ ಎಂದರೆ ಈ ವಿಧಾನ ಸೌಧದ ಸುತ್ತ ಮುತ್ತ ಇರತಕ್ಕಂತಹ ಗ್ರೀನ್ ಬೆಲ್ಟ್ ಇದ್ದ ಹಾಗೆ ಈ ನಗರವೂ ಸಹ ಇರುತ್ತದೆ. ವಿಧಾನಸೌಧವನ್ನು ಬಿಟ್ಟು 11/2 ಅಥವಾ 2 ಕಿಲೋಮೀಟರ್ ದೂರ ಹೋದರೆ ಇದೆಲ್ಲಾ ಗ್ರೀನ್ ಬೆಲ್ಟ್ ಆಗಿರುವುದಿಲ್ಲ. This is not garden City. Except a few pockets, toilet ಸಿಟಿಯಾಗಿ ಬಿಟ್ಟಿದೆ. ನಾನು ಈ ಮಾತನ್ನು ಹೇಳಕೂಡದು. ಆದರೂ ಸಹ ಹೇಳುತ್ತಿದ್ದೇನೆ. ಒಂದೂವರೆ ಕಿಲೋಮೀಟರ್ ಬಿಟ್ಟು ಹೊರಗಡೆ ಹೋದರೆ ಅದರಲ್ಲಿ

ಎಕ್ಸ್‌ಟೆನ್‌ಷನ್ ಬಿಟ್ಟು ಬಿಡಿ. ಮಧ್ಯದಲ್ಲಿ it has become Toilet City ಆಗಿದೆ. ಇದೆಲ್ಲವನ್ನೂ ಉಳಿಸಬೇಕಾದರೆ ನಿಮ್ಮ ಮತ್ತು ನಮ್ಮ ಎಲ್ಲರ ತಾಕತ್ತಿನಿಂದ ಮಾತ್ರ ಬೆಂಗಳೂರು ಸಿಟಿಯನ್ನು ಉಳಿಸಬಹುದು. ಇಲ್ಲ ಎಂದರೆ ಬಹಳ ಕ್ರಿಟಿಕಲ್ ಸ್ಟೇಜ್‌ಗೆ ಹೋಗಿದೆ. Coming to the Urban Development and BWSSB is one of the Departments which is giving atleast water. ಅದಷ್ಟು ಒಂದು ರೀತಿಯಲ್ಲಿ ಕೆಲಸವನ್ನು ಮಾಡುತ್ತಿದೆ. ಅವರು ನೀರನ್ನು ಕೊಟ್ಟು ಜನರಿಗೆ ಅನುಕೂಲವನ್ನು ಮಾಡುತ್ತಿದ್ದಾರೆ. ಆದರೆ ಪರಿಸ್ಥಿತಿ ಈಗ ಏನಾಗಿದೆ ಎಂದರೆ ಬ್ರಿಟಿಷರ ಕಾಲದಲ್ಲಿ ಮಾಡಿದಂತಹ ಒಳಚರಂಡಿಯ ಲೈನ್‌ಗಳನ್ನೆಲ್ಲಾ ಬದಲಾವಣೆ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ರೇವಣ್ಣನವರು ಹೌಸಿಂಗ್ ಮಿನಿಸ್ಟರ್ ಆಗಿದ್ದಾರೆ. ಅವರು ಇದರ ಬಗ್ಗೆ ಏನು ಕಾರ್ಯಕ್ರಮಗಳನ್ನು ಮಾಡಬೇಕು ಎಂಬ ಬಗ್ಗೆ ಹೇಳಿ Why are you supporting this Government? You have said that you are supporting the Housing Demand.

SRI N. RAJANNA :- I will come to the point. In 1970, the population was 11 lakhs. Now it has crossed 50 lakhs. ಮಾನ್ಯ ಅಧ್ಯಕ್ಷರೇ ಇಷ್ಟೇಲ್ಲವನ್ನೂ ಏಕೆ ಹೇಳುತ್ತೇನೆಂದರೆ ತಾವುಗಳೆಲ್ಲರೂ ಒಂದೊಂದು ಜಿಲ್ಲೆಯಿಂದ ಬೆಂಗಳೂರಿಗೆ ಬಂದು ಇಲ್ಲಿ ನೆಲಸಿರುವವರೇ; ನಾನೊಬ್ಬ ಕೆಂಪೇಗೌಡರ ಕುಟುಂಬದಲ್ಲಿ ಬೆಂಗಳೂರಿನಲ್ಲಿ ಹುಟ್ಟಿ....

ಶ್ರೀ ಎಂ. ಪಿ. ಅಪಚ್ಚು ರಂಜನ್ :- ಮಾನ್ಯ ಅಧ್ಯಕ್ಷರೇ, ಅದಕ್ಕೇ ಹೇಳುವುದು ಬಿ.ಜೆ.ಪಿ. ಸರ್ಕಾರವು ಅಧಿಕಾರಕ್ಕೆ ಬರಬೇಕು ಕಾಮನ್ ಸಿವಿಲ್ ಕೋಡ್ ಬಂದರೆ ಜನಸಂಖ್ಯೆಯನ್ನು ನಿಯಂತ್ರಿಸಬಹುದು ಎಂದು.

ಶ್ರೀ ಸಿ. ಎಸ್. ಪುಟ್ಟೇಗೌಡ :- ಇದನ್ನು ಅಪಚ್ಚು ರಂಜನ್‌ರವರು ಹೇಳಬೇಕಾಗಿಲ್ಲ.

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೇ, 4-5 ಜನ ಎಂ.ಎಲ್.ಎ.ಗಳನ್ನು ಬಿಟ್ಟರೆ ಬೇರೆ ಎಲ್ಲಾ ಸದಸ್ಯರುಗಳು ಬೇರೆ ಬೇರೆ ಜಿಲ್ಲೆಯಿಂದ ಬಂದು ಇಲ್ಲಿ ನೆಲೆಸಿರುವವರೇ. 224 ಎಂ.ಎಲ್.ಎ.ನಲ್ಲಿ ನಾನೊಬ್ಬ ನಮ್ಮ ತಾತ, ನಮ್ಮ ಮುತ್ತಾತ, ಕೆಂಪೇಗೌಡ ಫ್ಯಾಮಿಲಿಯಲ್ಲಿ ಬಂದಂಥವನ್ನು ಬೆಂಗಳೂರಿನಲ್ಲಿ ಇವತ್ತು ವಾಸ ಮಾಡು ತ್ತಿದ್ದೇನೆ. We have seen British regime. There was discipline. I do not see now. There was efficiency. There was sincerity and hard work. ಈಗ ಇಲ್ಲ ಎಂದು ಹೇಳುವುದಿಲ್ಲ. ಈಗ ಡಿಸಿಪ್ಲೀನ್ ಕಡಿಮೆಯಾಗಿದೆ. ಯಾವಾಗ ಶಿಸ್ತು ಇರುವುದಿಲ್ಲವೋ ಆಗ ಎಲ್ಲಾ ಆಶಿಸ್ತೇ ಎಲ್ಲಿ ಶಿಸ್ತು ಇರುವುದಿಲ್ಲ ಸುಸ್ತು...

ಶ್ರೀ ಯು. ಆರ್. ಸಭಾಪತಿ :- ನಿಮ್ಮ ಸರ್ಕಾರದಲ್ಲಿ ಶಿಸ್ತು ಇಲ್ವಾ?

ಶ್ರೀ ಎನ್. ರಾಜಣ್ಣ :- ಈಗ ನಾವು ಮೈನ್‌ಟೈನ್ ಮಾಡುತ್ತಿದ್ದೇವೆ. We are maintaining. But I am a disciplined soldier of my party and to my people. I have seen Indain Army for 13 years. I have worked. I have seen what is discipline. ಈಗ ಬೆಂಗಳೂರಿನ ಜನಸಂಖ್ಯೆ 50 ಲಕ್ಷ ಇದೆ? ಈಗ ಬೆಂಗಳೂರು ನಗರಕ್ಕೆ ಕಾವೇರಿಯ ಮೊದಲನೇಯ, ಎರಡನೆಯ, ಮತ್ತು ಮೂರನೇ ಹಂತದ ನೀರು ಬಂದಿದೆ. 24 ಮಿಲಿಯನ್ ಗ್ಯಾಲನ್ ಫಸ್ಟ್ ಬೆಂಗಳೂರಿಗೆ ಬಂತು. ಆಮೇಲೆ ಎರಡನೇ ಮತ್ತು ಮೂರನೇ ಹಂತ ಸೇರಿ 240 ಮಿಲಿಯನ್ ಗ್ಯಾಲನ್ ವಾಟರ್ ಬೆಂಗಳೂರು ನಗರಕ್ಕೆ ಬರುತ್ತಿದೆ. ಆದರೆ ಒಳಚರಂಡಿ ವ್ಯವಸ್ಥೆಗೆ 1960ಕ್ಕಿಂತಲೂ ಮುಂಚಿ ಹಾಕಿದಂತಹ 9 ಇಂಚಿನ ಪೈಪ್ ಅನ್ನು ಇನ್ನೂ ಬದಲಾವಣೆ ಮಾಡಿಲ್ಲ. ಈ 50 ಲಕ್ಷ ಜನಸಂಖ್ಯೆ ಇರತಕ್ಕಂತಹ ಹಳೆಯ ನಗರದಲ್ಲಿ ಈ ಒಳಚರಂಡಿ ವ್ಯವಸ್ಥೆ ಇರತಕ್ಕಂಥದ್ದರಲ್ಲಿ ಎಲ್ಲಾ ಕೋಲ್ಯಾಪ್ಸ್ ಆಗಿಬಿಟ್ಟಿದೆ. ಕೆಲವು ಕಡೆ ಆ ಒಳಚರಂಡಿ ವ್ಯವಸ್ಥೆ ಎಲ್ಲಾ ಕೋಲ್ಯಾಪ್ಸ್ ಆಗಿದೆ. ಮ್ಯಾನ್‌ಹೋಲ್ ಮೇಲೆ ಕವರ್ಸ್ ಇಲ್ಲ. ಅಂಡರ್ ಗ್ರೌಂಡ್ಸ್‌ನಲ್ಲಿ ಹರಿಯುವುದೆಲ್ಲಾ ಅಪ್ಪರ್ ಗ್ರೌಂಡ್‌ನಲ್ಲಿ ಹರಿಯುತ್ತಿದೆ. ಅದರಲ್ಲಿಯೂ ಲೋ ಲೇವೆಲ್ ಏರಿಯಾದಲ್ಲಿ ಮನೆಗಳು ಜಾಸ್ತಿ ಯಾಗುತ್ತಿದೆ. ಬಿಲ್ಡರ್ಸ್ ಹಾವಳಿ ಹಳೆಯ ಬೆಂಗಳೂರು ನಗರದಲ್ಲಿ ಜಾಸ್ತಿಯಾಗಿರುವ ಕಾರಣ, ಮನೆಗಳು ಜಾಸ್ತಿಯಾಗುತ್ತಿದೆ. ಇದರಿಂದಾಗಿ ಅಂಡರ್‌ಗ್ರೌಂಡ್ ಡ್ರೈನೇಜ್ ವ್ಯವಸ್ಥೆ ಸಂಪೂರ್ಣವಾಗಿ ಡ್ಯಾಮೇಜ್ ಆಗಿ, ಹದಗೆಟ್ಟುಹೋಗಿ ಕೆಲವು ಕಡೆಗಳಲ್ಲಿ ರಸ್ತೆಗಳ ಮೇಲೆ ಹರಿಯುತ್ತದೆ, ಇನ್ನು ಕೆಲವು ಕಡೆ ಲೋ ಏರಿಯಾದಲ್ಲಿರುವ ಟಾಯ್ಲೆಟ್ ಬ್ಲಾಕ್‌ಆಗಿ, ಮಿಡಲ್ ಕ್ಲಾಸ್‌ನ ಬಡವನ ಮನೆಯ ಅಡಿಗೆ ಮನೆಗೆ ನುಗ್ಗಿ ದೇವರ ಮನೆಯಲ್ಲಿ ಪೂಜೆ ಮಾಡಿಕೊಂಡು ಫ್ರಂಟ್ ಗೇಟ್‌ನಲ್ಲಿ ಹೋಗುತ್ತಿದೆ.

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಜಣ್ಣನವರು ವಸತಿ ಇಲಾಖೆ ಬಗ್ಗೆ ಮಾತನಾಡುತ್ತಿದ್ದಾರೆ, ಇದಕ್ಕೆಸಂಬಂಧಪಟ್ಟ ಇಲಾಖಾ ಮಂತ್ರಿಯವರೂ ಇಲ್ಲ. ಬೆಂಗಳೂರಿನ ಬಗ್ಗೆ ಇದು ಎರಡನೇ ಸಾರಿ ಪ್ರಸ್ತಾಪ ಮಾಡುತ್ತಿರುವುದು.

ಅಧ್ಯಕ್ಷರು :- ಯಾರಾದರೂ ಇರಲಿ, ಯಾರಾದರೂ ಇಲ್ಲದೇ ಹೋಗಲಿ, ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಇದ್ದಾರೆ ನೀವು ಮಾತನಾಡಿ.

ಶ್ರೀ ಎನ್. ರಾಜಣ್ಣ :- ತಮಗೆ ಒಂದು ಉದಾಹರಣೆಯನ್ನು ಹೇಳುವು ದಾದರೆ ಒಳಚರಂಡಿಯ ದುರವಸ್ಥೆಯಿಂದಾಗಿ ಮಾನ್ಯ ಬಚ್ಚೇಗೌಡರ ಬ್ರದರ್ ಚಿತ್ರೇಗೌಡ ಎನ್ನುವವರ ಮನೆಯಡಿ ಹತ್ತಿರ ಕಳೆದ ವರ್ಷ ಅಂಡರ್‌ಗ್ರೌಂಡ್ ಡ್ರೈನೇಜ್ ಬ್ಲಾಕ್ ಆಗಿ ಆ ನೀರು ರಸ್ತೆಯಲ್ಲಿ ನಿಂತಿತ್ತು. ಅವರಿಗೆ ಜಾಂಡೀಸ್ ತಗುಲಿ 2 ತಿಂಗಳ ಕಾಲ ಸಫರ್ ಮಾಡಿದ್ದಾರೆ.

MR. SPEAKER :- He is a Minister. You are making him a witness for the failure.

ಶ್ರೀ ಎನ್. ರಾಜಣ್ಣ :- ಈ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಂ ಹದ ಗೆಟ್ಟಿರುವುದರಿಂದ ಜನರಿಗೆ ಮೊದಲನೆಯದಾಗಿ ಜಾಂಡೀಸ್, ಎರಡೆಯದಾಗಿ ಟೈಫಾಯ್ಡ್, ಮೂರನೆಯದಾಗಿ ಇನ್ನೂ ಬೇರೆಬೇರೆ ರೋಗರುಜಿನಗಳು ಬರುತ್ತಿವೆ. ನಾಲ್ಕನೆಯದಾಗಿ, ಈ ದುರ್ವಾಸನೆಯಿಂದ ಇಡೀ ಪರಿಸರವೇ ಕೆಟ್ಟುಹೋಗಿ ಈಗಿನ ಪೀಳಿಗೆಯ ಮಕ್ಕಳ ಬೆಳವಣಿಗೆಯ ಮೇಲೆ ಕೆಟ್ಟ ಪರಿಣಾಮವುಂಟಾಗುತ್ತಿದೆ. The growth of the children of the present generation has been affected. They are becoming mentally disodered.mentally weak, physically weak. This is the major problem. I request the Hon. Minister Sri Bachhe Gowda to think scientifically about this aspect of the matter and see that the underground drainage system within the city can be improved and also see that wherever all these problems are spreading day by day are checked besides taking action to stop the growth of the city. ಈ ಪ್ರಮುಖ ಸಮಸ್ಯೆಗೆ ಇನ್ನೊಂದು ಕಾರಣ ಎಂದರೆ, ಬೆಂಗಳೂರುನಗರದಲ್ಲಿ ಟೌನ್ ಪ್ಲಾನಿಂಗ್ ಇಲಾಖೆ ಎಂದು ಇದೆ. ಅಲ್ಲಿ ಅವರು ಟೌನ್ ಪ್ಲಾನಿಂಗ್ ಮಾಡುತ್ತಿಲ್ಲ. ಅವರು ಟೌನ್ ಸ್ಪಾಯಿಲ್ ಮಾಡುತ್ತಿದ್ದಾರೆ. ಬಡಬಗ್ಗರು ಯಾರಾದರೂ ಪ್ಲಾನ್ ಮಂಜೂರಾತಿಗಾಗಿ ಅರ್ಜಿಯನ್ನು ಹಾಕಿದರೆ ಅವನ ನಿವೇಶನ 30X40 ಅಡಿ ಅಳತೆ ಇದ್ದರೆ ಅದರ ಪ್ಲಾನ್‌ನ್ನು ಮಂಜೂರು ಮಾಡಬೇಕಾದರೆ ಅವನಿಗೆ ಕೊಡಬಾರದ ಕಷ್ಟವನ್ನು ಕೊಡುತ್ತಾರೆ. ಕೊನೆಗೆ ಅವನಿಗೆ ಪ್ಲಾನೇ ಸ್ಯಾಂಕ್ಷನ್ ಆಗುವುದಿಲ್ಲ. ಈ ಬೆಂಗಳೂರಿನಲ್ಲಿ ಬಿಲ್ಡರ್ಸ್ ಯಾರಿದ್ದಾರೆ ಅವರ ಮನೆಗೆ ಇವರು ಪ್ಲಾನ್ ಸ್ಯಾಂಕ್ಷನ್ ಮಾಡಿಕೊಂಡು ತೆಗೆದುಕೊಂಡು ಹೋಗಿ ಕೊಡುತ್ತಾರೆ. ತಮಗೆ ಗೊತ್ತಿರುವಂತೆ ಈ ಬೆಂಗಳೂರು ನಗರದ ಸುತ್ತಮುತ್ತ ಇದ್ದಂಥ ಕೆರೆಕುಂಟೆಗಳೆಲ್ಲಾ ಮಾಯವಾದುವು. ಮೈದಾನಗಳು ಮಾಯವಾದುವು. ದೊಡ್ಡ ದೊಡ್ಡ ಬಂಗಲೆಗಳಲ್ಲಿ ಒಂದು ಕುಟುಂಬ ಇದ್ದುಕೊಂಡು 25-50-100 ಮರಗಳು ಇರುತ್ತಿದ್ದುವು. ಆದರೆ ಇವತ್ತು ತಾವು ಹೋಗಿ ನೋಡಿ; ಉದಾಹರಣೆಗೆ ಹೇಳುವುದಾದರೆ, ಕಾಕ್ಸ್ ಟೌನ್, ಥಾಮಸ್ ಟೌನ್, ರಿಚರ್ಡ್ಸ್ ಟೌನ್, ಮರ್ಫಿ ಟೌನ್, ಇನ್ನೂ ಮುಂತಾದ ಎಲ್ಲಾ ಟೌನ್‌ಗಳಲ್ಲೂ ಹಳೇ ಕಟ್ಟಡ ಗಳನ್ನೆಲ್ಲಾ ಒಡೆದುಹಾಕುತ್ತಿದ್ದಾರೆ. ಒಂದು ಕುಟುಂಬ ಇದ್ದಂಥ ಜಾಗದಲ್ಲಿ 50 ಮರಗಳು ಕುಟುಂಬಗಳು ಇರುವಂತೆ ಮಾಡುತ್ತಿದ್ದಾರೆ. ಭಾರತೀನಗರ, ಶಾಂತಿನಗರ, ಶಿವಾಜಿನಗರ, ಜಯಮಹಲ್‌ನ ಸ್ವಲ್ಪ ಭಾಗ ಇಲ್ಲಿ ಸುಮಾರು 20 ಸಾವಿರ ಮನೆಗಳು ಬಂದಿರಬಹುದು. ಇದು ಕೇವಲ ಹತ್ತಿಪ್ಪತ್ತು ವರ್ಷಗಳಲ್ಲಿ ಬಂದಿರುವಂಥಾದ್ದು. ಅದೇರೀತಿ ರಸ್ತೆಗಳೂ ಕೂಡ ಅಷ್ಟೇ ಇವೆ. ಜನದಟ್ಟನೆ ಜಾಸ್ತಿಯಾಯಿತು - ie ; the density of population. There is no infrastructure. We have to see that the Town planning Department of the Bangalore City should be woundup. ತಕ್ಷಣವೇ ನೀವು ಅದರ ಬೈಲಾವನ್ನು ಬದಲಾವಣೆ ಮಾಡದೇ ಹೋದರೆ ಮುಂದೆ ನಾವು ಬಹಳ ತೊಂದರೆಗೆ ಒಳಗಾಗುತ್ತೇವೆ. ನಮ್ಮ ಮುಂದಿನ ಪೀಳಿಗೆಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆಂದು ಹೇಳಬಯಸುತ್ತೇನೆ. I wanted to bring to the

kind attention of the august House that the bye-laws for the construction of apartments, & the infrastructure bye-laws were framed during the year 1972 and in 1984 the government had formed to committee called Ouline Development planning. They have decided and formulated and given the guidance in the outline plan that the building should have ground floor and first floor only. That was the usual procedure. Then during the year 1984-94, this committee had been changed to comprohensive development plan. This committee also have followed the same bye-laws and they introduced chages according to their convenience depending upon the area. Now the bye-laws were again changed during the financial year 1995-96 on the zonal system without consulting the local MLAs. These changes are proposed without proper thinking of the facilities of the infrastructure. The existing infrastructure was mostly created during the British regime and the State of Maharajas. That was the gruideline of Delhi planning. Therefore, the restrictions should be imposed immediately and accordingly the bye-laws should be imposed immediately and accordingly, additional expenditure of the government regurding existing infrastructure. The Corporation authorities should inspect properly and to put an end to their sanction of high-rise apartments within the old city. These are all major problems, Sir. ಇನ್‌ಫ್ರಾಸ್ಟ್ರಕ್ಚರ್ ಇಲ್ಲದೆ ಎಲ್ಲೆಲ್ಲಿ ಈ ರೀತಿ ಕಟ್ಟಡಗಳು ಜಾಸ್ತಿಯಾಗಿವೆ ಅಲ್ಲೆಲ್ಲಾ ನೀರಿನ ತೊಂದರೆ ಬಹಳವಾಗಿದೆ. ಎರಡನೆಯದಾಗಿ ಹೇಳುವುದಾದರೆ ವಿದ್ಯುಚ್ಛಕ್ತಿ. ಈ ಬಿಲ್ಡರ್ಸ್ ಯಾರಿದ್ದಾರೆ ಅವರೆಲ್ಲರೂ ಕೂಡ ಟ್ರಾನ್ಸ್‌ಫಾರ್ಮರ್‌ಗಳನ್ನು ತಮ್ಮ ಮನೆಯ ಕಾಂಪೌಂಡ್‌ನ ಒಳಗಡೆ ಇಟ್ಟುಕೊಳ್ಳುತ್ತಾರೆ. ಇದರಿಂದಾಗಿ ಆ ಏರಿಯಾದಲ್ಲಿರತಕ್ಕ ಬಡವರಿಗೆ ವಿದ್ಯುಚ್ಛಕ್ತಿ ಇಲ್ಲದಂತೆ ಆಗುತ್ತಿದೆ. ಅವನಿಗೆ ಲೈಟ್ ಇಲ್ಲದಂತಾಗುತ್ತದೆ. ಮೊದಲನೆಯದಾಗಿ ಒಳಚರಂಡಿಯ ಕೊಳಚೆನೀರು ಇವನ ಮನೆಗೆ ಬರುತ್ತದೆ, ಎರಡನೆಯದಾಗಿ ವಿದ್ಯುಚ್ಛಕ್ತಿ ಇಲ್ಲದೆ ಲೈಟ್ ಇರುವುದಿಲ್ಲ, ಮೂರನೆಯದಾಗಿ ದೊಡ್ಡ ದೊಡ್ಡ ಬಿಲ್ಡರ್ಸ್ ದೊಡ್ಡ ದೊಡ್ಡ ಸ್ವಿಮಿಂಗ್‌ಪೂಲ್ಸ್‌ನ್ನು ಕಟ್ಟಿಕೊಂಡು ಅದಕ್ಕೆ ಸಾಕಷ್ಟು ನೀರನ್ನು ತೆಗೆದುಕೊಂಡುಬಿಡುತ್ತಾರೆ. ಇದರಿಂದಾಗಿ ಇವತ್ತು ಬಡಬಗ್ಗರು ಆ ಏರಿಯಾದಲ್ಲಿ ಯಾರಿರುತ್ತಾರೆ ಅವರಿಗೆ ನೀರೂ ಕೂಡ ಸಿಕ್ಕುತ್ತಿಲ್ಲ. There is no ifrastructure within the old city. Hence, I request the Government the Hon. Speaker to see that though builders are prevented from constructing a parliment, within the old city.

MR. SPEAKER :- Alright.

ಶ್ರೀ ಎನ್. ರಾಜಣ್ಣ :- ಇವತ್ತು ಈ ಬಿಲ್ಡರ್ಸ್ ಹಾವಳಿ ಎಷ್ಟುಮಟ್ಟಿಗೆ ಹೋಗಿದೆ ಎಂದರೆ, ಇವತ್ತು ಮಕ್ಕಳು ಆಡುವುದಕ್ಕೆ ಇದ್ದಂಥ ಆಟದ ಮೈದಾನಗಳೆಲ್ಲಾ ಖಾಲಿ ಆಗಿಹೋಗಿವೆ. ನಾವು ವರ್ಷಕ್ಕೊಮ್ಮೆ ಸ್ವಾಮಿ ವಿವೇಕಾನಂದರ ಜಯಂತ್ಯೋತ್ಸವ ವನ್ನು ಮಾಡುತ್ತೇವೆ. ಸ್ವಾಮಿ ವಿವೇಕಾನಂದರು ಏನು ಹೇಳಿದ್ದಾರೆಂದರೆ, ಮೊದಲು ತನ್ನ ಮನೆಯನ್ನು ಶುದ್ಧಿ ಮಾಡಿಕೊಳ್ಳುವುದನ್ನು ಕಲಿತುಕೋ, ಆಮೇಲೆ ಬೀದಿಯನ್ನು ಶುದ್ಧಮಾಡು, ಆನಂತರ ಊರನ್ನು ಶುದ್ಧಿಮಾಡು ಮಾಡು ತದನಂತರ ದೇಶವನ್ನು ಶುದ್ಧಿ ಮಾಡು ಎಂದು. ಅದರ ಪ್ರಕಾರ ನಾನು ನನ್ನ ಮನೆಯಲ್ಲಿರುವ ದನದ ಕೊಟ್ಟಿಗೆಯನ್ನು ಬ್ರಿಟೀಷ್ ಸಿಸ್ಟಂನಲ್ಲಿ ಬಹಳ ಶುದ್ಧವಾಗಿಟ್ಟಿದ್ದೇನೆ. ನಾನು ನನ್ನ ಮನೆಯನ್ನು ಶುದ್ಧಿ ಮಾಡುವುದನ್ನು ಕಲಿತುಕೊಂಡೆ. ನಾನು ಅಂಥ ಭಾರೀ ಮನೆಯನ್ನೇನೂ ಕಟ್ಟಿಸಿಲ್ಲ. ನನ್ನ ಮನೆ ಸುಮಾರಾಗಿದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ ಶುದ್ಧವಾಗಿಡುವುದನ್ನು ಕಲಿತೆ.

ಅಧ್ಯಕ್ಷರು :- ನಿಮ್ಮ ಮನೆ ಸಣ್ಣದೋ, ದೊಡ್ಡದೋ ಎಂದು ನಮಗೆ ಹೇಗೆ ಗೊತ್ತಾಗಬೇಕು? ಒಂದು ದಿವಸ ನಮ್ಮೆಲ್ಲರನ್ನೂ ನೀವು .ಊಟಕ್ಕೆ ಕರೆದರೆ ತಾನೇ ನಮಗೆ ಗೊತ್ತಾಗುವುದು.

SRI N. RAJANNA :- I am very happy to invite you to my cattle shed. You can see how I have kept my cattle shed.

ಶ್ರೀ ವಾಟಾಳ್ ನಾಗರಾಜ್ :- ತಮ್ಮ ಒಬ್ಬರನ್ನೇ ಊಟಕ್ಕೆ ಕರೆಯುತ್ತೇನೆ ಎಂದು ಹೇಳಿಬಿಟ್ಟಿರಲ್ಲಾ; ನಮ್ಮ ಪರಿಸ್ಥಿತಿ ಏನು?

ಅಧ್ಯಕ್ಷರು :- ನಾನು ಒಬ್ಬನೇ ಎಲ್ಲಿ ಹೋಗುತ್ತೇನೆ ನಿಮ್ಮನ್ನೆಲ್ಲಾ ಬಿಟ್ಟು; ನಿಮ್ಮನ್ನು ಬಿಟ್ಟು ಹೋಗುವ ಪ್ರಶ್ನೆಯೇ ಇಲ್ಲ.

SRI N. RAJANNA :- I have got fifty years of experience in maintaining cattles. ಬ್ರಹ್ಮ ಜ್ಞಾನ ಒಂದು ಪರ್ಸೆಂಟ್ ಬಂದಿದೆ ಬ್ರಹ್ಮ ಜ್ಞಾನ ತುಂಬಿ ಬಿಟ್ಟಿದ್ದಾನೆ.

ಶ್ರೀ ವಾಟಾಳ್ ನಾಗರಾಜ್ :- ಅದು ಯಾವುದು ಬ್ರಹ್ಮಜ್ಞಾನ?.

ಶ್ರೀ ಎನ್. ರಾಜಣ್ಣ :- ಬ್ರಹ್ಮ ಜನ್ಮ ಕೊಡುತ್ತಾಳಲ್ಲಾ ಆ ತಾಯಿ, ಆ ತಾಯಿಯನ್ನು ಅಲ್ಲಿಂದ ಸ್ಮಶಾನದವರೆಗೆ ಎಲ್ಲವನ್ನು ಅರ್ಥ ಮಾಡಿಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ಅಲ್ಲಿಂದ ಸ್ಮಶಾನದವರೆಗೆ ನೋಡಿದ್ದಾರಂತೆ ಇವರು ಬ್ರಹ್ಮ ಯಾರು, ಜನ್ಮ ಕೊಡುವ ತಾಯಿ ಯಾರು? ಅದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು :- ಅದು ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಅದಕ್ಕೆ ಒಂದು

ವಿಶಿಷ್ಟವಾದ ಅನುಭವಬೇಕು I have understood what yopu have said. Please go ahead.

ಶ್ರೀ ಎನ್. ರಾಜಣ್ಣ :- ಕಳೆದ ಸಾರಿ ರಾತ್ರಿ 11 ಗಂಟೆಗೆ ಬಜೆಟ್ ಮೇಲೆ ಮಾತನಾಡುವುದಕ್ಕೆ ತಾವು ನನ್ನನ್ನು ಕರೆದಿರಿ ಆವತ್ತು ರಾತ್ರಿ ಮಾತನಾಡುವಾಗ our Government has given a very good budget this time and it contains 72 paras, ಎಂದು ಹೇಳಿದ್ದೇ. but I have prepared myself for 32 paras ಎಂದು ಸಹ ಹೇಳಿದೆ. Out of which one para..... ಈ ಒಂದು ಪ್ಯಾರಾ ಬಗ್ಗೆ ಹೇಳುವಾಗ ರಾತ್ರಿ 11 ಗಂಟೆ. ಆಗ ನಾನು ಬೈಚಾನ್ಸ್ ತಪ್ಪಾಗಿ ಹೇಳಿದೆ; 'ನಮ್ಮ ಮಕ್ಕಳು ನಮ್ಮ ಶಕ್ತಿ' ಎಂದು ಹೇಳಿದೆ. ಅದು ಬೈಚಾನ್ಸ್ ತಪ್ಪಾಗಿ ರಿವರ್ಸ್ ಆಯಿತು. ನಮ್ಮ ಮಕ್ಕಳು ಅಂದರೆ ನಮ್ಮ ಸರ್ಕಾರ ಏನು ಅದು ಬ್ರಹ್ಮಜ್ಞಾನ ಅಂದರೆ ಒಬ್ಬ ಹೆಣ್ಣುಮಗಳ ಕಷ್ಟ ಅರ್ಥಮಾಡಿಕೊಳ್ಳುವುದು. ನಮ್ಮ ಕರ್ನಾಟಕದಲ್ಲಿ ಎರಡು ಕೋಟಿ ಹೆಣ್ಣುಮಕ್ಕಳು ಇದ್ದಾರೆ.

ಅಧ್ಯಕ್ಷರು :- ಬ್ರಹ್ಮ ಜ್ಞಾನದ ಬಗ್ಗೆ ಪುಟ್ಟಣ್ಣಯ್ಯನವರಿಗೆ ಒಪ್ಪಿಸಿಬಿಟ್ಟಿದ್ದೇನೆ, ಅವರು ಶ್ರೀ ವಾಟಾಳರಿಗೆ ತಿಳಿಸುತ್ತಾರೆ. ನೀವು ನಮಗೆ ಬೇರೆ ಎಲ್ಲಾ ವಿಚಾರಗಳನ್ನು ಹೇಳಿ ಬೇಗ ಮುಗಿಸಿ. ಇನ್ನೂ ಹೆಚ್ಚು ಹೊತ್ತು ಬೇಡ.

ಶ್ರೀ ಎನ್. ರಾಜಣ್ಣ :- ಬ್ರಹ್ಮ ಜ್ಞಾನದ ಬಗ್ಗೆ ಸ್ವಾಮಿ ವಿವೇಕಾನಂದ ತಿಳಿಸಿರುವುದು, ನಾವು ನಮ್ಮ ಮನೆ ಶುದ್ಧ ಮಾಡಿ ಟೌನ್ ಶುದ್ಧ ಮಾಡುವುದಕ್ಕೆ ಜನ ನನ್ನನ್ನು ಎಲೆಕ್ಟ್ ಮಾಡಿ ಕಾರ್ಪೊರೇಷನ್ ಆಗಿ ಮಾಡಿದ್ದರು. I did my level best to clean my town. ಸ್ವಾಮಿ ವಿವೇಕಾನಂದ ಏನು ಹೇಳಿದ್ದಾರೆ, ಟೌನ್ ಕ್ಲೀನ್ ಮಾಡಿ ಶುದ್ಧವಾಗಿ ಇಟ್ಟಿದ್ದಕ್ಕೋಸ್ಕರ ಜನ ನನ್ನನ್ನು ಇವತ್ತು ಬೆಂಗಳೂರು ನಗರ ಮತ್ತು ರಾಜ್ಯವನ್ನು ಶುದ್ಧ ಮಾಡುವುದಕ್ಕೆ ಇಲ್ಲಿ ಕಳುಹಿಸಿದ್ದಾರೆ. ಸ್ವಾಮಿ ವಿವೇಕಾನಂದರ ದಿನವನ್ನು ನಾವು ನವೆಂಬರ್ 11 ಕ್ಕೆ ಆಚರಣೆ ಮಾಡುತ್ತೇವೆ. ನಾವು ದೇವರಪೂಜೆ ಮಾಡುತ್ತೇವೆ, ಸ್ವಾಮಿ ವಿವೇಕಾನಂದರ ಪೂಜೆ ಮಾಡುತ್ತೇವೆ. ಆದರೆ ಹಿನ್ನೆಲೆಯನ್ನು ಮರೆತುಬಿಡುತ್ತೇವೆ. ಆ ಹಿನ್ನೆಲೆಯನ್ನು ಅಭ್ಯಾಸ ಮಾಡುತ್ತಾ ಹೋದರೆ ಅದಕ್ಕಿಂತ ದೊಡ್ಡ ದೇವರು ಬೇರೆ ಇಲ್ಲ. ಕಾಯಕವೇ ಕೈಲಾಸ ಎಂದು (ಸುಬ್ಬಣ್ಣನವರು).. ಬಸವಣ್ಣನವರು ಹೇಳಿರಬಹುದು.

ಶ್ರೀ ವಾಟಾಳ್ ನಾಗರಾಜ್ :- ಸುಬ್ಬಣ್ಣನವರು ಅಲ್ಲ, ಅದು ಬಸವಣ್ಣನವರು ಹೇಳಿದ್ದು.

ಅಧ್ಯಕ್ಷರು :- ವಾಟಾಳ್ ನಾಗರಾಜ್ ಅವರೇ, ನೀವು ಈ ಕಡೆ ಎಲ್ಲಾ ಅವರನ್ನು ಬಸವಣ್ಣನವರು ಅನ್ನುತ್ತೀರಿ. ಅವರನ್ನು ಭಾರತಿನಗರದಲ್ಲಿ ಸುಬ್ಬಣ್ಣ ಎಂದೇ ಕರೆಯುವುದು.

ಶ್ರೀ ವಾಟಾಳ್ ನಾಗರಾಜ್ :- ಅಂದರೆ ಬಸವೇಶ್ವರರಿಗೆ ಈ ಗತಿ ಬರಬಾರದಾಗಿತ್ತು; ರಾಜಣ್ಣನವರ ಬಾಯಿಯಿಂದ ಇವತ್ತು ಬಸವೇಶ್ವರರು, ಮತ್ತೆ ಯಾರ ಯಾರ ಹೆಸರು ಏನೇನು ಮಾಡುತ್ತಾರೋ? ತಾವು ಅವರಿಗೆ ರಕ್ಷಣೆ ಕೊಡಬೇಕು.

ಶ್ರೀ ಯು. ಆರ್. ಸಭಾಪತಿ :- ಅಧ್ಯಕ್ಷರೆ, ಅದು ಬ್ರಹ್ಮಜ್ಞಾನದ ಮಾತು. ತಾವು ಅಂಗೀಕಾರ ಮಾಡಬೇಕಾಗಿದೆ.

ಶ್ರೀ ಎನ್. ರಾಜಣ್ಣ :- ಹಿರಿಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ನನಗಿಂತ ಬಹಳ ಬುದ್ಧಿಶಾಲಿಗಳು. ಬಸವಣ್ಣನವರ ಬಗ್ಗೆ ಜಾಸ್ತಿ ತಿಳಿದುಕೊಂಡಿರಬಹುದು. ಆದರೆ ನಿಜವಾದ ಬಸವಣ್ಣನವರ ಇವರು ಎಷ್ಟು ತಿಳಿದು ಕೊಂಡಿದ್ದಾರೆಂಬುದು ನನಗೆ ಗೊತ್ತಿಲ್ಲ. ನಿಜವಾದ ಬಸವಣ್ಣ ಏನು ಎಂಬುದು ನನಗೆ ಗೊತ್ತು.

ಅಧ್ಯಕ್ಷರು :- ಸತ್ಯ ಹೇಳಿದಿರಿ, ಮುಂದುವರಿಸಿ.

ಶ್ರೀ ಎನ್. ರಾಜಣ್ಣ :- ಮೇಜರ್ ಪ್ರಾಬ್ಲಮ್ಸ್ ಬೆಂಗಳೂರಿನಲ್ಲಿ ಪ್ಲೇಗ್ರೌಂಡ್ಸ್.

ಅಧ್ಯಕ್ಷರು :- ಈಗ ಅಂಡರ್‌ಗ್ರೌಂಡ್ ಆಯಿತು, ಹೌಸಿಂಗ್ ಆಗಿದೆ, ಇನ್ನು ಎಜುಕೇಷನ್ ಬಗ್ಗೆ ಹೇಳಿಬಿಡಿ ಸಾಕು;

ಶ್ರೀ ಹೆಚ್. ಶಿವಪ್ಪ :- ಅವರು ಹೇಳಿದ್ದು, ನಾನು ಕಾರ್ಪೊರೇಟರ್ ಆದಾಗ ಸಿಟಿ ಕ್ಲೀನ್ ಮಾಡುವುದಕ್ಕೆಂದು ಅವರು ನನ್ನನ್ನು ಕಳುಹಿಸಿದರು, ಮಾಡಿ ಮುಗಿಸಿದೆ. ಈಗ ಸ್ಟೇಟ್ ಕ್ಲೀನ್ ಮಾಡುವುದಕ್ಕೆ ಬಂದಿದ್ದೇನೆಂದು ಹೇಳಿದರು. ಅದರ ಬಗ್ಗೆ ಏನೂ ಹೇಳಲಿಲ್ಲ.

ಅಧ್ಯಕ್ಷರು :- ನೀವೆಲ್ಲಾ ಜೊತೆಗೆ ಕೂಡಿಸಿಕೊಂಡು ಶುರು ಮಾಡಿದರಲ್ಲಾ; ಮತ್ತೆ ಹೇಳುವುದೇನು ಅದನ್ನು?

ಶ್ರೀ ಎನ್. ರಾಜಣ್ಣ :- ಸ್ವಾಮಿ ವಿವೇಕಾನಂದರು ಹೇಳಿರುವುದು every child must and should play daily two hours. ಎಂದು. Calcutta is famous for football. You can see one of the best teams in Calcutta, because they have followed Swami Vivekanada's formula. ಅಂದರೆ ಸ್ವಾಮಿ ವಿವೇಕಾನಂದರು ಆ ಕಾಲದಲ್ಲಿ ಅವರು ಎರಡು ಗಂಟೆ ಅಲ್ಲ ನಾಲ್ಕು ಗಂಟೆ ಕಾಲ ಫುಟ್ ಬಾಲ್ ಆಡುತ್ತಿದ್ದರು. ಅದೇ ತರಹ ನಮ್ಮ ಬೆಂಗಳೂರು ನಗರದಲ್ಲಿ ಕೋಟ್ಯಾಂತರ ರೂಪಾಯಿ ಇದೇ; ಹಣವಂತರು ಇದ್ದಾರೆ. We want to see that every child must become perfect and intelligent and they must be equal to some, foreign countries. ಆದಕ್ಕೋಸ್ಕರ ಈ ಮಾತು ಹೇಳುತ್ತಿದ್ದೇನೆ. ತಂದೆ ತಾಯಿ ಹಣವಂತರು ಇರುವವರು ಏನೋ ಸ್ಪೆಷಲ್ ಆಗಿ ಮಕ್ಕಳನ್ನು ಕಾರಿನಲ್ಲಿ ಕೂರಿಸಿ ಕಣ್ಣಿಗೆ ಕಾಣುವ ಹಾಗೆ ಕ್ಲಬ್‌ಗೇ ಕಳುಹಿಸುತ್ತಾರೆ. ಈ ಬಡ ಮಕ್ಕಳು ಇದ್ದಾರಲ್ಲಾ, ಮಧ್ಯಮ ವರ್ಗದ ಮಕ್ಕಳು ಇದ್ದಾರಲ್ಲಾ ಅವರ ಪರಿಸ್ಥಿತಿ ಇವತ್ತು ರಸ್ತೆಯಲ್ಲಿ ಆಟವಾಡುತ್ತಿದ್ದಾರೆ. ಆ ಮಕ್ಕಳಿಗೆ ಆಟವಾಡುವುದಕ್ಕೆ ಜಾಗ ಇಲ್ಲ. ರಸ್ತೆಯಲ್ಲಿ ಆಟವಾಡುವಾಗ ಬಾಲ್

ಹೋಗಿ ಪಕ್ಕದ ಮನೆಗೆ ಬಿದ್ದು ಅಲ್ಲಿ ಪೋಲೀಸರು ಬಂದು 12 ಜನ ಮಕ್ಕಳು ಫುಟ್‌ಬಾಲ್ ಆಡುವವರನ್ನು ಕರೆದುಕೊಂಡು ಹೋಗಿ ಸ್ಟೇಷನ್‌ನಲ್ಲಿ ಕೂರಿಸಿಕೊಳ್ಳುತ್ತಾರೆ. ಯಾವ ಹಂತಕ್ಕೆ ಬೆಂಗಳೂರು ಬಂದಿದೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ಇವತ್ತು ಬೆಂಗಳೂರು ನಗರದಲ್ಲಿ ಆಕ್ಸಿಡೆಂಟ್ ಆದರೆ, ಏನೂ ಇಲ್ಲವೆಂದರೂ ಕೇವಲ 5 ನಿಮಿಷಗಳಲ್ಲಿ 5 ಸಾವಿರ ಜನ ಸೇರುತ್ತಾರೆ; ಆ ಮಟ್ಟಕ್ಕೆ ಬಂದಿದೆ ಬೆಂಗಳೂರು ನಗರ. ಅದಕ್ಕೋಸ್ಕರ I request all of you including our Hon. Ministers not to permit builders within the city. Don't use influence because the builders will spoil the city. ಅಶೋಕ ನಗರದಲ್ಲಿ ಫುಟ್‌ಬಾಲ್ ಗ್ರೌಂಡ್ ಇದೆ ಅದು ಎಂತೆಂತಹ ಇಂಟರ್ ನ್ಯಾಷನಲ್ ಪ್ಲೇಯರ್ಸ್ ಆಡಿದಂಥ ಫುಟ್‌ಬಾಲ್ ಗ್ರೌಂಡ್. ಅದು ಫುಟ್‌ಬಾಲ್ ಗ್ರೌಂಡ್ ಇನ್‌ಕಂಪ್ಲೀಟ್ ಆಗಿ ಹಾಗೆಯೇ ಇತ್ತು. ಅದನ್ನು ಲೀಸ್‌ಗೆ ಏತಕ್ಕೆ ಕೊಡಬೇಕಾಗಿತ್ತು? 1990 ಅಥವಾ 1989 ರಲ್ಲಿ ಲೀಸ್‌ಗೆ ಕೊಟ್ಟರು ಆ ಗ್ರೌಂಡ್‌ನ್ನು ಅದರಲ್ಲಿ ಕೆಲವು ಜನರು ಇದ್ದಾರೆ. ನಮಗೆ ಅಲ್ಲಿ ನೋಡುವುದಕ್ಕೆ ಎಲ್ಲಾ ಡೆವಲಪ್‌ಮೆಂಟ್. ರಸ್ತೆಗಳೆಲ್ಲಾ ಅವರದ್ದೇ, ಎಲ್ಲದಕ್ಕೂ ಅವರ ಹೆಸರೇ. ಇಲ್ಲಿ ರೈಸಿಯ, ಕಂಟ್ರಾಕ್ಟರ್ಸ್ ಎಂದು ಇರುತ್ತಾರೆ, ಇನ್ನೊಂದುಕಡೆ ಇನ್ನೊಂದು ಗೃಹ ನಿರ್ಮಾಣ ಎಂದು ಇರುತ್ತದೆ. ಅವರು ಬಹಳ ತ್ಯಾಗಿಗಳು ಬೆಂಗಳೂರಿಗೆ. ಇವತ್ತು ಹತ್ತು ಲಕ್ಷ ಖರ್ಚು ಮಾಡಿ ನೂರು ಕೋಟಿ ಹೊಡೆದಿರುತ್ತಾರೆ. ಅಶೋಕ ನಗರದಲ್ಲಿರತಕ್ಕ ಪ್ಲೇಗ್ರೌಂಡ್‌ನಲ್ಲಿ ಒಂದು ಕೋಟಿಗೆ ಲೀಸ್‌ಗೆ ಕೊಟ್ಟಿದ್ದಾರೆ. ಒಂದು ಕೋಟಿ ಲೀಸ್‌ಗೆ ಕೊಟ್ಟು ಸುತ್ತಲೂ ಇರತಕ್ಕ ಖಾಲಿ ಜಾಗದಲ್ಲೆಲ್ಲಾ ಬಿಲ್ಡಿಂಗ್ ಕಟ್ಟಿದ್ದಾರೆ. ಈಗ ಅಲ್ಲಿ ಪಾರ್ಕಿಂಗ್‌ಗೆ ಜಾಗ ಇಲ್ಲ. ರಸ್ತೆಗಳಲ್ಲಿ ನಿಲ್ಲಿಸುತ್ತಿದ್ದಾರೆ ಗಾಡಿಗಳನ್ನು. ಒಂದು ಕೋಟಿ ಲೀಸ್‌ಗೆ ತೆಗೆದು ಕೊಂಡು ಪ್ಲೇ ಗ್ರೌಂಡನ್ನು ಇಂಪ್ರೂವ್ ಮಾಡುತ್ತೇವೆಂದರು; but they have not improved the football stadium at Ashoknagar even after collecting Rs. One crore from lease.

ಅಧ್ಯಕ್ಷರು :- ಫುಟ್‌ಬಾಲ್ ಗ್ರೌಂಡನ್ನು ಲೀಸ್‌ಗೆಕೊಟ್ಟಿದ್ದಾರೆಂದಿರಿ ಅದು ತಪ್ಪು. ಅದು ಅರ್ಬನ್ ಡೆವಲಪ್‌ಮೆಂಟ್‌ಗೆ ಬರುತ್ತದೆ. ಅವರು ಕನ್ನಡದಲ್ಲಿ ಮಾತನಾಡಿದರೆ ನಿಮಗೆ ಅರ್ಥವಾಗದಿದ್ದರೆ ನಾವು ಏನು ಮಾಡುವುದು ಶಿವಪ್ಪನವರೇ?

ಶ್ರೀ ಎನ್. ರಾಜಣ್ಣ :- ಅಲ್ಲಿ ಕಾರ್ ಪಾರ್ಕಿಂಗ್‌ಗೆ ಮೇಜರ್ ಪ್ರಾಬ್ಲಂ ಆಗಿದೆ cars are now parked outside. 8 ವರ್ಷ ಲೀಸ್‌ಗೆ ಕೊಟ್ಟಿದ್ದಾರೆ. ಏತಕ್ಕೆ ಸರ್ಕಾರ ಲೀಸ್‌ಗೆ ಕೊಡಬೇಕು? ಅದನ್ನು ಲಂಗ್ ಸ್ಪೇಸ್ ಆಗಿ ಇಡಬೇಕು; ಆಟದ ಮೈದಾನವನ್ನು ಓಪನ್ ಸ್ಪೇಸ್ ಆಗಿ ಇಡಬೇಕೆಂದು ನಮ್ಮ ಕರ್ನಾಟಕ ಸರ್ಕಾರ 1989 ರಲ್ಲಿಯೇ ಒಂದು ಆ್ಯಕ್ಟ್ ಮಾಡಿದೆ. According to that, all playgrounds should be preserved and that lung space should be maintained according to the CDP.

5.10 ಪಿ. ಎಂ.

ಇವತ್ತು ಪರಿಸ್ಥಿತಿ ಏನಾಗಿದೆಯೆಂದರೆ ಜಾಗ ಎಲ್ಲಾ ಬಿಲ್ಡರ್ಸ್‌ಗೆ ಕೊಟ್ಟುಬಿಟ್ಟು ಮಕ್ಕಳು ರಸ್ತೆಯಲ್ಲಿ ಆಟ ಆಡುವಂಥ ಪರಿಸ್ಥಿತಿ ಇದೆ. ಇದೇ ಸಮಸ್ಯೆ ಇಡೀ ನಗರದಲ್ಲಿ ಇದೆ. ಕೆರೆಗಳೆಲ್ಲಾ ಖಾಲಿ ಮಾಡಿಬಿಟ್ಟರು. ಇವತ್ತು ಆಟದ ಮೈದಾನ ಖಾಲಿ ಮಾಡುವುದಕ್ಕೆ ಬಿಲ್ಡರ್ಸ್ ಹೋಗಿದ್ದಾರೆ ಸಾರ್. ಅದಕ್ಕೋಸ್ಕರ ಇಲ್ಲಿರುವವರನ್ನೆಲ್ಲಾ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ನೀವೆಲ್ಲಾ ಸಹಕಾರ ಮಾಡಿ ಲಂಗ್ ಸ್ಪೇಸ್ ಉಳಿಸಬೇಕು. ಲಂಗ್ ಸ್ಪೇಸ್ ಉಳಿಸಲಿಲ್ಲ ಅಂದರೆ ನೀವು ಕಷ್ಟಪಟ್ಟು ಡಿಸ್ಟ್ರಿಕ್ಟ್‌ಗಳಿಂದ ಇಲ್ಲಿಗೆ ಬರುತ್ತೀರಿ. ಬಂದಾಗ ನಿಮಗೆ ಒಳ್ಳೆಯ ಗಾಳಿ ಬರಬೇಕು. ಊಟ ಮಾಡಿದ್ದೇ ಜೀರ್ಣ ಆಗುತ್ತಿಲ್ಲ ಸಾರ್ ಸಿಟಿಯೊಳಗೆ ಊಟ ಮಾಡಿದ್ದು ಜೀರ್ಣ ಆಗುವುದಿಲ್ಲ ಎಂದು ಹೋಗಿ ಅದಕ್ಕೆ ಮೆಡಿಸಿನ್ ತೆಗೆದುಕೊಳ್ಳುತ್ತಾರೆ. ಆ ಮೆಡಿಸನ್ನೂ ಜೀರ್ಣ ಆಗುವುದಿಲ್ಲ.

ಶ್ರೀ ಎಚ್. ಶಿವಪ್ಪ :- ಇಮ್ಯುನಿಟಿ ಡೆವಲಪ್ ಆಗಿದೆ ಎಂದು ಅವರು ಹೇಳುವುದು.

ಶ್ರೀ ವಾಟಾಳ್ ನಾಗರಾಜ್ :- ಸಾರ್, ಇದು ಬಹಳ ಗಂಭೀರವಾದ ಪ್ರಶ್ನೆ. ಈ ರೋಗಕ್ಕೆ ಔಷಧಿ ಯಾವುದು? ಈಗ ಅವರು ಔಷಧಿ ತಿಂದರೂ ಜೀರ್ಣ ಆಗುವುದಿಲ್ಲ. ಆಹಾರ ತಿಂದರೂ ಜೀರ್ಣ ಆಗುವುದಿಲ್ಲ.

ಅಧ್ಯಕ್ಷರು :- ಇರಿ. ವೈಟ್ ಮಾಡಿ, ಅವರು ಹೇಳುತ್ತಾರೆ. ಅದಕ್ಕೆ ಬ್ರಹ್ಮ ಜ್ಞಾನದಲ್ಲಿ ಔಷಧಿ ಇದೆ. ಅದನ್ನು ಅವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಅದಕ್ಕೆ ರಾಜಣ್ಣನವರೇ, ಔಷಧಿ ಏನು ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎನ್. ರಾಜಣ್ಣ :- ಔಷಧಿ ಏನೂ ಇಲ್ಲ. ಓಪನ್ ಸ್ಪೇಸ್ ಇಡಬೇಕು. ಒಬ್ಬ ವ್ಯಕ್ತಿಗೆ ಇಷ್ಟು ಆಮ್ಲಜನಕ ಬೇಕು ಎಂದು ಇದೆ. ಆ ಆಮ್ಲಜನಕದಲ್ಲಿ, 10 ಲಕ್ಷ ವಾಹನಗಳಿಂದಾಗಿ ಕಾರ್ಬನ್ ಮಾನಾಕ್ಸೈಡ್ ನಿಮ್ಮ ದೇಹಕ್ಕೆ ನಮ್ಮ ದೇಹಕ್ಕೆ ಹೋಗುತ್ತಾ ಇದೆ. ಆಮ್ಲಜನಕ ಕಡಿಮೆಯಾಗಿಬಿಟ್ಟಿದೆ. ಆಹಾರ ಜೀರ್ಣ ಆಗುತ್ತಾ ಇಲ್ಲ. ಹಳೇ ಸಿಟಿಯಲ್ಲಿ ಆಕ್ಸಿಜನ್ ಕೊರತೆಯಾಗಿದೆ ಸೈನ್‌ಟಿಸ್ಟ್ ಹೇಳುತ್ತಾರೆ ಒಂದು ಮರ 50 ವರ್ಷ ಇದ್ದರೆ 16 ಲಕ್ಷ ರೂಪಾಯಿ ವರ್ತ್ ಆಕ್ಸಿಜನ್ ಪ್ರೊಡ್ಯೂಸ್ ಆಗುತ್ತದೆ ಎಂದು. ಆ ಕಾರಣದಿಂದ ಸಿಟಿಯೊಳಗಡೆ ಆಟದ ಮೈದಾನಗಳನ್ನು ಲಂಗ್ ಸ್ಪೇಸ್‌ಗಳನ್ನು ಹಾಗೆಯೇ ಪ್ರಿಸರ್ವ್ ಮಾಡಬೇಕು. ಮರ ಬೆಳೆಸಬೇಕು. ಇನ್ನೂ ಒಂದು ಹಳೇ ಸ್ಮಶಾಣಗಳು ಇದೆಯಲ್ಲಾ, ನಮ್ಮ ಸಾಹೇಬರು ಗೋಲ್ಡ್. ಅವರು ಗೋಲ್ಡ್ ಫೀಲ್ಡ್ ಏರಿಯಾದಿಂದ ಬಂದಿರುವುದು; ತೆಲುಗಿನಲ್ಲಿ ಏನು ಹೇಳುತ್ತಾರೆಂದರೇ...

ಅಧ್ಯಕ್ಷರು :- ಕನ್ನಡದಲ್ಲೇ ಹೇಳಿ. ಎಲ್ಲರಿಗೂ ಅರ್ಥವಾಗಲಿ.

ಶ್ರೀ ಎನ್ . ರಾಜಣ್ಣ :- ಅವರು ನೂರು ವರ್ಷಕ್ಕೆ ಹಿಂದೆ ಹೇಳಿದ್ದರು. ಬೆಂಗಳೂರಿನಲ್ಲಿ ಸ್ಮಶಾಣ ಎಲ್ಲಾ ಮನೆ ಆಗಿಹೋಗುತ್ತದೆ ಎಂದು ಹೇಳಿದ್ದರು. ಈಗ ಸ್ಮಶಾಣ ಎಲ್ಲಾ ಮನೆ ಆಗಿಬಿಟ್ಟಿದೆ. ನಾನು ಹೇಳಬಾರದು, ಇನ್ನು ಮುಂದೆ ಸಿಟಿ ಯೊಳಗೆ ಮನೆಗಳು ಸ್ಮಶಾಣ ಆಗುವ ಕಾಲ ಬರುತ್ತಾ ಇದೆ.

ಅಧ್ಯಕ್ಷರು :- ಬದುಕಿರುವವರೆಲ್ಲಾ ಹೆಣ ಆಗುತ್ತಾರೆ.

ಶ್ರೀ ಎನ್. ರಾಜಣ್ಣ :- ಹೆಣ ಆಗುತ್ತಾರೆ. ಇದು ಕೈವಾರ ನಾರಾಯಣಪ್ಪ ನವರು ಹೇಳಿರುವುದು. ನಾನು ಹೇಳಿರುವುದಲ್ಲ. ಅದಕ್ಕೋಸ್ಕರ ಸಿಟಿ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ನಿಮ್ಮೆಲ್ಲರ ಸಹಕಾರ ಇದ್ದರೆ ಮಾತ್ರ ನಾವು ಸಿಟಿಯನ್ನು ಉಳಿಸಬಹುದು. ಇಲ್ಲದೇ ಇದ್ದರೆ ಉಳಿಸುವುದಕ್ಕಾಗಿವುದಿಲ್ಲ ಎಂದು ಹೇಳಿ ನಾನು ಬಹಳ ನೊಂದು ಮಾತನಾಡುತ್ತಿದ್ದೇನೆ. ಸಾರ್.

ಅಧ್ಯಕ್ಷರು :- ಈಗ ಮುಗಿಸಬೇಕಲ್ಲಾ ರಾಜಣ್ಣ. ಮುಂದಿನ ವರ್ಷ ನೀವು ಮತ್ತೆ ಮಾತನಾಡಬೇಕು.

ಶ್ರೀ ಎನ್. ರಾಜಣ್ಣ :- ತಾವು ದಯವಿಟ್ಟು ನನಗೆ ಅವಕಾಶ ಕೊಡಬೇಕು. ಬೆಂಗಳೂರು ಸಿಟಿ ಕಾರ್ಪೊರೇಷನ್ ಫೈನಾನ್ಷಿಯಲ್ ಪೊಸಿಷನ್ ಬಹಳ ವೀಕ್ ಆಗಿದೆ. ಆರ್ಥಿಕ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. ನಾನು ಅರ್ಬನ್ ಡೆವಲಪ್ಮೆಂಟ್ ಡಿಪಾರ್ಟ್‌ಮೆಂಟ್‌ನ್ನು ಕೇಳಬೇಕಾಗಿದೆ. ಚುನಾಯಿತ ಪ್ರತಿನಿಧಿಗಳು ಬರಬೇಕು. ಆದರೆ ಇಲ್ಲೇ ಇದ್ದು ಬೆಂಗಳೂರು ನಗರದ ಕಷ್ಟವನ್ನು ಅರ್ಥಮಾಡಿಕೊಂಡು ಕೌನ್ಸಿಲರ್ಸ್ ಆದರೆ ಬೆಂಗಳೂರಿಗೇನೋ ಒಂದು ಸ್ವಲ್ಪ ಕೆಲಸವಾಗುತ್ತದೆ. ಆದರೆ ಏನಾಗಿದೆ ಕೆಲವರು, 1990 ರಲ್ಲಿ ಹೊರಗಡೆಯಿಂದ ಬಂದವರು, 7-8 ವರ್ಷದ ಹಿಂದೆ ಬಂದವರು 20 ರಿಂದ 30 ಕಾರ್ಪೊರೇಟರ್ಸ್ ಆಗಿಹೋಗಿಬಿಟ್ಟರು. 1990 ರಲ್ಲಿ, ಇಲ್ಲಿ ಗೌರ್ನಮೆಂಟ್ ಆರ್ಡರ್ ಇದೆ.

MR. SPEAKER :- Don't take officers by name. It should not go on record.

SRI N. RAJANNA :- The City Corporation's financial position was very very weak. 1991 ರಲ್ಲಿ ಜಿ. ಓ. ಇಷ್ಯೂ ಮಾಡಿದ್ದಾರೆ ಪೀಸ್ ವರ್ಕ್ ಕೊಡಕೂಡದು ಎಂದು. 1992 ರಲ್ಲಿ ಸರ್ಕ್ಯುಲರ್ ಕಳುಹಿಸಿದ್ದಾರೆ. 1993 ರಲ್ಲಿ ಮತ್ತೆ ಸರ್ಕ್ಯುಲರ್ ಕಳುಹಿಸಿದರು. ಆದರೂ ಅವರು ಸ್ಟಾಪ್ ಮಾಡಲಿಲ್ಲ. 1994 ರಲ್ಲಿ ಬೆಂಗಳೂರು ಸಿಟಿ ಕಮಿಷನರ್ ಆಗಿದ್ದವರು ನೊಂದು ಒಂದು ಮಾತು ಹೇಳಿದರು. ಕಾರ್ಪೊರೇಷನ್ ಫೈನಾನ್ಷಿಯಲ್ ಪೊಸಿಷನ್ ಬಹಳ ವೀಕ್ ಆಗಿದೆ. ಇಲ್ಲಿ 20ರಿಂದ 25 ಗ್ಯಾಂಗ್ಸ್ ಇವೆ. ಅದೊಂದು ತರಹ ಅಧಿಕಾರಿಗಳಿಗೆ ಅಲ್ಲಿರತಕ್ಕ ಹಣವನ್ನು ಯಾವ ತರಹ ಲೂಟ್ ಮಾಡಬೇಕು ಎನ್ನುವ ಗ್ಯಾಂಗ್ ಇದೆ. ಅವರು ಯಾವ ಆಧಾರದ

ಮೇಲೆ ಯೂನಿಯನ್ ಮಾಡಿಕೊಂಡಿದ್ದಾರೋ ಗೊತ್ತಿಲ್ಲ ಸಾರ್. ಇದು ಬಹಳ ಮುಖ್ಯ. ಆಗಿನ ಕಮಿಷನರ್‌ರವರು ಬಹಳ ಮುಖ್ಯ. It is impossible to control the Bangalore City Corporation. ಎಂದು 1994 ರಲ್ಲಿ ಹೇಳಿದರು. ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟು ಹೋಗಿಬಿಟ್ಟಿತ್ತು. ಅಲ್ಲಿ 24 ಟ್ರೇಡ್ ಯೂನಿಯನ್ಸ್ ಇವೆ. ಟ್ರೇಡ್ ಯೂನಿಯನ್ಸ್ ಗೌರ್ನಮೆಂಟಿನಲ್ಲಿ ಎಲ್ಲಿ ಬರುತ್ತದೆ ಸಾರ್? I want to ask why they are allowing the trade unions, within the local bodies ಪ್ರಜಾಪ್ರಭುತ್ವದಲ್ಲಿ ಕೆ.ಸಿ.ಎಸ್.ಆರ್. ರೂಲ್ಸ್ ಪ್ರಕಾರ ಒಂದು ಅಸೋಸಿಯೇಷನ್ ಮಾಡಿಕೊಳ್ಳಲಿ. ಬೆಂಗಳೂರು ಸಿಟಿಯಲ್ಲಿ ಏನೇ ಇದ್ದರೂ ಆಯಾ ವೇಳೆಗೆ ಸರಿಯಾಗಿ ಎಲ್ಲಾ ಕರೆಕ್ಟಾಗಿ ನಡೆದುಕೊಂಡು ಬರುತ್ತಿರುತ್ತದೆ. ಅವರಿಗೆ ಪೇಮೆಂಟ್, ಸ್ಯಾಲರೀಸ್ ಎಲ್ಲಾ ಅಲ್ಲಿ ಕರೆಕ್ಟಾಗಿ ನಡೆದುಕೊಂಡುಬರುತ್ತದೆ. ಈ 22 ರಿದು 25 ಟ್ರೇಡ್ ಯೂನಿಯನ್ ಏನಿದೆ ಅದನ್ನು we have to stop at any cost, I request the Hon'ble Minster to bring some kind of legislation to stop this day robberery in the Bangalore city corporation. ಹೋದ ಡಿಸೆಂಬರ್‌ನಲ್ಲಿ ಸಣ್ಣ ಕೆಲಸ ಮುಗಿಸಿದ್ದರೂ ಅವನಿಗೆ ಬಿಲ್ ಕ್ಲಿಯರ್ ಆಗುತ್ತಾ ಇಲ್ಲ. He is not getting his bill cleared. There are about three hundred contractors. Among three hundred contractors, there are white elephants. ಅರ್ಬನ್ ಡೆವಲಪ್ಮೆಂಟ್ ಡಿಪಾರ್ಟ್‌ಮೆಂಟ್ ಆ್ಯನುಯಲ್ ರಿಪೋರ್ಟ್ ಪೇಜ್ ನಂಬರ್ 31 ರಲ್ಲಿ ಕೊಟ್ಟಿದೆ. BCC has taken up big works during 1995-96 ಎಂದು ಈಗಾಗಲೇ ಎಷ್ಟೋ ಕೆಲಸಗಳು ಕಂಪ್ಲೀಟ್ ಆಗಿಬಿಟ್ಟಿವೆ. ರಾಜೀವ್ ಗಾಂಧಿ ಅವರು ಫೌಂಡೇಷನ್ ಸ್ಟೋನ್ ಹಾಕಿದ್ದರು. ಅದು ಇನ್ನಾಗುರೇಷನ್ ಆಗಿ ಎರಡು ವರ್ಷ ಆಗಿಹೋಯಿತು. The construction of mutton market- Rs.77 lakhs, It is a white elephant within the city market. The estimated cost was Rs. three crores and now it has reached Rs. forty crores. ನನ್ನ ಕಾನ್ಸ್ಟಿಟುಯೆನ್ಸಿಗೆ ಪ್ಲೇಗ್ರೌಂಡ್ ಮಾಡಬೇಕಾದರೆ ಹಣ ಇಲ್ಲ ಎಂದು ಹೇಳುತ್ತಾರೆ. ಅಲ್ಲಿ ಡೆನ್‌ಸಿಟಿ ಆಫ್ ಪಾಪ್ಯುಲೇಷನ್ ಜಾಸ್ತಿ, ಡೆನ್‌ಸಿಟಿ ಆಫ್ ವೆಹಿಕಲ್ಸ್ ಜಾಸ್ತಿ, ಒಳಗಡೆ ಹೋಗುವುದಕ್ಕೆ ಜಾಗ ಇಲ್ಲ. ಅಲ್ಲಿ 40 ಕೋಟಿ ಹಾಕಿ ಮಾಡುವಂಥ ಕೆಲಸ ಏನಿದೆ ಸಾರ್? ಫಸ್ಟ್ ಸ್ಟೇಜ್ ಆಯಿತು.

ಅಧ್ಯಕ್ಷರು :- ರಾಜಣ್ಣನವರೇ, ಈಗ ಡೆನ್ಸಿಟಿ ಆಫ್ ಸ್ಪೀಚ್ ಹೆಚ್ಚು ಆಗಿಹೋಯಿತು.

ಶ್ರೀಎನ್. ರಾಜಣ್ಣ :- ಮುಗಿಸಿಬಿಡುತ್ತೇನೆ ಸಾರ್. ಇನ್ನು ಸ್ವಲ್ಪ ಹೊತ್ತು ಸಾರ್ ....

ಅಧ್ಯಕ್ಷರು :- ನೀವು ಮತ್ತೆ ಬೇರೆ ಡಿಮ್ಯಾಂಡ್ಸ್ ಮೇಲೆ ಮಾತನಾಡಬೇಕಲ್ಲಾ, ಅದಕ್ಕೋಸ್ಕರ.

ಶ್ರೀ ಎನ್. ರಾಜಣ್ಣ :- ಆದಷ್ಟು ಬೇಗ ಮುಗಿಸುತ್ತೇನೆ. ಇದು ಇಂಪಾರ್ಟೆಂಟ್ ಸಾರ್. Sir, we have to tune up the administration of the Bangalore City Corporation. ಇಲ್ಲ ಅಂದರೆ ನಾವೆಲ್ಲಾ ಬಂದರೂ ಪ್ರಯೋಜನ ಇಲ್ಲ ಸಾರ್. ಸಾರ್ ಪೆನ್‌ಷನ್, ಬಡವ ಪೆನ್‌ಷನ್. ರೀಸೆಂಟಾಗಿ ಒಬ್ಬ ಅಲ್ಲಿರತಕ್ಕ ಅಕೌಂಟೆಂಟ್. has looted crores of rupees.

ಅಧ್ಯಕ್ಷರು :- ರಾಜಣ್ಣನವರೇ, ನಿಮಗೆ ಇನ್ನು ಎಷ್ಟು ಹೊತ್ತು ಬೇಕಾಗಬಹುದು?

ಶ್ರೀ ಎನ್. ರಾಜಣ್ಣ :- ಐದೂಮುಕ್ಕಾಲಿಗೆ ಮುಗಿಸಿಬಿಡುತ್ತೇನೆ. ಈಗ 5-20.

ಅಧ್ಯಕ್ಷರು :- ಈಗ 5-20. 5-25 ಕ್ಕೆ ಮುಗಿಸಿಬಿಡಿ. ಉಳಿದಿದ್ದೆಲ್ಲಾ ಪರ್ಸನಲ್ಲಾಗಿ ಬೇರೆ ಮಾತನಾಡುವುದಿರುತ್ತದಲ್ಲಾ ನಾವು.

ಶ್ರೀ ಎನ್. ರಾಜಣ್ಣ :- ಫೇಸ್ ನಂ. 3 ಗೆ 660 ಕೋಟಿ ಶುರುಮಾಡಿ ಸುಮಾರು 14 ಕೋಟಿ ಫಿನಿಷ್ ಮಾಡಿದ್ದಾರೆ. ಫೇಸ್ 1-2, ಈಗ ಫೇಸ್ 4 ಕ್ಕೆ ಬರಬೇಕು. ಅದಕ್ಕೆ ಏನು ಮಾಡಿದರು ಅಂದರೆ ನೇಮ್ ಚೇಂಜ್ ಮಾಡಿಬಿಡುತ್ತಾರೆ. ಫೇಸ್ ಫೋರ್‌ನಲ್ಲಿ ಇಲ್ಲ. Construction of podium block at SKR Market costing nearly Rs. 10 Crores. 40 ಕೋಟಿಗೆ ಅಲ್ಲಿ ಎಸ್.ಕೆ.ಆರ್ ಮಾರ್ಕೆಟ್ ನಲ್ಲಿ ಕೆಲಸ ಏನಾಗಿದೆಯೆಂಬುದನ್ನು ನೋಡಲಿಕ್ಕೆ ತಾವು ಹೌಸ್ ಕಮಿಟಿ ಮಾಡಿ ಸಾರ್. ಅದನ್ನು ಸ್ಟಡಿ ಮಾಡಲಿ ಸನ್ಮಾನ್ಯ ನಗರಾಭಿವೃದ್ಧಿ ಸಚಿವರು ಇದ್ದಾರೆ ಇಲ್ಲಿ ಸೀನಿಯರ್ ಮಿನಿಸ್ಟರ್ ಇದ್ದಾರೆ Whether it is necessary? 40 ಕೋಟಿಯನ್ನು ಒಂದೇಕಡೆ 10 ವರ್ಷದಿಂದ ತೆಗೆದುಕೊಂಡು ಹೋಗಿ ಡಂಪ್ ಮಾಡುತ್ತಿದ್ದಾರೆ. Whether it is necessary? ನಮಗೆ ಬೇರೆ ಕ್ಷೇತ್ರಗಳಿಗೆ ಮಕ್ಕಳ ಆಟದ ಮೈದಾನಕ್ಕೆ ಕಾಸು ಕೇಳಿದರೆ, ಇಲ್ಲ ಎನ್ನುತ್ತಾರೆ. No finance, we have to get from the Government ಎಂದು ಹೇಳುತ್ತಾರೆ ಕಾರ್ಪೊರೇಷನಲ್ಲಿ. ಅಂಬೇಡ್ಕರ್ ಭವನ ಕಟ್ಟ ಬೇಕೆಂದು ಹೇಳಿ ಕಳೆದ ಒಂದೂವರೆ ವರ್ಷಗಳಿಂದ I am struggling ಒಂದು ಮಾರ್ಕೆಟ್ ಮಾಡ್ರನೈಸೇಷನ್‌ಗೆ 15 ಲಕ್ಷ ಕೇಳಿದರೆ No, money ಎಂದು ಹೇಳುತ್ತಾರೆ. ಆದರೆ ಇಲ್ಲಿ ತೆಗೆದುಕೊಂಡು ಹೋಗಿ ಕೋಟಿ ಕೋಟಿಗಟ್ಟಳೆ ಹಣವನ್ನು ಸುರಿಯು ತ್ತಿದ್ದಾರೆ. Whether it is going to benefit the citizens of Bangalore? ಶುರು ಮಾಡಿದ್ದುದು ಎರಡೂವರೆ ಕೋಟಿಗೆ. ಇವತ್ತು 40 ಕೋಟಿ ರೂಪಾಯಿ ತೆಗೆದು ಕೊಂಡು ಹೋಗಿ ಅಲ್ಲಿ ಸುರಿಯುತ್ತಿದ್ದಾರೆ. ಇದನ್ನು ಯಾರೂ ಕೇಳುವವರಿಲ್ಲ ಸಾರ್. What is the time limit? ಎಸ್ಟಿಮೇಟ್ ಅಮೌಂಟ್ ಎಷ್ಟು? ಇದರಲ್ಲಿ ರೆವಿನ್ಯೂ ಎಷ್ಟು? ಇದುವರೆಗೆ ಮೂರು ಕಾಸು ರೆವಿನ್ಯೂ ಇಲ್ಲ. ಎಸ್.ಜೆ.ಪಿ ರೋಡ್‌ನಲ್ಲಿ 660 ಶಾಪ್‌ಗಳು, ಟೆಂಪರರಿ ಆರ್ಡರ್ ಅವರು ಇವತ್ತಿನವರೆಗೂ ಅವರು ಅಲ್ಲೇ ಇದ್ದಾರೆ. ಯಾವಾಗ ಇವರನ್ನೆಲ್ಲಾ ಶಿಫ್ಟ್ ಮಾಡುವುದು? When we can expect the revenue? Sir, these are all very important things. Construction of

MS Car parking at JC Road, ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ದೇವೇ ಗೌಡರು, ಇನ್‌ಅಗ್ಯುರೇಟ್ ಮಾಡಿಸಿಬಿಟ್ಟು ಹೋಗಿದ್ದಾರೆ. The cost of the car parking is about Rs. 3 crores 75 lakhs. Today is it possible to park cars there? ಸ್ವಾಮಿ ಅಲ್ಲಿ ಕಾರ್ ಪಾರ್ಕ್ ಮಾಡುವುದಕ್ಕಾಗುವುದಿಲ್ಲ; ಅಲ್ಲಿ ಸ್ವಿಮ್ಮಿಂಗ್ ಪೂಲ್ ಆಗಿಬಿಟ್ಟಿದೆ. Why we have to spend crores of rupees unnecessairly for car parking? Have you not made soil test there? ಸಾಯಿಲ್ ಟೆಸ್ಟ್ ಮಾಡಲಿಲ್ಲವೇ? ಕೋಟ್ಯಾಂತರ ರೂಪಾಯಿ ವೇಸ್ಟ್ ಮಾಡುತ್ತಿದ್ದಾರೆ. ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುವುದಕ್ಕೆ ಹಣವಿಲ್ಲವೆಂದು ಹೇಳಿಬಿಟ್ಟು ಇಂತಹ ಕೆಲಸಗಳಿಗೆ ಹಣ ಖರ್ಚು ಮಾಡುತ್ತಿದ್ದಾರೆ. Financially, the Corporation has become very weak. ಈ ಕಟ್ಟಡ ಕಟ್ಟುವಾಗ ಯಾರೇ ಆಗಲಿ ಮನುಷ್ಯತ್ವ ಬೇಕು. 1982 ರಲ್ಲಿ ಕಟ್ಟಿದಂತಹ ಕಟ್ಟಡ 1992 ರಲ್ಲಿ ಬಿದ್ದುಹೋಗುತ್ತದೆ. ನಾನು ರೂಲಿಂಗ್ ಪಾರ್ಟಿಯಲ್ಲಿದ್ದರೂ ಈ ಮಾತನ್ನು ಹೇಳುತ್ತಿದ್ದೇನೆ ಮಾರನೇಹಳ್ಳಿಯಲ್ಲಿ ಕಟ್ಟಡ ಬಿದ್ದುಹೋಯಿತು ಎರಡು ತಿಂಗಳ ಹಿಂದೆ If you see that scene ತಾಯಿ ಮಗುವನ್ನು ಇಟ್ಟುಕೊಂಡು, ಥರ್ಡ್ ಫ್ಲೋರ್‌ನ ಒಂದು ಮೂಲೆಯಲ್ಲಿ ತನ್ನ ಮಗುವನ್ನು ಇಟ್ಟುಕೊಂಡು ತನ್ನ ಪ್ರಾಣಬಿಟ್ಟಿದ್ದಾಳೆ. ಇನ್ನೊಬ್ಬ ಆದರ ಕೆಳಗಡೆ ಡೆಬರೀಸ್‌ನಲ್ಲಿ ಸಿಕ್ಕಿಕೊಂಡು ಅದನ್ನು ನೋಡುತ್ತಿರುತ್ತಾನೆ. ಅವನನ್ನು ಈಚೆಗೆ ಎಳೆಯುವವರೆಗೂ ಹೊರಗೆ ಬರುವಹಾಗೆ ಇಲ್ಲ. That dead body is hanging with a child in her hand and another man ಅವನು ತನ್ನ ಜೀವಕ್ಕೋಸ್ಕರ ಹೋರಾಟ ಮಾಡಿಕೊಂಡು ಕೆಳಗಡೆ ಡೆಬರೀಸ್‌ನೊಳಗಡೆಯಿಂದ ನೋಡುತ್ತಿದ್ದಾನೆ. ಹಣ ಲೂಟಿ ಮಾಡತಕ್ಕ ಇಂಜನಿಯರ್ಸ್, ಹಣ ಲೂಟಿ ಮಾಡತಕ್ಕ ಕಂಟ್ರಾಕ್ಟರ್ಸ್ ಇವರಿಗೆ ಆ ಸೀನ್ಸ್ ತೋರಿಸಬೇಕು. ಇವರ ಕುಟುಂಬಗಳಲ್ಲಿ ಈ ತರಹವಾಗಿದ್ದರೆ ಇವರು ಏನಾಗುತ್ತಿದ್ದರು? ಇದೆಲ್ಲಾ ಬಹಳ ಮುಖ್ಯವಾದುದು ಸಾರ್. Ther is a very important cause, we have to improve the Bangalore City Corporation otherwise what is the use? Sir, one more question is there, ರೈಲ್ವೆ ಅಂಡರ್ ಬ್ರಿಡ್ಜ್, ತಾವು ಬಹಳ ಅನುಭವಸ್ಥರು You are very experienced; You have very good knowledge, You are a golden man from the Gold Field. ಆರೋಗ್ಯವಾಗಿರಬೇಕಾದರೆ ಗೋಲ್ಡ್ ದೇಹದಲ್ಲಿರಬೇಕು ಅದು ಇದೆ ನಿಮಗೆ. ಗೋಲ್ಡ್ ಡೈಮಂಡ್ ಇದೆಲ್ಲಾ ಸಾರ್ ನಿಮಗೆ. ಆ ಶಕ್ತಿ ಬಲ ಎಲ್ಲಾ ಇದೆ ನಿಮಗೆ. ಸ್ವಲ್ಪ ಚಿಂತನೆ ಮಾಡಬೇಕು. ನಾನು ಪ್ರಶ್ನೆ ಕೇಳಿದ್ದಕ್ಕೆ ಏನು ಹೇಳುತ್ತಾರೆಂದರೆ ಸಾರ್, ಅದು ಲಿಟಿಗೇಷನ್‌ನಲ್ಲಿದೆ that is near Bangalore palace, the railway underground bridege work. ರೈಲ್ವೆಯವರು ಫಿನಿಷ್ ಮಾಡಿ 10 ವರ್ಷವಾಯಿತು. ನಮ್ಮ ಕಾರ್ಪೋರೇಷನ್‌ದವರು ಉಳಿದ ಕೆಲಸವನ್ನು ಫಿನಿಷ್ ಮಾಡಬೇಕು. ಈ ವಾರ್ಷಿಕ ವರದಿಯಲ್ಲಿ ಹೇಳುತ್ತಾರೆ, ಪುಟ-33 ಕಾಲಂ ನಂ. 14 Construction of an approach bed of underbridge at palace Cross Road, Rs.82 lakhs. They say work is under progress. 10 ವರ್ಷದಿಂದ ಪ್ರೊಗ್ರೆಸ್ ಸಾರ್? ಈಗ ಅಲ್ಲಿ ಏನಾಗಿದೆ ಅಂದರೆ ವೆಹಿಕಲ್ಸ್ ಈ ಕಡೆಯಿಂದ ಆ

ಕಡೆಗೆ ಹೋಗಬೇಕಾಗುತ್ತದೆ. ದಿನಕ್ಕೆ ಕಡಿಮೆ ಅಂದರೆ 5 ಲಕ್ಷ ವೆಹಿಕಲ್ಸ್ ಹೋಗುತ್ತವೆ. 3 ಕಿಲೋಮೀಟರ್ ಸುತ್ತುಹಾಕಿಕೊಂಡು 5 ಲಕ್ಷ ವೆಹಿಕಲ್ಸ್ ಹೋಗಬೇಕಾದರೆ ಇವತ್ತು ಪೆಟ್ರೋಲ್ ಲೆಕ್ಕ ಹಾಕಿದರೆ 50 ಲಕ್ಷ ರೂಪಾಯಿ ಒಂದು ರೌಂಡ್‌ಗೆ ಲಾಸ್ ಆಗುತ್ತದೆ. That means ವೆಹಿಕಲ್ಸ್ ಪಲ್ಯೂಷನ್ ಜಾಸ್ತಿಯಾಯಿತು. It is waste of time, waste of economy and waste of money. 10 ವರ್ಷದಿಂದ ನನಗೆ ರಿಪ್ಲೈ ಕೊಡುತ್ತಾರೆ ಸಾರ್ ಅದು ಲಿಟಿಗೇಷನ್ಸ್‌ನಲ್ಲಿದೆ ಎಂದು. ಮೈಸೂರು ಮಹಾರಾಜರ ಮಗ ಯಾರಿದ್ದಾರೆ ಅವರನ್ನು ಸ್ವಾಮಿ ರಸ್ತೆಗೆ 50 ಅಡಿ ಬಿಟ್ಟುಕೊಡಿ ಅಂದರೆ ಬಿಟ್ಟುಕೊಡುತ್ತಾರೆ. ಇಂಜನಿಯರ್‌ಗೆ ತಾನು ಅಲ್ಲಿ ಹೋಗಿ ನಿಂತು ಈ ಕೆಲಸ ಮುಗಿಸಬೇಕೆಂಬ ದೊಡ್ಡ ಮನಸ್ಸು ಇರಬೇಕು ಸಾರ್. ಆಗಲೇ ಕೆಲಸ ಮುಗಿಯುವುದು. For the last ten years, this bridge work is pending. I hope that the Government will take serious action and see that the wrk is completed as early as possible.

MR. SPEAKER :- Mr. Rajanna, you must take your Ministers to task in the Party Meeting ; You must assert your right, then all these things shall yield result, and things improve.

SRI. MALLIKARJUNA KHARGE :- You have to fire here. Then we will come to know what it is.

MR. SPEAKER :- Here it is education for all of us. There, it should be fighting.

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ, 1950ನೇ ಇಸವಿಯಲ್ಲಿ ಸ್ಲಾಟರ್ ಹೌಸ್ ಹೊರಗಡೆ ಇತ್ತು. ಈಗ ಅವೆಲ್ಲಾ ಒಳಗಡೆ ಇವೆ. If you allow me I will speak. Otherwise, next chance ಕೊಡುವುದು ಇದ್ದರೆ.

ಅಧ್ಯಕ್ಷರು :- ನೆಕ್ಸ್ಟ್ ಮತ್ತೆ ನೀವು ಮಾತನಾಡಬೇಕಾ? ಇವತ್ತು ಬೇಡ.

ಶ್ರೀ ಎನ್. ರಾಜಣ್ಣ :- ಇದು ಹೆಲ್ತ್‌ಗೂ ಬರುತ್ತದೆ. ಆಮೇಲೆ ನಮ್ಮ ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟ್‌ಗೂ ಬರುತ್ತದೆ, If you want to give me next chance...

MR. SPEAKER :- You are going to speak on Animal Husbandry Department. That is my favourite subject, I will give time.

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಬೆಂಗಳೂರುಸಿಟಿ ಮೆಗಾಸಿಟಿಯೆಂದು ಹೇಳುತ್ತಿದ್ದೀರಿ. ಮುಂಚೆ ಬೆಂಗಳೂರು ಸಿಟಿ ಮುನಿಸಿಪಾಲಿಟಿ ಇತ್ತು, ಆಮೇಲೆ ನಗರಸಭೆಯಾಯಿತು ನಂತರ ಮಹಾನಗರಪಾಲಿಕೆಯಾಯಿತು. ಈಗ ಮೆಗಾ ಸಿಟಿಯೆಂದು ಟೈಟಲ್ ಮಾತ್ರ ಕೊಟ್ಟಿದ್ದೀರಿ. ಈ ಮೆಗಾಸಿಟಿಗೆ 805 ಕೋಟಿ ರೂಪಾಯಿ 5 ವರ್ಷದಿಂದ ಬರುವುದರಲ್ಲೇ ಇದೆ ಸಾರ್. ಅದು ಯಾವಾಗ ಬರುತ್ತದೋ ಏನೋ ಗೊತ್ತಿಲ್ಲ. ಆದಷ್ಟು ಬೇಗ ಬಂದರೆ ಸಿಟಿಯನ್ನು ಇಂಪ್ರೂವ್ ಮಾಡಬಹುದು. ಎರಡನೆಯದು ಐಪಿಪಿ ಪ್ರಾಜೆಕ್ಟ್‌ನಲ್ಲಿ 42 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಇದು ಐಪಿಪಿ 8ನೇ ಪ್ರಾಜೆಕ್ಟ್‌ನಲ್ಲಿ. ಈ ದೇಶದಲ್ಲಿ ಜನಸಂಖ್ಯೆಯ ಒತ್ತಡದಿಂದ ನಾವು ಮಾಡತಕ್ಕ ಕೆಲಸವೆಲ್ಲಾ ಅಂದರೆ ಇವತ್ತು ನಾವು ಏನೇ ಮಾಡಿದರೂ ಅದು ನುಚ್ಚುನೂರು ಆಗುತ್ತಿದೆ. ಯಾವುದೇ ಸರ್ಕಾರ ಬರಲಿ ಹೋಗಲಿ, because of over population. Over population is the major problem. ಸಾರ್, 1947 ನೇ ಇಸವಿಯಲ್ಲಿ ನಮ್ಮ ದೇಶದ ಜನಸಂಖ್ಯೆ 35 ಕೋಟಿ ಇತ್ತು. ಕರ್ನಾಟಕದಲ್ಲಿ 1 ಕೋಟಿ 20 ಲಕ್ಷ ಇತ್ತು. ಇವತ್ತು 4 ಕೋಟಿ 50 ಲಕ್ಷ ಇದೆ. ಇದರ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕು. ಸರ್ಕಾರ ಬರುತ್ತದೆ ಹೋಗುತ್ತದೆ. I have seen in one of the magazines, that between 1920 to 1930, there is no increase of population in this country. It was only 25 Crores. ಈ ತರಹ ಫಾಸ್ಟಾಗಿ ಜನಸಂಖ್ಯೆ ಬೆಳೆಯುತ್ತಿದ್ದರೆ ನಾವು ಮಾಡುವ ಕೆಲಸವೆಲ್ಲಾ ನುಚ್ಚುನೂರಾಗುತ್ತಿದೆ. ಅದು ಮುಂದಿನ ಪೀಳಿಗೆಗೂ ತೊಂದರೆ ಯಾಗುತ್ತದೆ. ಆದಷ್ಟು ಈ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ನಾವೆಲ್ಲಾ ಬಹಳ ಚಿಂತನೆ ಮಾಡಬೇಕು. Whether to make this family planning compulsory or leave it to the nature; let the nature control it for 20 years. Stop this immunisation programme for 20 years. ಇದು ಹೇಳಬಾರದು ಆದರೂ ಹೇಳುತ್ತಿದ್ದೇನೆ. ಏಕೆ ಹೇಳುತ್ತಿದ್ದೇನೆಂದರೆ Between 1920 to 1930, there was no increase in population. The population growth was controlled by the nature. ಪ್ರಕೃತಿ ಕಂಟ್ರೋಲ್ ಮಾಡುತ್ತದೆ ಸ್ವಾಮಿ. ಈಗ immunisation programme ಇದೆ. ಇದಕ್ಕೆ ದೊಡ್ಡ ಮನಸ್ಸು ಮಾಡಬೇಕಾಗುತ್ತದೆ. The Indian Medical Association ಅವರು ದೊಡ್ಡ ಮನಸ್ಸು ಮಾಡಬೇಕು. ಯಾವುದೋ ಸರ್ಕಾರ ಬರುತ್ತದೆ, ಹೋಗುತ್ತದೆ. ಅವರು ಒಂದು ದೊಡ್ಡ ಮನಸ್ಸು ಮಾಡಿದರೆ ಮಾತ್ರ ಇದು ಸಾಧ್ಯ. ಬೆಳಿಗ್ಗೆ ನೀರಿಗೆ ಹೋದರೆ ಅಲ್ಲಿ ಪ್ರಾಬ್ಲಮ್. ನನ್ನ ಏರಿಯಾದಲ್ಲಿ ಟಾಯಲೆಟ್ಟ್‌ಗೆ ಕ್ಯೂ. ಬಸ್ಸಿಗೆ ಹೋಗಬೇಕಾದರೆ ಅಲ್ಲಿ ಕ್ಯೂ. ಅಲ್ಲಿಂದ ಹೊರಗೆ ಹೋಗಬೇಕಾದರೆ ಅಲ್ಲಿ ಕ್ಯೂ. ಎಲ್ಲದಕ್ಕೂ ಕ್ಯೂ. ಸತ್ತ ಹೆಣ ತೆಗೆದುಕೊಂಡು ಹೋದರೆ ಅಲ್ಲೂ ಕ್ಯೂ. ಹೆಣ ತೆಗೆದುಕೊಂಡು ಹೋದರೆ ಅಲ್ಲಿ ಕ್ಯೂ ನಿಲ್ಲುವ ಪರಿಸ್ಥಿತಿ ಬಂದಿದೆ. ಸರ್ಕಾರ ಬರುತ್ತದೆ, ಹೋಗುತ್ತದೆ. ಎಲ್ಲರ ಮನಸ್ಸು ಒಂದಾಗ ಬೇಕು. We have to see that population growth must be curbed at any cost to save this Bharath Desh and save this City. Thank you very much Sir for giving he this opportunity to speak to day on the

demands for grants. ಇಷ್ಟು ಹೇಳಿ, ಮುಂದೆ ತಾವು ಅವಕಾಶ ಕೊಡುತ್ತೀರಿ ಎಂದು ಆಶಿಸಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಡಾ: ಎ. ಬಿ. ಮಲಕರೆಡ್ಡಿ (ಯಾದಗಿರಿ)** :- ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರವು ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ 1996-97 ನೇ ಸಾಲಿನ ಬೇಡಿಕೆ ಗಳನ್ನು ಸದನದ ಮುಂದಿಟ್ಟಿದೆ. ಸುಮಾರು 20 ಬೇಡಿಕೆಗಳು ಇವತ್ತು ಸದನದ ಮುಂದಿವೆ. ಅದರಲ್ಲಿ ನಾನು ಇವತ್ತು ಕೇವಲ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಬಗ್ಗೆ ಮಾತನಾಡಬಯಸುತ್ತೇನೆ. ಆದರೆ ಸಂಬಂಧಪಟ್ಟ ಸಚಿವರು ಈ ಸಭೆಯಲ್ಲಿ ಕಾಣುತ್ತಿಲ್ಲ...

ಅಧ್ಯಕ್ಷರು :- ವೈದ್ಯಕೀಯ ಶಿಕ್ಷಣ ಮಂತ್ರಿಗಳು ಏಕೆ ಬರಲಿಲ್ಲ?

ಡಾ: ಎ. ಬಿ. ಮಲಕರೆಡ್ಡಿ :- ಇವತ್ತು ನಾನು ಮುಂಜಾನೆ ಪತ್ರಿಕೆಯಲ್ಲಿ ಓದುತ್ತಿದ್ದೆ. ಇಲ್ಲಿ ಮಾನ್ಯ ಆರೋಗ್ಯ ಸಚಿವರು ತಮ್ಮ ಇಲಾಖೆಯ ವತಿಯಿಂದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ ಬಜೆಟ್‌ನಲ್ಲಿ 10 ಪರ್ಸೆಂಟ್ ಖರ್ಚು ಮಾಡುತ್ತಿದ್ದೇವೆ ಎಂದು. ಅದು ಸತ್ಯಕ್ಕೆ ದೂರವಾದುದು. ಬಜೆಟ್ಟಿನ 10 ಪ್ರತಿಶತ ಆರೋಗ್ಯ ಇಲಾಖೆಗೆ ನಾವು ಖರ್ಚುಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಆಲ್ ಇಂಡಿಯಾ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ಪ್ರತಿಯೊಂದು ರಾಜ್ಯದ ಆಯವ್ಯಯದ ಬಗ್ಗೆ ಗವರ್ನಮೆಂಟ್ ಆಫ್ ಇಂಡಿಯಾದವರು ಅಂಕಿ ಅಂಶಗಳ ಪುಸ್ತಕವನ್ನು ಪಬ್ಲಿಷ್ ಮಾಡಿದ್ದಾರೆ. ಅದರಲ್ಲಿ ಕರ್ನಾಟಕ ಕೇವಲ 3 ಪ್ರತಿಶತ ಖರ್ಚುಮಾಡಿತ್ತಿದೆ, ಅದು ಸಾಕಷ್ಟು ಪ್ರಮಾಣ ಆಗುವುದಿಲ್ಲ. ನ್ಯಾಷನಲ್ ಆವರೇಜ್ 5 ಪರ್ಸೆಂಟ್ ಇದೆ ಎಂದು ಹೇಳಿದ್ದಾರೆ. ಅದಕ್ಕಾಗಿ ಮಾನ್ಯ ಅರ್ಥ ಸಚಿವರೂ ಕೂಡ ಸಭೆಯಲ್ಲಿ ಇದ್ದಾರೆ. ಈ ಬಗ್ಗೆ ತಾವು ಸ್ವಲ್ಪ ಕಾಳಜಿ ವಹಿಸಬೇಕು. ಕಾರಣ ಇಷ್ಟೆ. 1978 ರಲ್ಲಿ ಅಲಮಾಟಾದಲ್ಲಿ ಒಂದು ಜಾಗತಿಕ ಸಮ್ಮೇಳನ ನಡೆಯಿತು. ಅದರಲ್ಲಿ ಇಂಡಿಯಾ ಕೂಡ ಸಹ ಸದಸ್ಯವಾಗಿತ್ತು. ಎರಡು ಸಾವಿರ ಇಸವಿಯಲ್ಲಿ ನಾವು ಎಲ್ಲಾ ನಾಗರೀಕರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆ ಎಂಬ ಕಮಿಟ್‌ಮೆಂಟ್ ಇತ್ತು. ಈ ಕಮಿಟ್‌ಮೆಂಟ್ ಮಾಡಿ 18 ವರ್ಷಗಳು ಆದವು. ಇದಕ್ಕೆ ಒಂದು ಯೋಜನೆಯನ್ನು ನಾವು ರೂಪಿಸಿದ್ದೇವೆ. ಆರೋಗ್ಯ ಆಡಳಿತ ವ್ಯವಸ್ಥೆ ಯಾವ ರೀತಿ ಇರಬೇಕು, ಯಾವ ರೀತಿ ವ್ಯವಸ್ಥೆ ಇದ್ದರೆ ಸಮಗ್ರ ನಾಗರಿಕರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸಿಕೊಡತಕ್ಕಂಥ ಸಾಧ್ಯತೆ ಆಗುತ್ತದೆ. ಅದಕ್ಕೆ ಒಂದು ಸ್ಟ್ರಕ್ಚರ್ ರಚನೆಯಾಗಬೇಕಾಗಿದೆ. ಈ ರಚನೆ ಪ್ರಕಾರ ಕರ್ನಾಟಕ ಕೂಡ ಅದನ್ನು ಸ್ವೀಕಾರ ಮಾಡಿ ಒಂದು ಒಳ್ಳೆಯ ಹೆಜ್ಜೆಯನ್ನು ಮುಂದಿಟ್ಟಿದೆ. ಅದಕ್ಕಾಗೀ ಅನೇಕ ಸಹಾಯ ಮಾಡತಕ್ಕಂಥ ಸಂಸ್ಥೆಗಳು ರಾಷ್ಟ್ರಮಟ್ಟದಲ್ಲಿ ಇರಬಹುದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಇರಬಹುದು. ವಿಶೇಷವಾಗಿ ನಾರ್ವೆ, ಡೆನ್ಮಾರ್ಕ್, ಜರ್ಮನಿಯಿಂದ ಮತ್ತು ವರ್ಲ್ಡ್ ಬ್ಯಾಂಕ್‌ನಿಂದ ಇಂತಹ ಅನೇಕ ಸಂಸ್ಥೆಗಳಿಂದ ಕರ್ನಾಟಕಕ್ಕೆ ಉತ್ತಮವಾದ ಸಹಾಯ ಬರುತ್ತಿದೆ. ಏಕೆಂದರೆ ಆರೋಗ್ಯ ಇಲಾಖೆಯನ್ನು ಸುಧಾರಣೆ ಮಾಡುವುದಕ್ಕೆ ನಮ್ಮಲ್ಲಿ ಸಾಕಷ್ಟು ಹಣ ಇಲ್ಲ. ನಾನು ಆರೋಗ್ಯ

ಮಂತ್ರಿಯಾಗಿ ಸ್ವಲ್ಪ ಸಮಯ ಇದ್ದೆ. ಆ ಕಾಲಕ್ಕೆ ಒಂದು ಸಾವಿರ ಕೋಟಿಗಿಂತಲೂ ಮೇಲ್ಪಟ್ಟು ಸಹಾಯಧನವನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದೆ. ಈಗ ಸುಮಾರು ಆರೇಳು ಏಜೆನ್ಸಿಗಳೊಡನೆ ಸಹಿ ಹಾಕಿದ್ದೇವೆ. ಅದನ್ನು ಸದುಪಯೋಗ ಮಾಡಿಕೊಂಡರೆ ಕರ್ನಾಟಕರಾಜ್ಯದ ಜನರಿಗೆ ಬಹಳ ಪ್ರಯೋಜನ ಆಗುತ್ತದೆ. ಈ ಅಂತರರಾಷ್ಟ್ರೀಯ ಸಹಾಯ ಸಂಸ್ಥೆಗಳು ಕರ್ನಾಟಕವನ್ನೇ ಏಕೆ ಆರಿಸಿಕೊಂಡವು? ಮಹಾರಾಷ್ಟ್ರದಂಥ ದೊಡ್ಡ ದೊಡ್ಡ ಅನೇಕ ರಾಜ್ಯಗಳು ಇವೆ. ಆದರೂ ಕೂಡ ಅವರು ಕರ್ನಾಟಕರಾಜ್ಯವನ್ನೇ ಆರಿಸಿಕೊಂಡಿರುವುದಕ್ಕೆ ಕಾರಣವೇನೆಂದರೇ, ಇಲ್ಲಿ ಆರೋಗ್ಯ ಆಡಳಿತ ವ್ಯವಸ್ಥೆ ಬಹಳ ಚೆನ್ನಾಗಿ ಇದೆ. ಸುಮಾರು 1936 ನೇ ಇಸವಿಯಿಂದ, ಸ್ವಾತಂತ್ರ್ಯ ಬಂದಮೇಲೆ ಅಲ್ಲ, 1936ನೇ ಇಸವಿಯಿಂದ ಕರ್ನಾಟಕದಲ್ಲಿ, ಮೈಸೂರು ರಾಜ್ಯದಲ್ಲಿ ಒಂದು ಉತ್ತಮ ಆರೋಗ್ಯ ಆಡಳಿತ ವ್ಯವಸ್ಥೆ ಇದೆಯೆಂದು ಹೇಳಿ ಇಲ್ಲಿ ಹಣ ಕೊಟ್ಟರೆ ಸದುಪಯೋಗ ವಾಗುತ್ತದೆ ಎನ್ನುವ ದೃಷ್ಟಿಯಿಂದ ಬಹಳ ಹೆಚ್ಚಿನ ಪ್ರಮಾಣದಲ್ಲಿ 40-50 ವರ್ಷಗಳಿಂದ ಕರ್ನಾಟಕಕ್ಕೆ ಸಹಾಯ ಬರುತ್ತಿದೆ. ಆದರೆ ಈ ಒಂದು ಸ್ಟ್ರಕ್ಚರ್ ಏನಿದೆ, ಆರೋಗ್ಯ ಆಡಳಿತ ವ್ಯವಸ್ಥೆ ಏನಿದೆ ಅದರ ಕಡೆಗೆ ಕಾಳಜಿ ವಹಿಸಬೇಕಾಗಿದೆ. ನಾವು ಹೆಚ್ಚು ಹಣವನ್ನು ಪಟ್ಟಣ ಮಟ್ಟದಲ್ಲಿ, ರಾಜಧಾನಿ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಖರ್ಚು ಮಾಡುತ್ತಿದ್ದೇವೆಯೇ ವಿನಃ ಗ್ರಾಮಾಂತರ ಮಟ್ಟದಲ್ಲಿ ಎಷ್ಟು ಹಣ ಖರ್ಚುಮಾಡಬೇಕಾಗಿತ್ತೋ ಅಷ್ಟು ಹಣವನ್ನು ಖರ್ಚು ಮಾಡುತ್ತಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು ನೋಡಿದರೆ, 25 ಸಾವಿರ ಜನರಿಗೆ ಒಂದು ಪ್ರೈಮರಿ ಹೆಲ್ತ್ ಸೆಂಟರ್ ಎಂದು ನಾವು ಮಾಡುತ್ತೇವೆ. ಈ ಒಂದು ಇಲಾಖೆಯಲ್ಲಿ 5 ಸಾವಿರ ಜನಸಂಖ್ಯೆಗೆ ಒಂದು ಉಪ ಆರೋಗ್ಯ ಕೇಂದ್ರ, 25 ಸಾವಿರ ಜನರಿಗೆ ಒಂದು ಆರೋಗ್ಯ ಕೇಂದ್ರ ಇದೆ. ಇಲ್ಲಿ ಔಷಧಿಗಾಗಿ ಕೊಡುತ್ತಿರತಕ್ಕಂಥಾದ್ದು ಕೇವಲ 50 ಸಾವಿರ. 25 ಸಾವಿರ ಅನ್ನು ಈಗ 30 ಸಾವಿರ ಎಂದು ಮಾಡಿದ್ದಾರೆ. 30ಸಾವಿರಕ್ಕೆ 50 ಸಾವಿರ ರೂಪಾಯಿ ಕೊಟ್ಟರೆ ಕೇವಲ ಒಬ್ಬರಿಗೆ 1 ರೂಪಾಯಿ 60 ಪೈಸೆಯಾಗುತ್ತದೆ. ಒಂದು ವರ್ಷಕ್ಕೆ ಒಬ್ಬ ವ್ಯಕ್ತಿಗೆ, ನಾವು ಗ್ರಾಮಾಂತರ ಪ್ರದೇಶದ ಜನರ ಹೆಸರಿನ ಮೇಲೆ ಅನೇಕ ಯೋಜನೆಗಳನ್ನು ಹಾಕಿಕೊಳ್ಳುತ್ತೇವೆ. ಅವರ ಓಟಿನಿಂದ ಆರಿಸಿಬರುತ್ತೇವೆ. ಆದರೆ ಅವರ ಆರೋಗ್ಯ ಸಂರಕ್ಷಣೆಗೆ, ರೋಗಗಳ ನಿವಾರಣೆಗೆ ನಾವು ಕೊಡತಕ್ಕಂಥಾದ್ದು ಕೇವಲ ಒಂದು ವರ್ಷಕ್ಕೆ ಒಬ್ಬ ವ್ಯಕ್ತಿಗೆ 1 ರೂಪಾಯಿ 60 ಪೈಸೆ ಮಾತ್ರ. ಹಾಗಿದ್ದಾಗ ನಾವು ಯಾವರೀತಿ ಆಡಳಿತ ವ್ಯವಸ್ಥೆಯನ್ನು ನಡೆಸುತ್ತಿದ್ದೇವೆ ಎಂಬ ಮಾತನ್ನು ಸ್ವಲ್ಪ ಆತ್ಮಾವಲೋಕನ ಮಾಡಿಕೊಳ್ಳಬೇಕು. ಅದಕ್ಕಾಗಿ ಈ ಹೆಲ್ತ್ ಡೆಲಿವರಿ ಸಿಸ್ಟಮ್ ಏನಿದೆ ಅದರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕಾಗಿದೆ. ಕೆಳಮಟ್ಟದಲ್ಲಿ ಈಗ ಐದು ಸಾವಿರ ಜನರಿಗೆ ಒಂದು ಆರೋಗ್ಯ ಉಪ ಕೇಂದ್ರ ಇದೆ. ಈ ಉಪ ಕೇಂದ್ರದಲ್ಲಿ ಕೆಲಸ ಮಾಡತಕ್ಕಂಥವರು ಜೂನಿಯರ್ ಹೆಲ್ತ್ ವರ್ಕರ್ಸ್, ಸೀನಿಯರ್ ಹೆಲ್ತ್ ವರ್ಕರ್ಸ್. ಇದು ಕೇವಲ ಹೆಸರಿಗೆ ಮಾತ್ರ ಈ ಉಪ ಕೇಂದ್ರಗಳು ಇವೆ. ಆದರೆ ಅಲ್ಲಿ ಕೆಲಸ ಮಾಡತಕ್ಕಂಥ ಆರೋಗ್ಯ ಕಾರ್ಯಕರ್ತರು ಮಾತ್ರ ಯಾರೂ ಇರುವುದಿಲ್ಲ. ಕಾರಣ ಇಷ್ಟೆ. ಸರ್ಕಾರದಲ್ಲಿ ವರ್ಷವರ್ಷ ಸರ್ಕಾರದ ಸಿಬ್ಬಂದಿ ರಿಟೈರ್ ಆಗುತ್ತಿರುತ್ತಾರೆ.

1988 ರಿಂದ ಇಲ್ಲಿಯವರೆಗೆ ರಿಕ್ರೂಟ್‌ಮೆಂಟ್ ಆಗಿಲ್ಲ. ಈಗ ಏನೋ ಪ್ರಾರಂಭ ಮಾಡಿದ್ದಾರೆ. ಈ ಬಗ್ಗೆ ಸತತವಾಗಿ ಈ ಸದನದಲ್ಲಿ ಚರ್ಚೆ ಅನೇಕ ದಿವಸಗಳಿಂದ ಆಗುತ್ತಿದೆ. ಬೇರೆ ಬೇರೆ ವಿವಿಧ ಹಂತದಲ್ಲಿ ಸರ್ಕಾರದ ಮೇಲೆ ಒತ್ತಡ ತಂದಾಗ ಈಗ ರಿಕ್ರೂಟ್‌ಮೆಂಟ್ ಈ ವರ್ಷ ಪ್ರಾರಂಭವಾಗಿದೆ. ಸುಮಾರು 8,800 ಸಿಬ್ಬಂದಿ ಕೊರತೆ ಈ ಇಲಾಖೆಯಲ್ಲಿದೆ. ಹೀಗಿದ್ದಾಗ ಯಾವ ರೀತಿ ಜನರಿಗೆ ಆರೋಗ್ಯ ಒದಗಿಸಿಕೊಡುತ್ತಾರೆ ಎಂಬುದರ ಬಗ್ಗೆ ಮಾನ್ಯ ಅರ್ಥಮಂತ್ರಿಗಳೂ ಆಗಿರುವ ಮಾನ್ಯ ಉಪ ಮುಖ್ಯಮಂತ್ರಿಗಳು ಸ್ವಲ್ಪ ಗಮನ ಕೊಡಬೇಕು. ನಾನು ಆರೋಗ್ಯಮಂತ್ರಿ ಇದ್ದಾಗ ಅನೇಕ ಸಲ ಆರೋಗ್ಯ ಕಾರ್ಯದರ್ಶಿಯವರನ್ನು ಭೆಟ್ಟಿಯಾಗಿ, ಆರ್ಥಿಕ ಕಾರ್ಯದ ರ್ಶಿಯವರನ್ನು ಭೆಟ್ಟಿಯಾಗಿ, ಅವರ ಮನವೊಲಿಸಿದರೆ ಅವರು ಕೇವಲ ಎರಡು ಸಾವಿರ ಜನರಿಗೆ ನೇಮಕ ಮಾಡುವುದಕ್ಕೆ ಪರವಾನಗಿಯನ್ನು ಕೊಟ್ಟರು. ಈಗ ಎಷ್ಟು ಸಿಬ್ಬಂದಿ ನೇಮಕ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದಾರೆಂದು ಗೊತ್ತಿಲ್ಲ. ತಾವು ಇದು ತುರ್ತು ಸೇವೆಯನ್ನು ಕೊಡತಕ್ಕಂಥ ಈ ಇಲಾಖೆಯಲ್ಲಿ ಎಷ್ಟು ವೆಕೆನ್ಸಿಗಳು ಇವೆ, ಅಷ್ಟು ವೆಕೆನ್ಸಿಗಳಿಗೆ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ತಾವು ಪರವಾನಗಿ ಕೊಡಬೇಕು. ಈ ಎಂಟು ಸಾವಿರ ಸಿಬ್ಬಂದಿ ನೇಮಕ ಮಾಡಿದರೆ ಸರಿಹೋಗುವುದಿಲ್ಲ. ಏಕೆಂದರೆ ಪ್ರತಿವರ್ಷ ನಾವು 60-70 ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ಹಾಸಿಗೆ ಪ್ರಮಾಣ ಹೆಚ್ಚು ಮಾಡುತ್ತಿದ್ದೇವೆ. 30 ಇರುವುದನ್ನು ನೂರು ಮಾಡುತ್ತಿದ್ದೇವೆ, 50 ಮಾಡುತ್ತಿದ್ದೇವೆ. ಈ ಪ್ರಮಾಣ ಹೆಚ್ಚಾದಹಾಗೆ ಸಿಬ್ಬಂದಿ ವರ್ಗದ ಪ್ರಮಾಣ ಕೂಡ ಹೆಚ್ಚಾಗಬೇಕಾಗುತ್ತದೆ. ಈ ಪ್ರಮಾಣಕ್ಕೆ ನೀವು ಬಂದಿಲ್ಲ. ಉದಾಹರಣೆಗೆ ಹೇಳುತ್ತೇನೆ. ಗುಲ್ಬರ್ಗಾದಲ್ಲಿ ಸಂಖ್ಯೆ ಪ್ರಕಾರ 120 ಜನ ನರ್ಸಸ್ ಇರಬೇಕು. ಆದರೆ ಅಲ್ಲಿ ಕೆಲಸ ಮಾಡತಕ್ಕಂಥವರು 64 ಜನ ಮಾತ್ರ. ಈಗ ನನ್ನ ಮತಕ್ಷೇತ್ರ ಯಾದಗಿರ್‌ನಲ್ಲಿ ಕೇವಲ ನಾಲ್ಕು ಜನ ಸಿಸ್ಟರ್ಸ್ ಕೆಲಸ ಮಾಡುತ್ತಿದ್ದಾರೆ. ಈಗ ನೂರು ಬೆಡ್‌ಗೆ ಏರಿಸಿದ್ದಾರೆ. ಇಷ್ಟು ಏರಿಸಿದ ಮೇಲೆ ಆ ಪ್ರಮಾಣಕ್ಕೆ ಸರಿಯಾಗಿ ಸಿಬ್ಬಂದಿ ಸಂಖ್ಯೆ ಇರಬೇಕಾಗುತ್ತದೆ. ಅದನ್ನು ಮಾಡಿಲ್ಲ. ಈಗ 8 ಸಾವಿರವಿರುವ ಸಿಬ್ಬಂದಿ ಬದಲಿಗೆ 12 ಸಾವಿರ ನೇಮಕ ಮಾಡಿಕೊಂಡರೆ ನಾವು ಸರಿಯಾದ ಪ್ರಮಾ ಣದಲ್ಲಿ ಸೇವೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಆರೋಗ್ಯ ಇಲಾಖೆಯ ಕಡೆಗೆ ಮಾನ್ಯ ಅರ್ಥಮಂತ್ರಿಗಳು ವಿಶೇಷ ಲಕ್ಷ್ಯ ವಹಿಸಿ ಅದರ ಕಡೆಯಿಂದ, ಆರೋಗ್ಯ ಇಲಾಖೆಯಿಂದ ಬಂದಂಥ ಬೇಡಿಕೆಯನ್ನು ಈಡೇರಿಸಬೇಕೆಂದು ಕೇಳಿಕೊಂಡು ನಾನು ಮನವಿಮಾಡುಕೊಳ್ಳುತ್ತೇನೆ. ಈ ಉಪ ಆರೋಗ್ಯ ಪ್ರಾಥಮಿಕ ಕೇಂದ್ರಗಳನ್ನು ನಾವು ಸ್ಥಾಪನೆ ಮಾಡುತ್ತೇವೆ. ಇವತ್ತು ಯಾವ ಶಾಸಕರೂ ಕೂಡ ಹೇಳುಕೊಳ್ಳುತ್ತಾ ಇಲ್ಲ. ಹೇಳತಕ್ಕಂಥ ಪರಿಸ್ಥಿತಿ ಇಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳು ಕೆಲಸ ಮಾಡುತ್ತಿದ್ದಾರೆ ಎಂದು. ಆದರೆ, ಯಾರೂ ಕೆಲಸ ಮಾಡುತ್ತಾ ಇಲ್ಲ. ಒಂದುವೇಳೆ ಅಂಕಿ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದರೂ ಕೂಡ, ರೋಸ್ಟರಿನಲ್ಲಿ ಮಾತ್ರ ಪ್ರೈಮರಿ ಹೆಲ್ತ್ ಸೆಂಟರ್ ಎಂದು ಹೇಳುತ್ತಾರೆಯೇ ಹೊರತಾಗಿ ಅವು ಇರತಕ್ಕಂಥಾದ್ದು ಕೇವಲ ಪಟ್ಟಣಗಳಲ್ಲಿ. ಗ್ರಾಮಾಂತರ ಪ್ರದೇಶಗಳಲ್ಲಿ ಯಾರೂ ಕೆಲಸ ಮಾಡುತ್ತಾ ಇಲ್ಲ. ಅವರ

ಮೇಲೆ ಕಂಟ್ರೋಲ್ ಮಾಡುವುದಕ್ಕೆ ಯಾರಿಂದಲೂ ಸಾಧ್ಯವೂ ಇಲ್ಲ. ಈ ರೀತಿ ಏಕೆ ಆಗುತ್ತಿದೆ, ಇದಕ್ಕೆ ಕಾರಣ ಇಷ್ಟೆ. ನಾವು ಪ್ರೈಮರಿ ಹೆಲ್ತ್ ಸೆಂಟರನ್ನು ಸ್ಥಾಪನೆ ಮಾಡುತ್ತೇವೆ. ಆದರೆ, ಅಲ್ಲಿ ಡಾಕ್ಟರು ಇಳಿದುಕೊಳ್ಳುವುದಕ್ಕೆ ವಸತಿ ವ್ಯವಸ್ಥೆಯನ್ನು ಮಾಡುತ್ತಾ ಇಲ್ಲ. ಈ ವಿಷಯವನ್ನು ಆರೋಗ್ಯ ಸಂಸ್ಥೆಯವರು, ವರ್ಲ್ಡ್ ಹೆಲ್ತ್ ಆರ್ಗನೈಸೇಷನ್‌ನವರು, ವರ್ಲ್ಡ್ ಬ್ಯಾಂಕಿನವರು ಪ್ರತಿಯೊಬ್ಬರೂ ಈ ಪಾಯಿಂಟನ್ನು ಸ್ಟೆಸ್ ಮಾಡುತ್ತಿದ್ದಾರೆ. ಆದರೆ, ಸರ್ಕಾರದವರು ಆ ಕಡೆ ಲಕ್ಷ್ಯ ವಹಿಸುತ್ತಾ ಇಲ್ಲ. ನಾವು ಪ್ರೈಮರಿ ಹೆಲ್ತ್ ಸೆಂಟರ್ ಸ್ಥಾಪನೆ ಮಾಡುತ್ತೇವೆ. ಆಸ್ಪತ್ರೆ ಕಟ್ಟಡಕ್ಕೆ ಯಾವರೀತಿ ಹಣ ಕೊಡುತ್ತೇವೆ, ಅದೇ ಸಮಯದಲ್ಲಿ ಡಾಕ್ಟರುಗಳ ವಸತಿಗಾಗಿಯೂ ವ್ಯವಸ್ಥೆ ಮಾಡುವುದಕ್ಕೆ, ಕಟ್ಟಡಕ್ಕಾಗಿ ಹಣವನ್ನು ಒದಗಿಸಿಕೊಡಬೇಕು. ಡಾಕ್ಟರುಗಳಿಗೆ ವಸತಿ ಸೌಕರ್ಯ ಮಾಡಿದರೆ, ಅವರು ಆ ಸಂಸ್ಥೆಯಲ್ಲಿ ಕೆಲಸ ಮಾಡಲು ಅನುಕೂಲವಾ ಗುತ್ತದೆ. ಮತ್ತು ಎಲ್ಲೆಲ್ಲಿ ಕಟ್ಟಡಗಳನ್ನು ಕೊಟ್ಟಿದ್ದೇವೆ. ನಾವು ಒಂದುಸಲ ಕಟ್ಟಡ ಕೊಟ್ಟಿದ್ದೇವೆಂದು ತೃಪ್ತಿಪಟ್ಟುಕೊಂಡರೆ ಸಾಲದು. ಕಟ್ಟಡದ ರಿಪೇರಿಗಾಗಿ ನಾವು ಎಳ್ಳಷ್ಟು ಲಕ್ಷ್ಯ ವಹಿಸುತ್ತಾ ಇಲ್ಲ. ಅವು ಸೋರುತ್ತಾ ಇರುತ್ತವೆ. ಆ ಕಟ್ಟಡಗಳ ಕಿಟಕಿಗಳು ಹಾಳಾಗಿರುತ್ತವೆ. ಆಪರೇಷನ್ ಥಿಯೇಟರ್ ಇರುತ್ತದೆ, ನೂರಾರು ಕಡೆ ಅವು ಸೋರು ತ್ತಿರುತ್ತದೆ. ನೀವು ಯಾವುದೇ ಪ್ರೈಮರಿ ಹೆಲ್ತ್ ಸೆಂಟರ್ ತೆಗೆದುಕೊಳ್ಳಿ. ಇವತ್ತು ಟ್ಯೂಬೆಕ್ಟಮಿ ಮಾಡಬೇಕಾದರೆ, ಯಾವುದೇ ಸಣ್ಣಪುಟ್ಟ ಶಸ್ತ್ರಚಿಕಿತ್ಸೆ ಮಾಡಬೇಕಾದರೆ ಆಪರೇಷನ್ ಥಿಯೇಟರ್ ಬಹಳ ಅವಶ್ಯವಿದೆ. ಅಲ್ಲಿಗೆ ನಾವು ಕ್ವಾಲಿಫೈಡ್ ಡಾಕ್ಟರು ಗಳನ್ನು ನೇಮಕ ಮಾಡುತ್ತೇವೆ. ಆದರೆ, ಆಪರೇಷನ್ ಮಾಡತಕ್ಕ ಥಿಯೇಟರಿನಲ್ಲಿ ಸಾಕಷ್ಟು ಸೌಲಭ್ಯಗಳು ಇರುವುದಿಲ್ಲ. ಮತ್ತು ಆ ಕಟ್ಟಡ ಕೂಡ ಸೂಕ್ತಮಟ್ಟದಲ್ಲಿ ಇರುವುದಿಲ್ಲ. ಸೂಕ್ತವಾದ ರೀತಿಯಲ್ಲಿ ನಮ್ಮಿಂದ ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಆದಕ್ಕಾಗಿ ಈ ಕಡೆ ಆರೋಗ್ಯಮಂತ್ರಿಗಳು ಅಥವಾ ಸಂಬಂಧಪಟ್ಟ ಇಲಾಖೆಯವರು ಲಕ್ಷ್ಯ ಕೊಡಬೇಕು. ಈಗ ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆ. ತಾಲ್ಲೂಕ್ ಆಸ್ಪತ್ರೆಯಲ್ಲಿ, ನಾವು ಯಾವುದನ್ನು ಕಮ್ಯುನಿಟಿ ಹೆಲ್ತ್ ಸೆಂಟರ್ ಎಂದು ಕರೆಯುತ್ತೇವೆ. ಅಲ್ಲಿ ಕನಿಷ್ಟಪಕ್ಷ 30 ಹಾಸಿಗೆಗಳು ಇರುತ್ತವೆ. ಅಲ್ಲಿಗೆ 4 ಸ್ಪೆಷಲಿಸ್ಟ್ ಸರ್ವೀಸಸ್ ಕೊಡಬೇಕೆಂದು ಆದಕ್ಕೆ ನಾವು ಅನುಮತಿ ಕೊಟ್ಟಿದ್ದೇವೆ. ಸರ್ಕಾರ ಆ ರೀತಿ ಹಣದ ವ್ಯವಸ್ಥೆ ಕೂಡ ಮಾಡಿದೆ. ಅವರು ಯಾರೆಂದರೆ, ಜನರಲ್ ಫಿಜಿಷಿಯನ್, ಜನರಲ್ ಸರ್ಜನ್, ಗೈನೋಕಾಲಜಿಸ್ಟ್, ಮತ್ತು ಡೆಂಟಿಸ್ಟ್. ಯಾವ ತಾಲ್ಲೂಕು ಆಸ್ಪತ್ರೆಗಳಲ್ಲೂ ಕೂಡ ಈ 4 ಸ್ಪೆಷಲಿಸ್ಟ್‌ಗಳಿಗೆ ಸಂಬಂಧಪಟ್ಟಂತೆ, ಡಾಕ್ಟರುಗಳು ಸಿಗುವುದಿಲ್ಲ. ಎಲ್ಲಾ ಜನರೂ, ಈ ಸ್ಪೆಷಲಿಸ್ಟ್ ಏನಿರುತ್ತಾರೆ, ಜಿಲ್ಲಾ ಆಸ್ಪತ್ರೆಗಳಲ್ಲೇ ಕಾನ್‌ಸೆಂಟ್ರೇಟ್ ಆಗಿ ರುತ್ತಾರೆ. ಅಥವಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಗರಗಳಲ್ಲಿ ಇರುತ್ತಾರೆ. ಹೋದಸಲ ನಾನು ಆರೋಗ್ಯ ಮಂತ್ರಿ ಇದ್ದಾಗ, ಅಧಿಕಾರಿಗಳು ಮತ್ತು ನಾವು, ಎಲ್ಲರೂ ಕೂಡಿ ಕೆಲಸ ಮಾಡಿ, ಸುಮಾರು ಸತತ 3 ತಿಂಗಳು ಪ್ರಯತ್ನ ಮಾಡಿ ಯಾವ ಆರೋಗ್ಯ ಸಂಸ್ಥೆಗಳಲ್ಲಿ, ಯಾವ ಮಟ್ಟದಲ್ಲಿ ಡಾಕ್ಟರುಗಳು ಇರಬೇಕೆಂಬುದನ್ನು ಅಂದಾಜು ಮಾಡಿ, ಒಂದು ಹೊಸ ಸ್ಕೀಮ್ ಪ್ರಕಾರ ಅವರು ಪ್ರಮೋಷನ್‌ಆಗಿ ಹೆಚ್ಚಿನ ಸಂಬಳ ತೆಗೆದುಕೊಳ್ಳುತ್ತಿದ್ದಾರೆ, ಎರಡು ಇಂಕ್ರಿಮೆಂಟ್ ತೆಗೆದುಕೊಂಡು, ಸಂಬಳ ಹೆಚ್ಚು

ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಎಲ್ಲಿ ಕೆಲಸ ಮಾಡಬೇಕೋ ಅಲ್ಲಿ ಕೆಲಸ ಮಾಡುತ್ತಾ ಇಲ್ಲ. ಉದಾಹರಣೆಗೆ ಹೇಳಬೇಕಾಗದರೆ, ಮಂಗಳೂರಿನಲ್ಲಿ, ಇಬ್ಬರು ಸೂಪರ್ ಸ್ಪೆಷಲಿಸ್ಟ್ ಪ್ರೈಮರಿ ಹೆಲ್ತ್ ಸೆಂಟರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಏಕೆಂದರೆ, ಅವರು ಜಿಲ್ಲಾ ಆಸ್ಪತ್ರೆಗೆ ಬರುವುದಕ್ಕೆ ಅಥವಾ ಟೀಚಿಂಗ್ ಆಸ್ಪತ್ರೆಗೆ ಬರುವುದಕ್ಕೆ ಅವರಿಗೆ ಇನ್‌ಫ್ಲೂಯೆನ್ಸ್ ಇಲ್ಲ. ಅದಕ್ಕಾಗಿಯೇ, ಒಂದು ವ್ಯವಸ್ಥಿತವಾದ ರೀತಿಯಲ್ಲಿ ಗವರ್ನಮೆಂಟ್ ಆಫ್ ಇಂಡಿಯಾದಿಂದ ಒಂದು ಆರ್ಡರನ್ನು ಹೊರಡಿಸಿ, ಸ್ಪೆಷಲಿಸ್ಟ್ ಯಾವ ಹಂತದಲ್ಲಿರಬೇಕು, ಸೂಪರ್ ಸ್ಪೆಷಲಿಸ್ಟ್ ಯಾವ ಹಂತದಲ್ಲಿರಬೇಕು ಮತ್ತು ಸಾಮಾನ್ಯ ಆರೋಗ್ಯ ಅಧಿಕಾರಿ ಯಾವ ಮಟ್ಟದಲ್ಲಿರಬೇಕೆಂದು ತಿಳಿದುಕೊಂಡು ಅವರ ಕರ್ತವ್ಯಗಳನ್ನು ವಿಂಗಡಣೆ ಮಾಡಿ, ಸೇವೆಯ ಜೇಷ್ಠತೆ ಮೇರೆಗೆ, ಒಂದು ಹೊಸ ಸ್ಕೀಮ್‌ನ್ನು ಇಂಟ್ರಡ್ಯೂಸ್ ಮಾಡಿ, ಸುಮಾರು 2003 ಜನರಿಗೆ ಪ್ರಮೋಷನ್ ಮಾಡಿ, ಆ ಟ್ರಾನ್ಸ್‌ಫರ್ ಆರ್ಡರ್ ಕೂಡ ರೆಡಿಯಾಗಿತ್ತು. ಆದರೆ, ಅದು ಒಂದೆರಡು ತಿಂಗಳು ತಡವಾಗಿದ್ದಕ್ಕಾಗಿ, ಆಗಸ್ಟ್ ತಿಂಗಳಲ್ಲಿ ಅದು ಜಾರಿಗೆ ಬಂದುದಕ್ಕಾಗಿ, ಅದು ಮುಂದಿನ ವರ್ಷ ಅಕಾಡೆಮಿಕ್ ಇಯರ್ ಏಪ್ರಿಲ್‌ನಲ್ಲಿ ಇದನ್ನು ಜಾರಿ ಮಾಡಬೇಕೆಂದು ಹೇಳಿ ಆ ಆರ್ಡರನ್ನು ತಡೆಹಿಡಿಯಲಾಗಿತ್ತು. ಈ ಸರ್ಕಾರ ಬಂದು ಸುಮಾರು ಒಂದೂವರೆ ವರ್ಷವಾದರೂ ಕೂಡ, ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ. ಹಾಗಾಗಿ, ಇವತ್ತು ಸ್ಪೆಷಲಿಸ್ಟ್ಸ್ ಏನಿದ್ದಾರೆ, ಅವರು ಇವತ್ತು ತಾಲ್ಲೂಕು ಮಟ್ಟದಲ್ಲೂ ಕೂಡ ಸ್ಪೆಷಲಿಸ್ಟ್ಸ್ ಸಿಕ್ಕುತ್ತಾ ಇಲ್ಲ. ಒಂದು ಸಣ್ಣಪುಟ್ಟ ಆಪರೇಷನ್ ಆಗಬೇಕಾದರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರು ಜಿಲ್ಲಾ ಆಸ್ಪತ್ರೆಗೆ ಬರಬೇಕು. ಈ ಒಂದು ಹೊಸ ಸ್ಕೀಮ್ ಏನಿದೆ, ಸೇವಾ ಜೇಷ್ಠತೆ ಮತ್ತು ಅವರ ಸ್ಪೆಷಾಲಿಟಿ ಕ್ವಾಲಿಫಿಕೇಷನ್‌ಗೆ ಅನುಗುಣವಾಗಿ, ಅವರನ್ನು ಆಯಾ ಮಟ್ಟಕ್ಕೆ ತಾವು ನೇಮಕ ಮಾಡಬೇಕು. ಮತ್ತು ಅವರನ್ನು ಪೋಸ್ಟಿಂಗ್ ಮಾಡಬೇಕೆಂದು ನಾನು ಸಂಬಂಧಪಟ್ಟ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಭಾರತದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸಾಕಷ್ಟು ಪ್ರಮಾಣದಲ್ಲಿ ನಾವು ಅಭಿವೃದ್ಧಿಯನ್ನು ಮಾಡುತ್ತಾ ಇದ್ದೇವೆ. ಆದರೆ, ಬಡತನ ರೇಖೆಯಲ್ಲಿ, ಅಥವಾ ರೇಖೆಯ ಕೆಳಗೆ ಇರತಕ್ಕ ಜನರಪ್ರಮಾಣ ಮಾತ್ರ ಕಡಿಮೆಯಾಗುತ್ತಾ ಇಲ್ಲ. ಇದಕ್ಕೆ ನಮ್ಮ ಹವಾನಿಯಂತ್ರಿತ ಜನಸಂಖ್ಯೆಯ ಧೋರಣೆಯೇ ಕಾರಣ. ಇತ್ತೀಚಿನ ದಿನಗಳಲ್ಲಿ ಬಹಳ ಕಳವಳಕಾರಿ. ನಾವು ಈ ಜನಸಂಖ್ಯೆಯ ಏರಿಕೆ ಪ್ರಮಾಣದಲ್ಲಿ ಬಹಳ ಕಳವಳವನ್ನುಂಟುಮಾಡತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಚೈನಾ ದೇಶದಲ್ಲಿ ಜನಸಂಖ್ಯೆ ನಿಯಂತ್ರಣವನ್ನು ಇತ್ತೀಚಿನ ದಿನಗಳಲ್ಲಿ ಪ್ರಾರಂಭ ಮಾಡಿದ್ದಾರೆ. ಅವರು ಪ್ರಾರಂಭ ಮಾಡಿ ಸುಮಾರು 15 ವರ್ಷವಾಯಿತು. ಈ 15 ವರ್ಷದಲ್ಲಿಯೇ ಅವರು ಜನಸಂಖ್ಯೆಯ ಏರಿಕೆ ಪ್ರಮಾಣವನ್ನು ಶೂನ್ಯ ಪ್ರಮಾಣಕ್ಕೆ ತಂದಿರಿಸಿದ್ದಾರೆ. ಆದರೆ, ನಾವು ಸುಮಾರು 40-50 ವರ್ಷಗಳಿಂದ ಇದಕ್ಕೆ ಅನೇಕ ಕೋಟಿ ರೂಪಾಯಿಗಳನ್ನು ಖರ್ಚುಮಾಡಿತ್ತಿದ್ದರೂ ಕೂಡ ಜನಸಂಖ್ಯೆಯ ಪ್ರಮಾಣ ಕಡಿಮೆಯಾಗುತ್ತಲೇ ಇಲ್ಲ. ಏನೋ ಮಾರ್ಜಿನ್‌ನಲ್ಲಿ 5 ಪರ್ಸೆಂಟ್ ಕಡಿಮೆಯಾಗಿರಬಹುದು. ಜನ ಸಂಖ್ಯಾ ಶಾಸ್ತ್ರಜ್ಞರು ಹೇಳುತ್ತಾ ಇದ್ದಾರೆ.

MR. SPEAKER :- What is the political system and economic order prevailing in China?

ಡಾ: ಎ. ಬಿ. ಮಾಲಕರೆಡ್ಡಿ :- ಇದಕ್ಕೆ ಎರಡು ವಿಧಾನ ಇದೆ. ಒಂದು ಕಡ್ಡಾಯದ ಶಸ್ತ್ರಚಿಕಿತ್ಸೆ, ಎರಡನೆಯದು ಪ್ರಿವೆಂಟೀವ್ ಮೆಷರ್ಸ್, ನಿರುತ್ತೇಜಕ ಕಾರ್ಯಕ್ರಮ ಹಾಕಿಕೊಳ್ಳುವುದು. ಈ ನಿರುತ್ತೇಜಕ ಕಾರ್ಯಕ್ರಮ ಎಂದರೇನು? ಇತ್ತೀಚಿಗೆ ಅನೇಕ ಕಡೆ ರಾಷ್ಟ್ರಮಟ್ಟದಲ್ಲಿಯೂ ಇದರ ಬಗ್ಗೆ ಸಿಂಪೋಸಿಯಂ, ಸೆಮಿನಾರ್ ಕೂಡ ಆಗಿದೆ. ಈ ಗ್ರಾಮ ಪಂಚಾಯ್ತಿಯಿಂದ ಹಿಡಿದು, ಪಾರ್ಲಿಮೆಂಟ್‌ವರೆಗೆ, 4 ಲಕ್ಷ ಚುನಾಯಿತ ಸ್ಥಾನಗಳಿವೆ. ಈ 4 ಲಕ್ಷ ಚುನಾಯಿತ ಸ್ಥಾನಗಳನ್ನು ನಾವು ಲಕ್ಷ್ಯದಲ್ಲಿಟ್ಟುಕೊಂಡು, ಈ ನಿರುತ್ತೇಜನಕ ಕ್ರಮವನ್ನು ನಾವು ಜಾರಿಗೆ ತಂದರೆ, ಯಾರಿಗೆ ಎರಡು ಮಕ್ಕಳು ಇರುತ್ತವೆ, ಯಾವ ವ್ಯಕ್ತಿಗೆ ಇಬ್ಬರು ಮಕ್ಕಳು ಇರುತ್ತವೆ, ಇವರಿಗೆ ಮಾತ್ರ ಚುನಾವಣೆಗೆ ನಿಲ್ಲುವುದಕ್ಕೆ ಪರವಾನಗಿ ಕೊಡಬೇಕು. ಎರಡಕ್ಕಿಂತ ಹೆಚ್ಚು ಮಕ್ಕಳಿದ್ದವರು ಚುನಾವಣೆಗೆ ನಿಲ್ಲುವುದಕ್ಕೆ ಪರವಾನಗಿಯನ್ನು ಕೊಡಬಾರದು. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಸೆಮಿನಾರ್ ಮತ್ತು ಸಿಂಪೋಸಿಯಂನಲ್ಲಿ. ಒಂದುಸಲ ಅಖಿಲ ಭಾರತ ಮಟ್ಟದಲ್ಲಿ ನಿರ್ಣಯ ಕೂಡ ಆಗಿದೆ. ಈ ರೀತಿಯ ಕಾರ್ಯಕ್ರಮ ಹಾಕಿಕೊಳ್ಳಬೇಕಾದರೆ, ಇದಕ್ಕೆ ಪೊಲಿಟಿಕಲ್ ವಿಲ್ ಬೇಕಾಗುತ್ತದೆ. ಒಂದು ವೇಳೆ ಪೊಲಿಟಿಕಲ್ ವಿಲ್ ಇದ್ದಿದ್ದೇ ಆದರೆ, ಇದನ್ನು ನಾವು ಜಾರಿಗೆ ತರಬಹುದು. ಇದು ನಮ್ಮ ಕೈಯಲ್ಲಿದೆ. ಇದರಲ್ಲಿ ಯಾರಿಗೂ ಕಡ್ಡಾಯ ಮಾಡತಕ್ಕಂಥಾದ್ದು, ಯಾರಿಗೂ ಬಿಡತಕ್ಕಂಥಾದ್ದು ಪ್ರಶ್ನೆಯೇ ಬರುವುದಿಲ್ಲ. ಇನ್ನೊಂದು ಕಡ್ಡಾಯ ಶಸ್ತ್ರಚಿಕಿತ್ಸೆ, ಯಾವ ವಿಧಾನವನ್ನು ಚೈನಾ ದೇಶದಲ್ಲಿ ಅಳವಡಿಸಿದ್ದಾರೆ, ಅಲ್ಲಿ ಒಂದು ಮಗು ಹುಟ್ಟಿದರೆ ಕಡ್ಡಾಯ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಆದಕ್ಕಾಗಿಯೇ 15 ವರ್ಷದಲ್ಲಿಯೇ ಅಲ್ಲಿ ಜನಸಂಖ್ಯೆ ಏರಿಕೆ ಪ್ರಮಾಣ, ಶೂನ್ಯ ಪ್ರಮಾಣಕ್ಕೆ ಬಂದು ಮುಟ್ಟಿದೆ. ಇಲ್ಲದೇ ಹೋದರೆ, ನಾವು ಎಷ್ಟು ಕೋಟಿ ರೂಪಾಯಿ ಖರ್ಚುಮಾಡಿ ದರೂ, ಎಷ್ಟು ಅಭಿವೃದ್ಧಿ ಮಾಡಿದರು ಕೂಡ ಹೆಚ್ಚತಕ್ಕ ಜನಸಂಖ್ಯೆಯೇ ಅದನ್ನು ತಿಂದುಹಾಕಿಬಿಡುತ್ತದೆ. ಆದಕ್ಕಾಗಿ ಗಣನೀಯವಾಗಿ ಜನರ ಗುಣಮಟ್ಟವನ್ನು ಮೇಲೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. prevention of diseases, ಅದರಲ್ಲಿ ಕೆಲವು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಜನರಿಗೆ, ಗ್ರಾಮಾಂತರ ಜನರಿಗೆ, ಬಡಜನರಿಗೆ ಕಾಡತಕ್ಕಂಥ ಕೆಲವ ರೋಗಗಳಿವೆ. ಕ್ಷಯರೋಗ, ಮಲೇರಿಯಾ, ಲೆಪ್ರಸಿ, ಕುರುಡುತನ ಏಕೆಂದರೆ, ವಿಟಮಿನ್ ಎ ಅಂಡ್ ಡಿ, ಇರುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇನ್ನೊಂದು ಏಡ್ಸ್ ಎಂಬ ರೋಗ ಬಂದಿದೆ. ಈ ಏಡ್ಸ್ ರೋಗ ಎಷ್ಟು ಭಯಂಕರವಾಗಿ ಹಬ್ಬಿದೆ ಎಂದರೆ, 1986 ರಲ್ಲಿ ಕೇವಲ 7-8 ಜನ ರೋಗಿಗಳು ಇದ್ದರು ಈ ದೇಶದಲ್ಲಿ. ಈ 10 ವರ್ಷದಲ್ಲಿ ಅಂದಾಜು ಮಾಡಲಾಗಿದೆ, 3 ಮಿಲಿಯನ್ ಅಂದರೆ 30 ಲಕ್ಷ ಏಡ್ಸ್ ರೋಗಿಗಳು ಭಾರತ ದೇಶದಲ್ಲಿದ್ದಾರೆ. ಅಂದಮೇಲೆ, ಇದು ಯಾವ ಪ್ರಮಾಣದಲ್ಲಿ ಈ 10 ವರ್ಷದಲ್ಲಿ ಬೆಳೆದಿದೆ, ನಾನು ಆರೋಗ್ಯಮಂತ್ರಿ ಇದ್ದಾಗ, Frankfurt Symposium ನಲ್ಲಿ ಒಂದು ಸಿಂಪೋಸಿಯಂ ಆಗಿತ್ತು. ಅದರಲ್ಲಿ ನಾನು ಭಾಗವಹಿಸಿದ್ದೆ. ಬ್ರಿಟೀಷ್ ಎಕ್ಸ್‌ಪರ್ಟ್ಸ್ ಪ್ರಕಾರ, ಇನ್ನೊಂದು 10 ವರ್ಷದಲ್ಲಿ one-third of the Indian population may be wiped out by this disease.

one-third of the population will either be incapacitated to work or they will be useless parasites on the society or majority of them will die of one disease or the other. ಇದನ್ನು ಬ್ರಿಟೀಷ್ ಎಕ್ಸ್‌ಪರ್ಟ್ಸ್ ತಮ್ಮ ಭಾಷಣದಲ್ಲಿ 1994 ರಲ್ಲಿ ಹೇಳಿದ್ದರು. ನನಗೆ ಬಹಳ ದುಃಖವಾಗುತ್ತದೆ. ಏಕೆಂದರೆ ಒಂದು ಸಾರಿ ಏಯಡ್ಸ್ ಬಂತು ಅಂದರೆ ಅದಕ್ಕೆ ಔಷಧಿ ಇಲ್ಲ. ಇದರ ಪ್ರತಿಬಂಧಕ ಕಾರ್ಯಕ್ರಮ ವನ್ನು ಹಾಕಿಕೊಳ್ಳುವುದರಲ್ಲಿ ಕೂಡ ನಾವು ಬಹಳ ನಿರ್ಲಕ್ಷ್ಯ ವಹಿಸಿ ದ್ದೇವೆ. ಕೇಂದ್ರ ಸರ್ಕಾರದವರು ಇದಕ್ಕೆ ನೂರಕ್ಕೆ ನೂರು ಪರ್ಸೆಂಟ್‌ನಷ್ಟು ಗ್ರಾಂಟ್ ಕೊಡುತ್ತಾರೆ. ಇದಕ್ಕೆ ಯಾವ ರೀತಿಯ ಅಧಿಕಾರಿಗಳು ಇರಬೇಕು ಯಾವ ರೀತಿಯ ಸಿಬ್ಬಂದಿ ಇರಬೇಕು ಎನ್ನುವುದನ್ನು ಕೂಡ ಅವರೇ ಹೇಳಿ ಕೊಟ್ಟಿರುತ್ತಾರೆ. ಯಾವ ರೀತಿಯ ಉಪಕರಣಗಳು ಬೇಕು ಯಾವ ಸವಲತ್ತುಗಳು ಬೇಕು ಅವೆಲ್ಲದ್ದಕ್ಕೂ ನಾವು ನೂರು ಪರ್ಸೆಂಟ್ ಖರ್ಚು ಕೊಡುತ್ತೇವೆಂದು ಹೇಳಿದರೂ ಕೂಡ ಪೂರ್ಣ ಪ್ರಮಾಣದ ಹಣ ಖರ್ಚು ಮಾಡುವುದಕ್ಕೆ ಆಗಿಲ್ಲ. ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಆಗಿಲ್ಲ. ಈ ವರ್ಷ ಕೇಂದ್ರ ಸರ್ಕಾರದವರು ಮೂರುವರೆ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಎಷ್ಟು ಖರ್ಚು ಮಾಡುತ್ತಾರೋ ನೋಡಬೇಕು. ಪ್ರತಿಯೊಂದು ಕಡೆ ಸಿನಿಮಾ ಭಿತ್ತಿಚಿತ್ರಗಳು ಕಾಣುತ್ತವೆಯೇ ಹೊರತಾಗಿ ಏಯಡ್ಸ್ ಇಂತಹ ಮಾರಕ ರೋಗ ಈ ಬಗ್ಗೆ ನಮಗೆ ಒಂದೂ ಭಿತ್ತಿಚಿತ್ರಗಳು ಕಾಣುತ್ತಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ ಕೇಂದ್ರ ಸರ್ಕಾರದವರು; ಏತಕ್ಕೆ ಕೊಟ್ಟಿದ್ದಾರೆ ಅವರು? ಇತ್ತೀಚಿನ ದಿನಗಳಲ್ಲಿ ಜನಗಳಲ್ಲಿ ಕೀಳು ಮಟ್ಟದ ಸಿನಿಮಾದ ಅಭಿರುಚಿ ಇದೆ. ಕೀಳು ಮಟ್ಟದ ಸಿನಿಮಾಗಳಲ್ಲಿ ಹೆಚ್ಚು ಅಭಿರುಚಿ ಇರುವುದರಿಂದ ದೂರದರ್ಶನದಲ್ಲಿ ಸ್ಕ್ರೀನ್ ಮೇಲೆ ತೋರಿಸುವುದರಿಂದ ನಮ್ಮ ಯುವ ಕರಲ್ಲಿ ನೈತಿಕ ಅಂಧಃಪತನವಾಗಿದೆ ಅದಕ್ಕಾಗಿ ಅವರಲ್ಲಿ ಸ್ವೇಚ್ಛಾಚಾರ ಹೆಚ್ಚಾಗಿದೆ. ಇದನ್ನು ನಾವು ತಿಳಿದುಕೊಳ್ಳಬೇಕು. ಅದಕ್ಕಾಗಿ ಯಾವ ರೀತಿಯಲ್ಲಿ ಈ ನೈತಿಕ ಅಂಧಃಪತನ ಹೆಚ್ಚಾಗಿದೆ ಇದನ್ನು ನಾವು ತಿಳಿದುಕೊಳ್ಳಬೇಕು. ಅದಕ್ಕಾಗಿ ಯಾವ ರೀತಿಯಲ್ಲಿ ಈ ನೈತಿಕ ಅಂಧಃಪತನ ಹೆಚ್ಚಾಗಿದೆ ಅದೇ ಪ್ರಮಾಣದಲ್ಲಿ ನಾವು ಈ ಏಯಡ್ಸ್ ರೋಗದ ನಿವಾರಣೆಗಾಗಿ ಭಿತ್ತಿಚಿತ್ರಗಳು ಇವೆ; ಲಿಟರೇಚರ್ ಇದೆ ಅದನ್ನು ಕೂಡ ನಾವು ಹೆಚ್ಚು ಮಾಡಬೇಕು. ಆಗ ಮಾತ್ರ ನಾವು ಈ ರೋಗವನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಇಲ್ಲದಿದ್ದರೆ ಈ ರೋಗವನ್ನು ತಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ತಡೆಗಟ್ಟಲಿಕ್ಕೆ ಇದರ ಬಗ್ಗೆ ಎಚ್ಚರಿಕೆಯನ್ನು ವಹಿಸುವುದಕ್ಕೆ ನಾವು ಏನು ಮುಂಜಾಗ್ರತಾ ಕ್ರಮವನ್ನು ವಹಿಸಿಕೊಳ್ಳಬೇಕು; ಮೊದಲು ಆ ರೋಗವನ್ನು ಗುರುತಿಸಬೇಕು. ಆ ರೀತಿ ಗುರುತಿಸತಕ್ಕಂಥ ಕೇಂದ್ರಗಳನ್ನು ನೋಡಿ ದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಇವರು ಯಾವ ರೀತಿ ಪ್ಲಾನ್ ಮಾಡು ತ್ತಾರೋ ನನಗೆ ಗೊತ್ತಿಲ್ಲ. ಮೂರು ಸೆಂಟರ್ಸ್ ಸಹ ದಕ್ಷಿಣ ಕರ್ನಾಟಕದಲ್ಲಿಯೇ ಇವೆ. ಎರಡು ಬೆಂಗಳೂರಿನಲ್ಲಿವೆ ಇನ್ನೊಂದು ಮಂಗಳೂರಿನಲ್ಲಿದೆ. ಬೀದರ್‌ನಿಂದ ಹಿಡಿದು ಎಲ್ಲಾ ರಕ್ತದ ಸ್ಯಾಂಡಲ್ಸ್ ಇರುತ್ತವೆಯೋ ಅವು ಈ ಸೆಂಟರ್ಸ್‌ಗೆ ತಪಾಸಣೆಗಾಗಿ

ಬರಬೇಕು. ಇದು ಯಾವ ರೀತಿಯ ಆಡಳಿತ ವ್ಯವಸ್ಥೆಯೋ ನನಗಂತೂ ಅರ್ಥವಾಗುತ್ತಿಲ್ಲ. ನಾನು ಆರೋಗ್ಯ ಮಂತ್ರಿ ಇದ್ದಾಗ ಇದನ್ನು ಸರಿಪಡಿಸಬೇಕು ಎಂದು ತಿಳಿದುಕೊಂಡು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರಿಲಿಮಿನರಿ ಟೆಸ್ಟ್ ಕನ್‌ಫರ್‌ಮೇಷನ್ ಪ್ರತಿಯೊಂದೂ ಜಿಲ್ಲಾ ಆಸ್ಪತ್ರೆಯಲ್ಲಿ ಈ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ಯೋಚನೆ ಮಾಡುತ್ತಿದ್ದೆ, ಅದು ಅಲ್ಲಿಗೇ ಹೋಯಿತು; ಈಗ ಪುನಃ ಅದೇ ವ್ಯವಸ್ಥೆಯಲ್ಲಿಯೇ ಇದೆ. ಅದಕ್ಕೆ ಕೆಲವು ಕಾರಣಗಳನ್ನು ಹೇಳುತ್ತಾರೆ. ಅದಕ್ಕೆ ಸ್ವಲ್ಪ ಹಣ ಖರ್ಚಾಗುತ್ತದೆಂದು ತಿಳಿದುಕೊಂಡು ಇದಕ್ಕೆ ಹಣ ಕೇಂದ್ರ ಸರ್ಕಾರದಿಂದ ಎಷ್ಟು ಕೊಡುತ್ತಾರೋ ಕೊಡಲಿ ಇನ್ನುಳಿದ ಹಣವನ್ನು ನಾವು ಸ್ಟೇಟ್ ಗೌರ್ನಮೆಂಟ್‌ನಿಂದ ಖರ್ಚುಮಾಡೋಣ. ಇವತ್ತು ನಿಮ್ಹಾನ್ಸ್‌ನಿಂದ ನನ್ನ ವೈದ್ಯ ಮಿತ್ರರೊಬ್ಬರು ನನ್ನ ರೂಮಿಗೆ ಬಂದಿದ್ದರು. ಮೊದಲು ಮೆನೆನ್‌ಜೈಟೀಸ್‌ನಲ್ಲಿ ಟಿ.ಬಿ. ಮೆನೆನ್‌ಜೈಟೀಸ್ ಬಹಳ ಕಾಮನ್ ಇತ್ತು. ಸಾಮಾನ್ಯವಾಗಿ ನಾವು ಟಿ.ಬಿ. ಮೇಲೆ ಮೆನೆನ್‌ಜೈಟೀಸ್ ಎಷ್ಟು ಇತ್ತು ಎಂದು ನೋಡುತ್ತಿದ್ದೆವು. ಸಣ್ಣ ಮಕ್ಕಳಲ್ಲಿ ಮೆನೆನ್‌ಜೈಟೀಸ್ ಇರುತ್ತಿತ್ತು. ಈಗ ಈ ನಿಮ್ಹಾನ್ಸ್‌ನಲ್ಲಿ ಇವತ್ತು ನಾಲ್ಕು ಈ ಏಯಡ್ಸ್ ಮೆನೆನ್‌ಜೈಟೀಸ್ ಇತ್ತು ಎಂದು ಅವರು ನನಗೆ ಹೇಳಿದರು. ಆಗ ನನಗೆ ಬಹಳ ಗಾಭರಿ ಆಯಿತು. ಇಂತಹವು ಒಂದು ವರ್ಷದಲ್ಲಿ ನಾವು 8 ಗುರುತು ಮಾಡಿದ್ದೇವೆ. ಈಗ ಸಧ್ಯ 4 ಆಸ್ಪತ್ರೆಯಲ್ಲಿವೆ ಎಂದು ಅವರು ನನಗೆ ಹೇಳಿದರು. ಅದು ಅಷ್ಟು ಸುಲಭವಾಗಿ ಡಯಾಗನೈಸ್ ಮಾಡತಕ್ಕಂಥ ರೋಗವಲ್ಲ ಅದು. ಅದಕ್ಕೆ ಸರ್ವಿಲೆನ್ಸ್ ಮಾಡಬೇಕಾಗುತ್ತದೆ. ನಾವು ಸ್ಯಾಂಪಲ್ಸ್ ನೋಡ ಬೇಕಾಗುತ್ತದೆ. ಮತ್ತು ನಮ್ಮ ಜನರು ಬಹಳ ಬಡವರು, ಎಲ್ಲರೂ ಒಳ್ಳೆಯ ನರ್ಸಿಂಗ್ ಹೋಮ್‌ಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಈಗ ನೀವು ದೊಡ್ಡ ದೊಡ್ಡ ಟೀಚಿಂಗ್ ಆಸ್ಪತ್ರೆಗಳಿಗೆ ಹೋದರೂ ಕೂಡ ಒಂದೇ ನೀಡಲ್‌ನ್ನು ತಾವು ಓ.ಪಿ.ಡಿ.ಯಲ್ಲಿ ನೋಡಬಹುದು ಒಂದೇ ನೀಡಲ್‌ಅನ್ನು ಸುಮಾರು 70-80 ರೋಗಿಗಳಿಗೆ ಉಪಯೋಗ ಮಾಡುತ್ತಾರೆ. ಏಯ್ಡ್ ರೋಗ ಬಂದವನಿಗೆ ನೀಡಿದ ಇಂಜಂಕ್ಷನ್‌ನಿಂದ ಅದನ್ನು ಸರಿಯಾಗಿ ತೊಳೆಯದೆ ಇನ್ನೊಬ್ಬ ರೋಗಿಗೆ ಚುಚ್ಚಿದಾಗ ಈ ಏಯ್ಡ್ಸ್ ರೋಗ ಬರುತ್ತದೆ. ಆ ಖಾಯಿಲೆ ಇರುವ ರೋಗಿಗೆ ಅದೇ ನೀಡಲ್‌ನಿಂದ ಇಂಜಂಕ್ಷನ್ ಕೊಟ್ಟರೆ ಆ ರೋಗ ಇನ್ನೊಬ್ಬರಿಗೆ ಟ್ರಾನ್ಸ್‌ಫರ್ ಆಗುತ್ತದೆ. ಮತ್ತು ಲೈಂಗಿಕ ಕ್ರಿಯೆಯಿಂದ ಕೂಡ ಇದು ಟ್ರಾನ್ಸ್‌ಫರ್ ಆಗುತ್ತದೆ. ಈ ತಿಳುವಳಿಕೆ ಕಾರ್ಯಕ್ರಮವನ್ನು ನಾವು ಬಹಳ ತುರ್ತಾಗಿ ತೆಗೆದುಕೊಂಡು ಈ ತಿಳುವಳಿಕೆಯನ್ನು ಭಿತ್ತಿಪತ್ರಗಳ ಮೂಲಕ ಟಿ.ವಿ.ಗಳ ಮೂಲಕ ರೇಡಿಯೋಗಳ ಮೂಲಕ ಎಷ್ಟೇ ಹಣ ಖರ್ಚಾಗಲಿ ತಾವು ಪ್ರಚುರಗೊಳಿಸಬೇಕಾಗುತ್ತದೆ. ಆ ಕೆಲಸ ತಾವು ಮಾಡುತ್ತಿಲ್ಲ. ಅದರಲ್ಲಿ ನಾವು ಹಿಂದೆ ಬಿದಿದ್ದೇವೆ ಎನ್ನುವ ಕಾರಣದಿಂದ 10 ವರ್ಷಗಳಲ್ಲಿ 30 ಲಕ್ಷ ಏಯ್ಡ್ ರೋಗಿಗಳಿಗೆ ಇವತ್ತು ನಮ್ಮ ದೇಶದ ಜನರು ತುತ್ತಾಗಿದ್ದಾರೆ. ಈ ಭೀಕರ ಪರಿಸ್ಥಿತಿಯನ್ನು, ಮತ್ತು ಬ್ರಿಟಿಷರು ಯಾವಾಗಲೂ ಒಳ್ಳೆಯ ಮಾತು ಹೇಳುವುದಿಲ್ಲ ಅವರು. ಬ್ರಿಟೀಷ್ ಸೈನ್‌ಟಿಸ್ಟ್ ಕ್ರಾಫ್ಟನ್ ಬಂದಿದ್ದರು. ಆ ಸಮ್ಮೇಳನದಲ್ಲಿ ನಾನೊಬ್ಬನೇ ಆರೋಗ್ಯ ಮಂತ್ರಿ ಇದ್ದದ್ದು. ಅವರು ಆಗ

ಕೇಳಿದರು. ``What is wrong with you people? You say you are a doctor and you are a Minister. Why can't you take special interest and see that this dreaded disease is prevented because not only it is incurable but it totally incapacitates individuals once it affects. ಎಂದು ನಾನು ಎಲ್ಲಾ ಗೌರ್ನಮೆಂಟ್ ಜನರಲ್ ಆಸ್ಪತ್ರೆಗಳಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡಿದ್ದೇನೆ. ನೀವು ಓ.ಪಿ.ಡಿಗೆ ಹೋಗಿ 100 ರೋಗಿಗಳಲ್ಲಿ 10 ಜನ ಟಿ.ಬಿ. ರೋಗಿಗಳು ಇರುತ್ತಾರೆ. 50% of the doctors' practice depends upon T.B. patients only. ನಮ್ಮ ಪ್ರೈಯಾರಿಟಿಯಲ್ಲಿ ಕೂಡ ನೋಡಿ. 50 ಪರ್ಸೆಂಟ್ ಟಿ.ಬಿ ರೋಗಿಗಳೇ ಇರುತ್ತಾರೆ. ಅದರಲ್ಲಿ ಮತ್ತೆ ಈಗ ಈ ಏಯ್ಡ್ further complicates tuberculosis. ಅನೇಕ ಸಲ ನಾವು ನೋಡುತ್ತಿದ್ದೇವೆ. ಮೊದಲ ಕಾಲಕ್ಕೆ ಆ್ಯಂಟಿ ಟ್ಯುಬರ್‌ಕ್ಯುಲಿಸಿಸ್‌ಗೆ ಟ್ರೀಟ್‌ಮೆಂಟ್ ಕೊಟ್ಟರೆ ತಕ್ಷಣ ಗುಣಮುಖರಾಗುತ್ತಿದ್ದರು. ಈಗ ಎಂತಹ ಆಧುನಿಕ ಔಷಧಿಗಳನ್ನು ಕೊಟ್ಟರೂ ಕೂಡ ಕ್ಷಯ ರೋಗ ನಿವಾರಣೆ ಆಗುವುದು ಇರಲಿ ನಿಯಂತ್ರಣಕ್ಕೂ ಕೂಡ ಬರುವುದಿಲ್ಲ ಅದಕ್ಕೆ ಕಾರಣ ಇಷ್ಟೇ, ಈ ಏಯ್ಡ್ಸ್ ರೋಗ ಕೂಡ ಅದೇ ಮಾದರಿಯದ್ದೇ. ಈ ಏಯ್ಡ್ಸ್ ರೋಗ ಬಂತು ಅಂದರೆ ಈ ಕ್ಷಯ ರೋಗಕ್ಕೆ ಎಂತಹ ಉತ್ತಮವಾದ ಔಷಧಿಗಳನ್ನು ಉಪಯೋಗ ಮಾಡಿದರೂ ಕೂಡ ನಿಯಂತ್ರಣಕ್ಕೆ ಬರುವುದಿಲ್ಲ. ಆದ್ದರಿಂದ ನಾವು ಈ ದೃಷ್ಟಿಯಿಂದ ಆದರೂ ಸಹ ಬಹಳ ಜಾಗ್ರತೆ ವಹಿಸಿ ಈ ಏಯ್ಡ್ಸ್ ಖಾಯಿಲೆಯನ್ನು ಕಂಡು ಹಿಡಿಯುವುದಕ್ಕೆ, ಗುರುತಿಸುವುದಕ್ಕೆ ಈಗ ಕ್ಯೂಬಾದಲ್ಲಿ ಸಂಪೂರ್ಣವಾಗಿ ಕಂಟ್ರೋಲ್ ಮಾಡಿದ್ದಾರೆ. ನಮ್ಮಲ್ಲಿ ಅದರ ಗಾತ್ರ ಏರುತ್ತಿದೆ ಕ್ಯೂಬಾದಲ್ಲಿ ಕಡಿಮೆ ಮಾಡಿದ್ದಾರೆ. ಅವರು ಐಸೋಲೇಟ್ ಮಾಡುತ್ತಿದ್ದಾರೆ. ಅವರಿಗೆ ಅನುಕೂಲತೆಗಳನ್ನು ಕೊಡುತ್ತಿದ್ದಾರೆ. ಅವರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದಾರೆ. ಉತ್ತಮವಾದ ಆಹಾರವನ್ನು ಕೊಡುತ್ತಿದ್ದಾರೆ. ಅವರಿಗೆ ಅಲ್ಲ ಏನೇನು ಸವಲತ್ತುಗಳು ಬೇಕೋ ಆ ಎಲ್ಲಾ ಸವಲತ್ತುಗಳನ್ನು ಕೊಡುತ್ತಿದ್ದಾರೆ. ನಮಗೆ ಆ ಸವಲತ್ತುಗಳನ್ನು ಕೊಡಲಿಕ್ಕೆ ಆಗುತ್ತಿಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಈ ಮಾರಕ ರೋಗವಾದ ಏಯ್ಡ್ಸ್ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ನಮ್ಮ ಸಮಾಜದಲ್ಲಿ ಇದರ ಬಗ್ಗೆ ಹೆಚ್ಚು ತಿಳುವಳಿಕೆಯನ್ನು ಕೊಟ್ಟು ಇದರ ನಿವಾರಣೆಗೆ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ಸರ್ಕಾರ ಎಲ್ಲರೂ ಕೂಡ ಕಾಳಜಿ ವಹಿಸಿ ಪ್ರಯತ್ನ ಮಾಡಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ನಾನು ವೈದ್ಯಕೀಯ ಶಿಕ್ಷಣ ಇಲಾಖೆ ಬಗ್ಗೆ ಬರುತ್ತೇನೆ. ದುರ್ದೈವದಿಂದ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದು ಎರಡನೇ ಸಲ ಹೇಳುತ್ತಿದ್ದಾರೆ. ಏಕೆಂದರೆ ಅವರು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದಿದ್ದರೆ ಸರಿ ಎಂದು

ಹೇಳಿ, ಈಗ ಮೆಡಿಕಲ್ ಎಜುಕೇಷನ್ ಬಗ್ಗೆ ಮಾತನಾಡುತ್ತಿದ್ದಾರೆ. ಇವತ್ತು ಏಕೋ ಏನೋ ಸದನದಲ್ಲಿ ಸ್ವಲ್ಪ ಸರಿ ಇಲ್ಲ ಎಂದು ಕಾಣುತ್ತದೆ. ಎಜ್ಯುಕೇಷನ್ ಬಗ್ಗೆ ಮಾತನಾಡುವಾಗ ಎಜ್ಯುಕೇಷನ್ ಮಂತ್ರಿಗಳು ಇರಲಿಲ್ಲ. ಈಗ ಹೆಲ್ತ್ ಬಗ್ಗೆ ಮಾತನಾಡುವಾಗ ಹೆಲ್ತ್ ಮಂತ್ರಿಗಳು ಇಲ್ಲ. ಹೌಸಿಂಗ್ ಬಗ್ಗೆ ಮಾತನಾಡುವಾಗ ಹೌಸಿಂಗ್ ಮಂತ್ರಿಗಳು ಇರುವುದಿಲ್ಲ. ಈ ರೀತಿ ಆಗಿ ಸ್ವಲ್ಪ ವ್ಯತ್ಯಾಸ ಆಗುತ್ತಿವೆ. ಮಾನ್ಯ ಮುಖ್ಯಮಂತ್ರಿಗಳಿಗೆ ಹುಷಾರಿಲ್ಲ. ಇವರು ರಾತ್ರಿ ಎಲ್ಲ ಕೆಲಸ ಮಾಡಿ ಏಕೋ ಸ್ವಲ್ಪ ದಣಿದಂತೆ ಆಗಿದ್ದಾರೆ. ಅದಕ್ಕೆ ಇವರೂ ಸಹ ಸ್ವಲ್ಪ ಲಕ್ಷ್ಯ ಕೊಡುತ್ತಿಲ್ಲ. ಬೇರೆ ಮಂತ್ರಿಗಳು ಸ್ವಲ್ಪ ಆ ಕಡೆ ಈ ಕಡೆ ವರ್ಗಾವಣೆಯಲ್ಲಿ ಬಿಜಿ. ಇನ್ನು ಇಬ್ಬರು ಮಂತ್ರಿಗಳು. ಅದಕ್ಕೆ ಮಾನ್ಯ ಅಧ್ಯಕ್ಷರೇ, ಅವರು ತಮ್ಮ ಕಡೆಗೆ ಹೆಚ್ಚುಗಮನ ಕೊಡುತ್ತಿದ್ದಾರೆ.

ಡಾ : ಎ. ಬಿ. ಮಲಕರೆಡ್ಡಿ :- ಮಾನ್ಯ ಅಧ್ಯಕ್ಷರೇ, ನಾನು ಆರೋಗ್ಯ ಮಂತ್ರಿಗಳ ಇಲಾಖೆ ಬಗ್ಗೆ ಮಾತನಾಡಿ ಮುಗಿಸಿದ್ದೇನೆ. ತಾವು ತಮ್ಮ ಸಹೋದ್ಯೋಗಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬಹುದು. ಈಗ ನಾನು ಮೆಡಿಕಲ್ ಎಜ್ಯುಕೇಷನ್ ಬಗ್ಗೆ ಮಾತನಾಡುತ್ತೇನೆ. ನನಗೆ ತಿಳಿದ ಮಟ್ಟಿಗೆ ಆರೋಗ್ಯ ಇಲಾಖೆ ಬಗ್ಗೆ ಏನಾದರೂ ಕುಂದುಕೊರತೆಗಳು ಇದ್ದರೆ ಅದನ್ನು ಕ್ಷಮೆ ಮಾಡಬಹುದು. ಆ ಇಲಾಖಾ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ, ಆದರೆ ಮೆಡಿಕಲ್ ಎಜ್ಯುಕೇಷನ್ ಸಂಸ್ಥೆಗಳ ಬಗ್ಗೆ ಲೋಪದೋಷಗಳು ಇದ್ದರೆ ಯಾರೂ ಕ್ಷಮೆ ಮಾಡುವಂತಾದ್ದು ಅಲ್ಲ. ಅದಕ್ಕೆ ಕ್ಷಮೆಯೇ ಇಲ್ಲ. ನನಗೆ ಇದು ಅರ್ಥವಾಗುತ್ತಿಲ್ಲ ಕೇವಲ 4 ಮೆಡಿಕಲ್ ಕಾಲೇಜುಗಳಿಗೋಸ್ಕರ ಒಳ್ಳೆಯ ಆಡಳಿತ ವ್ಯವಸ್ಥೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಿಮ್ಮ ಡೈರೆಕ್ಟರ್ ಏನು ಕೆಲಸ ಮಾಡುತ್ತಿದ್ದಾರೆ? ಜಾಯಿಂಟ್ ಡೈರೆಕ್ಟರ್ ಇದ್ದಾರೆ ಅವರಿಗೆ ಡೆಪ್ಯುಟಿ ಡೈರೆಕ್ಟರ್ ಇದ್ದಾರೆ. What good they are doing I just want to know. ಅವರಿಗೆ ಏನು ತೊಂದರೆ ಇದೆ? ಅವರಿಗೆ ಏನು ಕೊರತೆ ಇದೆ? ಇವರು ಪತ್ರಿಕೆಗಳಲ್ಲಿ ಅಡ್ವರ್‌ಟೈಸ್‌ಮೆಂಟ್ ಕೊಟ್ಟುಬಿಟ್ಟರೆ ಒಳ್ಳೆಯದು. ಈ 4 ಕಾಲೇಜುಗಳನ್ನು ನಾವು ಸರಿಯಾಗಿ ಮೆಂಟೈನ್ ಮಾಡುವುದಕ್ಕೆ ಆಗುತ್ತಿಲ್ಲ ಗುಣಮಟ್ಟದ ಸೇವೆ ಕೊಡಲಿಕ್ಕೆ ಆಗುತ್ತಿಲ್ಲ ಗುಣಮಟ್ಟದ ಶಿಕ್ಷಣ ಕೊಡಲಿಕ್ಕೆ ಆಗುತ್ತಿಲ್ಲ. ಇವುಗಳನ್ನು ಪ್ರೈವೇಟ್‌ನವರು ಯಾರಾದರೂ ಇದ್ದರೆ ತೆಗೆದುಕೊಳ್ಳುವುದಕ್ಕೆ ಮುಂದೆ ಬನ್ನಿ ಎಂದು. ನಾಚಿಕೆ ಆಗಬೇಕು ಸರ್ಕಾರಕ್ಕೆ. ಈ 4 ಸಂಸ್ಥೆಗಳಿಗೆ ಒಬ್ಬ ಮಂತ್ರಿ ಇದಕ್ಕೆ ಒಂದು ಡಿಪಾರ್ಟ್‌ಮೆಂಟ್. ಈ 4 ಸಂಸ್ಥೆಗಳನ್ನು ಸರಿಯಾಗಿ ಮ್ಯಾನೇಜ್ ಮಾಡುವುದಕ್ಕೆ ಆಗುತ್ತಿಲ್ಲ. ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಒಂದು ಮಾದರಿಯಾಗಿ ಕೆಲಸ ಮಾಡುವಂತಿರಬೇಕು. They are the highest institutions in the State. They should be in a position to lead to other institutions. They should serve as models. ಇವತ್ತು ಏನು ನಡೆದಿದೆ? ಪ್ರಾಥಮಿಕ ಶಾಲೆಯಲ್ಲಿ

ವಿದ್ಯಾರ್ಥಿಗಳ ಪ್ರವೇಶಕ್ಕೆ ಒಂದು ಪ್ರಾವಿತ್ರ್ಯತೆ ಇದೆ. There is some sanctity in respect of admissions of studetns to Primary Schools but there is no sanctity in respect of admissions to medical institutions. 12 ತಿಂಗಳೂ ಪ್ರವೇಶವಾಗುತ್ತದೆ. ಇದರಿಂದ ಸರ್ಕಾರಕ್ಕೆ ನಾಚಿಕೆಯಾಗುವುದಿಲ್ಲವೇ? 5 ವರ್ಷ ಕಾಂಗ್ರೆಸ್ ಗೌರ್ನಮೆಂಟಿನಲ್ಲಿ ಏನು ಮಾಡಲಾಯಿತೆಂದು ಅವರು ಹೇಳಬಹುದು, ಆಗಲೂ ಇದರ ಬಗ್ಗೆ ಮಾತನಾಡಿದ್ದೇನೆ. ಇದರ ಬಗ್ಗೆ ಹೋದ ಸಲ ಮಾನ್ಯ ಸಿಂಧ್ಯಾರವರು ಮಾತನಾಡಿದ್ದಾಗ ನಾನು ಮಂತ್ರಿಯಾಗಿದ್ದುಕೊಂಡು ಉತ್ತರ ಕೊಟ್ಟಿದ್ದೇನೆ. ಮೆಡಿಕಲ್ ಅಡ್ಮಿಷನ್ ಆಗಸ್ಟ್ 15ನೇ ತಾರೀಖಿನ ಒಳಗೆ ಮುಗಿಯಬೇಕು, ಪಿ.ಜಿ.ಕೋರ್ಸ್‌ಗೆ ಸೆಪ್ಟೆಂಬರ್ 15 ನೇ ತಾರೀಖಿನ ಒಳಗೆ ಮುಗಿಯಬೇಕು, ಆದರೆ, ನಿರಂತರವಾಗಿ ವರ್ಷದ 12 ತಿಂಗಳೂ ಆಡ್ಮಿಷನ್ಸ್ ನಡೆಯುತ್ತಲೇ ಇರುತ್ತದೆ. ಇದರ ಬಗ್ಗೆ ಯಾರೂ ಪ್ರಶ್ನೆ ಮಾಡುವುದೇ ಇಲ್ಲ. ಪೋಷಕರು ಸಹ ತಮ್ಮ ಮಕ್ಕಳಿಗೆ 2 ರಿಂದ 15 ಲಕ್ಷ ರೂಪಾಯಿಗಳವರೆಗೆ ಹಣ ಕೊಟ್ಟು ಮೆಡಿಕಲ್ ಕೋರ್ಸ್‌ಗೆ ಸೇರಿಸಿದ ನಂತರ ತಮ್ಮ ಮಕ್ಕಳಿಗೆ ಅಲ್ಲಿ ಸರಿಯಾಗಿ ಪಾಠ ನಡೆಯುತ್ತದೆಯೇ ಇಲ್ಲವೇ ಎಂದೂ ನೋಡುವುದಿಲ್ಲ, ಸಚಿವರ ಗಮನಕ್ಕೂ ಬರುವುದಿಲ್ಲ ಮತ್ತು ಸಚಿವರೂ ಆ ಕಡೆ ಗಮನ ಹರಿಸುವುದಿಲ್ಲ. ಹಾಗಾದರೆ ಸಚಿವರು ಏನು ಕೆಲಸ ಮಾಡುತ್ತಾರೆ? ಡೈರೆಕ್ಟರ್ ಏನು ಕೆಲಸ ಮಾಡುತ್ತಾರೆ? ಪ್ರತಿ ಸಲವೂ ಇಷ್ಟು ಅಡ್ಮಿಷನ್ ಮಾಡಿದೆವು, ಅದನ್ನು ರ್‍ಯಾಟಿಫೈ ಮಾಡಿದೆವು ಎಂಬ ಕೆಲಸ ಮಾಡುವುದೇ ಇವರದಾಗಿದೆ. ನಾನೂ ಸಹ ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಕ್ಷನಾಗಿದ್ದುಕೊಂಡು ಈ ಮಾತನಾಡುತ್ತಿದ್ದೇನೆ. ಈ ವ್ಯವಸ್ಥೆಯನ್ನು ದುರಸ್ತಿ ಮಾಡುವವರು ಯಾರು? ಅಲ್ಲಿರತಕ್ಕಂಥ ಡಾಕ್ಟರ್ಸ್, ಪ್ರೊಫೆಸರ್ಸ್, ಡೈರೆಕ್ಟರ್ ಯಾವ ರೀತಿ ಮಾರ್ಗದರ್ಶನ ಮಾಡುತ್ತಾರೆ? ವಿದ್ಯಾರ್ಥಿಗಳಿಗೆ ಯಾವ ಮಟ್ಟದಲ್ಲಿ ವಿದ್ಯಾಭ್ಯಾಸ ಸಿಕ್ಕುತ್ತಿದೆ? ಇವತ್ತು ಪರೀಕ್ಷೆಯಲ್ಲಿ ಪಾಸ್ ಆಗಬೇಕಾದರೆ ಹುಡುಗರು ರೊಕ್ಕವನ್ನು ಹಿಡಿದುಕೊಂಡು ಹೋಗುತ್ತಾರೆ. ಗೌರ್ನಮೆಂಟ್ ಕಾಲೇಜುಗಳಿಗಿಂತ ಖಾಸಗಿ ಸಂಸ್ಥೆಯವರು ಪರವಾಗಿಲ್ಲ ಎನ್ನುವ ಮಟ್ಟಿಗೆ ಬಂದಿದೆ. ಇದರ ಬಗ್ಗೆ ಬಹಳ ಜನ ಪ್ರಸ್ತಾಪ ಮಾಡಿದ್ದಾರೆ. ನಾನೂ ಸಹ ಪ್ರಸ್ತಾಪ ಮಾಡಿ ಮಾಡಿ ಸಾಕಾಗಿ ಮಾತನಾಡುವುದು ಉಪಯೋಗವಿಲ್ಲವೆಂದು ಸುಮ್ಮನಾಗಿದ್ದೇನೆ. At any given point of time in Bellary Medical College and Karnataka Medical College only, 15% or lowest staff is available and you have started post-graduation courses there. You have to hang your head in shame. These colleges are not fit enough to impart education to under-graduates and you start post-graduation courses there.

MR. Speaker :- Dr. Malaka Reddy, you were also a Minister. All these senior doctors are more stronger politically than you and

me. They will not accept the posting. It is to their pleasure, the Government gives them posting. It is not the pleasure of the Government to post them. They are in service not to serve the Government but to serve themselves. All succesive Governments have yielded for them and most of the time they indulge in private practice. Why our Government Colleges have become like this? We have the answer before us.

ಡಾ : ಎ.ಬಿ. ಮಲಕರೆಡ್ಡಿ :- ಮಾನ್ಯ ಅಧ್ಯಕ್ಷರೇ, ಅದನ್ನು ಒಪ್ಪಲಿಕ್ಕೆ ನಾನು ತಯಾರಿಲ್ಲ. ಇದಕ್ಕೆ ಮುಖ್ಯಮಂತ್ರಿಗಳ ಸಹಕಾರ ಬೇಕು ಅಷ್ಟೇ. ಮುಖ್ಯ ಮಂತ್ರಿಗಳ ಸಹಕಾರ ಇಲ್ಲವೆಂದರೆ, What is important? "Will is important. ಸಚಿವರಿಗಿಂಥಾ ದೊಡ್ಡವರು ಮುಖ್ಯಮಂತ್ರಿಗಳು ಇರುತ್ತಾರೆ. ಅವರಿಗೆ ಸಮಸ್ಯ ಬಗ್ಗೆ ತಿಳಿಸಿ ಕೊಡಲು ಸಾಧ್ಯವಾಗುವುದಿಲ್ಲವೇನು? ನಾನು ಆರೋಗ್ಯ ಮಂತ್ರಿಯಾಗಿದ್ದಾಗ ಒಂದು ಹೊಸ ಸ್ಕೀಮ್ ಇಂಟ್ರಡ್ಯೂಸ್ ಮಾಡುವ ಸಲುವಾಗಿ ಅದರ ಬಗ್ಗೆ ಮುಖ್ಯ ಮಂತ್ರಿಗಳಿಗೆ ಕನ್ವಿನ್ಸ್ ಮಾಡಲು ಅವರ ಮನೆಗೆ ಹತ್ತಾರು ಸಲ ಪರದಾಡಿದ್ದೇನೆ. ಅದಕ್ಕೆ ಅವರೂ ಕೂಡ ವಿರುದ್ಧವಾದ ಉಪದೇಶ ಕೊಡುವವರಿದ್ದರು. ಯಾವುದಾದರೂ ಒಳ್ಳೆಯದಾಗುವುದಿದ್ದರೆ, ಅದರ ಬಗ್ಗೆ ತಿಳಿಸಿಹೇಳುವುದು ಬಹಳ ಕಷ್ಟವಾಗುತ್ತದೇನು? ಹುಬ್ಬಳ್ಳಿ-ಧಾರವಾಡಕ್ಕೆ ಪೋಸ್ಟ್ ಮಾಡಿದರೆ ಯಾರೂ ಹೋಗುತ್ತಿಲ್ಲ, ಎಲ್ಲರೂ ಬೆಂಗಳೂರು, ಮೈಸೂರಿನಲ್ಲೇ ಕೆಲಸ ಮಾಡಬೇಕೆಂದು ಇಚ್ಛೆಪಡುತ್ತಾರೆ. ಕಳೆದ 5 ವರ್ಷಗಳಿಂದ ಬಳ್ಳಾರಿಯ ಮೆಡಿಕಲ್ ಕಾಲೇಜಿನಲ್ಲಿ ಇಬ್ಬರೇ ಕೆಲಸ ಮಾಡುತ್ತಿದ್ದಾರೆ. ಈ ಇಬ್ಬರೇ ಎಕ್ಸ್‌ಪಿರಿಮೆಂಟ್ ಮಾಡಬೇಕು, ಇನ್‌ವೆಸ್ಟಿಗೇಷನ್ ಮಾಡಬೇಕು, ಥಿಯರಿ ಕೆಲಸ ಮಾಡಬೇಕು ಜೊತಗೆ ಪೋಟ್ಸ್ ಗ್ರ್ಯಾಜುಯೇಟ್ ಇನ್ಸ್ಟಿಟ್ಯೂಷನ್ ಬೇರೆ Can such a thing is tolerated in any civilised society? If I were given the Medical Education portfolio, I could have shown. ಇದಕ್ಕೆಲ್ಲಾ ಮುಖ್ಯಮಂತ್ರಿಗಳ ಸಹಕಾರ ಬೇಕಾಗುತ್ತದೆಂದು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಸಹಕಾರ ಇದ್ದರೆ ಏಕೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಸವಾರಿ ಮಾಡುವವರು ಲಗಾಮು ಹಿಡಿದಿರಬೇಕು. ಇದರ ಬಗ್ಗೆ ನನಗಂತೂ ಅರ್ಥವೇ ಆಗುತ್ತಿಲ್ಲ.

ಅಧ್ಯಕ್ಷರು :- ನಾನು ಆಗಲೇ ಅದಕ್ಕೇ ಹೇಳಿದ್ದು, ಲಗಾಮು ಅವರ ಕೈಯಲ್ಲೇ ಇದೆ ಎಂದು. ಲಗಾಮನ್ನು ಮರೆತು ಇವರು ಅವರ ಕೈಯಲ್ಲೇ ಕೊಟ್ಟು ಬಿಟ್ಟಿದ್ದಾರೆ. ಇದು ವಿಷ ವರ್ತುಲ.

ಶ್ರೀ ವೈ. ರಾಮಕೃಷ್ಣ :- ಈಗ ಮಾನ್ಯ ಸದಸ್ಯರು ಬಹಳ ಉತ್ತಮವಾಗಿ ಭಾಷಣ ಮಾಡುತ್ತಿದ್ದಾರೆ. ಅದೂ ಅಲ್ಲದೆ ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳೂ

ಇಲ್ಲ. ಆದ್ದರಿಂದ ಅವರು ಭಾಷಣವನ್ನು ನಾಳೆಗೆ ಮುಂದುವರಿಸುವುದು ಒಳ್ಳೆಯದೆಂದು ನನ್ನ ಸಲಹೆ.

ಅಧ್ಯಕ್ಷರು :- ಇದು ಒಳ್ಳೆಯ ಸಲಹೆ. ಇದರ ಜೊತೆಗೆ ಮಾನ್ಯ ಅಧ್ವಾನಿಯವರ ಒಂದು ಸಭೆ ಇರುವುದರಿಂದ ತಾವು ಅಲ್ಲಿಗೆ ಹೋಗಬೇಕಾಗಿದೆ ಎಂಬುದದೂ ನನಗೆ ಗೊತ್ತಿದೆ. ಆದ್ದರಿಂದ ಮಾನ್ಯ ಡಾಕ್ಟರ್‌ರವರೇ, ತಾವು ನಾಳೆ ದಿವಸ ತಮ್ಮ ಭಾಷಣವನ್ನು ಮುಂದುವರಿಸಿ. ಈಗ ಒಂದು ನೋವಿನ ವಿಷಯ ಹೇಳುವುದೇನೆಂದರೆ, ಕೆಲವು ಮಾನ್ಯ ಸದಸ್ಯರುಗಳು ಹೌಸ್‌ಗೂ ಬರುತ್ತಿಲ್ಲ, ಸಿಗ್ನೇಚರ್ಸ್ ಹಾಕುತ್ತಿಲ್ಲ. ಅವರು ಗೈರು ಹಾಜರಾಗುವ ಬಗ್ಗೆ ನನ್ನ ಹತ್ತಿರ ಪರ್ಮಿಷನ್ನೂ ಕೇಳಿಲ್ಲ. ಅವರಿಗೆ ಏನು ತೊಂದರೆಯಾಗಿದೆಯೋ ಗೊತ್ತಿಲ್ಲ. ಮಾನ್ಯ ಸದಸ್ಯರಾದ ಬಾಬುರಾವ್ ರವರು, ಚನ್ನಿಗಪ್ಪನವರು, ಚೌಹಾನ್‌ರವರು, ಎಸ್. ಎಂ. ದೇಸಾಯಿಯವರು, ಎಸ್. ಜಯಣ್ಣನವರು, ಎ.ಆರ್. ಕೃಷ್ಣಮೂರ್ತಿಯವರು, ಮಾನ್ಯ ಶೇಟ್‌ರವರು, ಡಾ. ಮಹೇಶ್ ರವರು, ಪೂರ್ಣಮುತ್ತಪ್ಪನವರು, ರವಿಕಾಂತ್ ಪಾಟೀಲ್ (ಇವರಿಗೆ ನಾನು ಪತ್ರ ಬರೆದಿದ್ದೇನೆ) ವಸಂತ ಅಸ್ನೋಟಿಕರ್‌ರವರು ಮತ್ತು ವಸಂತ ಸಾಲೀಯಾನರವರು, ಇವರುಗಳ್ಯಾರೂ ಅಟೆಂಡೆನ್ಸ್‌ಗೆ ಸಹಿ ಹಾಕಿಲ್ಲ. ಇವರುಗಳು ಗೈರು ಹಾಜರಾಗುವ ಬಗ್ಗೆ ನನಗೆ ಬರೆದು ತಿಳಿಸಬೇಕಲ್ಲಾ? ಇವರಿಗೆ ಏನು ತೊಂದರೆಯಾಗಿದೆಯೋ ಗೊತ್ತಿಲ್ಲ. ಅವರೆಲ್ಲರೂ ನಮ್ಮ ಜೊತೆಯಲ್ಲಿ ಇದ್ದರೆ ಚೆನ್ನಾಗಿರುತ್ತದೆ ಎನ್ನುವ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಈಗ ಸದನವನ್ನು ಮುಂದೂಡಲಾಗುತ್ತದೆ. ಪುನಃ ನಾಳೆ ಬೆಳಿಗ್ಗೆ 10 ಗಂಟೆಗೆ ಸದನ ಸಮಾವೇಶಗೊಳ್ಳುತ್ತದೆ.

(ಸದನವು 6.09 ಗಂಟೆಗೆ ಮುಕ್ತಾಯಗೊಂಡು ಪುನಃ ನಾಳೆ (31-7-96) ರಂದು ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)